# ಕರ್ನಾಟಕ ವಿಕಾಸ

ಮಾರ್ಚ್ 2011

## ಹಿಂದುಳಿದ ತಾಲ್ಲೂಕುಗಳೆಂಬ ಹಣೆಪಟ್ಟಿ ಬೇಕಿಲ್ಲ
## 'ಗ್ರಾಮಸ್ವರಾಜ್' ಯೋಜನೆಯಡಿ ಅಭಿವೃದ್ಧಿಯೇ ಮುಂದೆಲ್ಲ

ಗ್ರಾಮಸ್ವರಾಜ್ ಯೋಜನೆಯ ವಿಶ್ವಬ್ಯಾಂಕ್ ಪ್ರತಿನಿಧಿಗಳೊಂದಿಗೆ ಸಮಾಲೋಚನಾ ಸಭೆಯಲ್ಲಿ ಹಿರಿಯ ಅಧಿಕಾರಿ ವೃಂದ



ಗ್ರಾಮಸ್ವರಾಜ್

ನಮ್ಮ ಗ್ರಾಮ. ನಮ್ಮ ನಿರ್ಧಾರ.



ಗ್ರಾಮಸ್ವರಾಜ್ ಮುಖ್ಯಸ್ಥರೊಂದಿಗೆ ವಿಶ್ವ ಬ್ಯಾಂಕ್ ಪ್ರತಿನಿಧಿಗಳು

# ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆ



ಮಾಗಡಿ ತಾಲ್ಲೂಕಿನ ಕಲ್ಯಾ ಗ್ರಾಮ ಪಂಚಾಯತಿಯ ಸದಸ್ಯರೊಂದಿಗೆ ವಿಶ್ವ ಬ್ಯಾಂಕ್ ಪ್ರತಿನಿಧಿಗಳು



ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಗ್ರಾಮಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿರುವ ಗ್ರಾಮಸ್ಥರು



ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಸಿಬ್ಬಂದಿ ಸಾಮರ್ಥ್ಯ ವೃದ್ಧಿಗಾಗಿ ತರಬೇತಿ

ಹಳ್ಳಿಗಳ ಸಾಮರ್ಥ್ಯ, ಸಬಲೀಕರಣದತ್ತ ದೃಢ ನಿಷ್ಠೆ
ಇದುವೇ ಗ್ರಾಮ ಸ್ವರಾಜ್ ಯೋಜನೆಯ ಕಾರ್ಯ ನಿಷ್ಠೆ




# ಕರ್ನಾಟಕ ವಿಕಾಸ


**ಮಾರ್ಚ್ 2011**

**ಸಂಪುಟ : 52** **ಸಂಚಿಕೆ : 4**



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**

## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಪಿ. ರವಿಕುಮಾರ್ |
| 7 | ಕಾರ್ಯದರ್ಶಿಗಳ ಆಶಯ | – ಜಿ.ಎಸ್. ನಾರಾಯಣ ಸ್ವಾಮಿ |
| 8 | ನುಡಿ ನಿರ್ಮಲ | |
| 9 | ಆಯವ್ಯಯ – 2011-12 | |
| 11 | ಲೇಖನಗಳು | – ಡಾ. ಎಂ.ಆರ್. ಏಕಾಂತಪ್ಪ |
| | | – ಡಾ. ಕೆ.ವಿ. ದೇವರಾಜುಲು, ವಿದ್ಯಾಶ್ರೀ ಎಸ್. ಪ್ರವೀಣ್ |
| | | – ಡಿ. ಜಯರಾಂ |
| | | – ಎಂ.ಬಿ. ಸಿಪಾಯಿ |
| | | – ನಾಗೇಶ್ ಎಂ.ವಿ. |
| | | – ಇನಾಯತ್ ಪಾಷ. ಎಸ್. |
| | | – ಎಂ.ವಿ. ಜಯಣ್ಣ |
| | | – ವಿದ್ಯಾಶ್ರೀ ಎಸ್. ಪ್ರವೀಣ್, ತಬಸುಂ ತಾಜ್, ಲಕ್ಷ್ಮಿ ಎನ್. |
| | | – ಭಾನುಪ್ರಕಾಶ್ ಮತ್ತು ನವೀನ್ ಕುಮಾರ್ |
| | | – ಶ್ರೀಮತಿ ಎಂ.ಸಿ. ಶೈಲಜ |
| | | – ವೇಣುಗೋಪಾಲ್. ಹೆಚ್. ಮತ್ತು ಸೌಮ್ಯ. ಆರ್. |
| | | – ಡಿ.ಎನ್. ರಾಮನಾಥ್ |
| | | – ಹನಮಂತಾಚಾರ. ಕೆ. ಆಲೂರು |
| 45 | ಕಾವ್ಯ ವಿಕಾಸ | – ಸತೀಶ್. ಎಸ್. |
| 46 | ಸುತ್ತೋಲೆಗಳು | |



**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/-

ಸಂಸ್ಥೆಗಳಿಗೆ ರೂ. 60/-

ಬಿಡಿ ಪ್ರತಿ ರೂ. 5/-

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**







ಮಾನ್ಯರೇ,

ಕರ್ನಾಟಕ ವಿಕಾಸ ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಡಾ|| ಪಾಟೀಲ ಪುಟ್ಟಪ್ಪನವರು ಬರೆದ ಲೇಖನ ಜಗತ್ತಿನಲ್ಲಿ ಕಪಟವಿಲ್ಲದ ಜೀವನವೇ ಶ್ರೇಷ್ಠ ಎಂಬ ಲೇಖನ ತುಂಬ ಚೆನ್ನಾಗಿದೆ. ಸಹ್ಯಾದ್ರಿಯ ನಾಡಿನಲ್ಲಿ ಸಂಪೂರ್ಣ ಸ್ವಚ್ಛತೆಯ ಕ್ರಾಂತಿ ಲೇಖನ ಓದಿ ತುಂಬ ಸಂತೋಷವಾಯಿತು.

– ಶ್ರೀಮತಿ ಕೆ.ಎಸ್. ಇಂದಿರಾ ಮಂಜುನಾಥ್
ಅಧ್ಯಕ್ಷರು,
ಮುಳುಬಾಗಿಲು ಗ್ರಾಮ ಪಂಚಾಯತ್
ದೂರ್ವಾಸಪುರಂ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.



ಫೆಬ್ರವರಿ ಸಂಚಿಕೆಯು ಸುಂದರ ಮುಖಪುಟದೊಂದಿಗೆ, ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಲೇಖನಗಳನ್ನು ಹೊತ್ತು ತಂದದ್ದು ಸಂತಸವಾಯಿತು. ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ 'ಸುತ್ತೋಲೆ' ವಿಭಾಗದ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾಹಿತಿ ನೀಡುತ್ತಿರುವುದು ಸಿಬ್ಬಂದಿಯವರಿಗೆ ತುಂಬಾ ಅನುಕೂಲವಾಗುತ್ತಿದೆ. ಆದರೆ ಅವರು ಪ್ರಾಮಾಣಿಕವಾದರೆ, ಇನ್ನೂ ಒಳ್ಳೆಯದು.

– ಪ್ರಹ್ಲಾದ ವೀರಪ್ಪ ಬಡಿಗೇರ
ಮನೆ ನಂ. 1601, ಬಡಿಗೇರ ಓಣಿ, ಎಂ.ಕೆ. ಹುಬ್ಬಳ್ಳಿ – 591 118,
ತಾ|| ಬೈಲಹೊಂಗಲ, ಜಿ|| ಬೆಳಗಾವಿ.

ಫೆಬ್ರವರಿ ತಿಂಗಳ ಪತ್ರಿಕೆಯಲ್ಲಿ ಮೂಡಿಬಂದ ಡಾ. ಪಾಟೀಲ ಪುಟ್ಟಪ್ಪನವರ 'ಬದುಕುವ ಮಾತು' ವಿಭಾಗದಲ್ಲಿ ಪ್ರಕಟವಾದ 'ಜಗತ್ತಿನಲ್ಲಿ ಕಟಪವಿಲ್ಲದ ಜೀವನವೇ ಶ್ರೇಷ್ಠ' ಎಂಬ ಲೇಖನ ಮನೋಜ್ಞ ಹಾಗೂ ಮಾರ್ಮಿಕವಾಗಿತ್ತು.

– ಬಿ.ಸಿ. ಭಾಜಂಗನವರ
5/2, ಮಧುರಮಡ್ಡಿ ಓಣಿ, ಹೊಸ ಯಲ್ಲಾಪುರ, ಧಾರವಾಡ – 580 001.

ಫೆಬ್ರವರಿ 2011ರ 'ಕರ್ನಾಟಕ ವಿಕಾಸ' ಮುಖಪುಟ ಆಕರ್ಷಕವಾಗಿದೆ ಹಾಗೂ ಇದರಲ್ಲಿ ಪ್ರಕಟವಾಗಿರುವ ವಿಚಾರಗಳು ಅದರಲ್ಲೂ ಮುಖ್ಯವಾಗಿ ಸ್ವಚ್ಛತೆಯ ಬಗ್ಗೆ ಹೆಚ್ಚಿನ ವಿಚಾರಗಳು ಮೂಡಿಬಂದಿದ್ದು ಗ್ರಾಮೀಣ ಜನರಿಗೆ ಉತ್ತಮ ಅರಿವು ಮೂಡಿಸುವಂತಿವೆ. ಪ್ರವೀಣ್ ಹುಲಿಕುಂಟೆಯವರ 'ಗ್ರಾಮೀಣ ಸ್ವಚ್ಛತೆಯ ಹೆಜ್ಜೆ ಗುರುತು' ವಿಚಾರ ಬಹಳ ಉತ್ತಮವಾಗಿದೆ.

– ಹೆಚ್.ಸಿ. ಜಯವರ್ಧನ
ಹಂಪಸಂದ್ರ, ಗೌರೀಬಿದನೂರು ತಾ||, ಚಿಕ್ಕಬಳ್ಳಾಪುರ ಜಿಲ್ಲೆ – 561 210.

ಫೆಬ್ರವರಿ ತಿಂಗಳ 'ಕರ್ನಾಟಕ ವಿಕಾಸ' ಪತ್ರಿಕೆ ಉತ್ತಮ ಮತ್ತು ವಿಭಿನ್ನ ರೀತಿಯ ವಿಚಾರಗಳಿಂದ ಕೂಡಿತ್ತು. ಈ ಸಂಚಿಕೆಯಲ್ಲಿ ಪ್ರಕಟವಾದ 'ಶಿಲೆಗಳ ನಾಡು ಕಾರ್ಕಳದಲ್ಲಿ ಸ್ವಚ್ಛತೆಯ ಹಾಡು' ಲೇಖನವು ತುಂಬಾ ಚೆನ್ನಾಗಿತ್ತು. ಬರೆದವರಿಗೂ ಹಾಗೂ ಸಂಪಾದಕರಿಗೂ ಧನ್ಯವಾದಗಳು. ನಮ್ಮೆಲ್ಲರ ಪ್ರೀತಿಯ 'ಕರ್ನಾಟಕ ವಿಕಾಸ' ಪತ್ರಿಕೆ ಹೀಗೆಯೇ ಮುಂದುವರೆಯಲಿ ಎಂದು ಆಶಿಸುತ್ತೇನೆ.

– ಶಕುಂತಲ ಶೆಟ್ಟಿ
ಗುಮಾಸ್ತೆ, ಬೈರಂಪಲ್ಲಿ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.

ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛತೆಯನ್ನು ಅನುಷ್ಠಾನಿಸುವ ಸಲುವಾಗಿ ಕೇಂದ್ರ ಸರ್ಕಾರದ ನಿರ್ಮಲ ಗ್ರಾಮ ಪುರಸ್ಕಾರದ ಜೊತೆಗೆ ರಾಜ್ಯ ಸರ್ಕಾರ 'ನೈರ್ಮಲ್ಯ' ಪ್ರಶಸ್ತಿಯನ್ನು ಜಾರಿಗೊಳಿಸಿರುವುದು ತುಂಬಾ ಪ್ರೋತ್ಸಾಹದಾಯಕವಾದ ಬೆಳವಣಿಗೆಯಾಗಿದೆ.

– ಶ್ರೀಕಲಾ ಪೇತ್ರಿ
ಡಾಟಾ ಎಂಟ್ರಿ ಆಪರೇಟರ್, ಚೇರ್ಕಾಡಿ ಗ್ರಾಮ ಪಂಚಾಯತ್, ಉಡುಪಿ ತಾ ಮತ್ತು ಜಿಲ್ಲೆ.

ಸಚಿವಾಲಯದಿಂದ ಸಂದೇಶ

ಪಿ. ರವಿಕುಮಾರ್
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಬಂಧುಗಳೇ,

## ಮಹಾತ್ಮ ಗಾಂಧೀಜಿಯವರ 'ಗ್ರಾಮ ಸ್ವರಾಜ್' ಚಿಂತನೆಗಳನ್ನು ಸಾಕಾರಗೊಳಿಸುವತ್ತ......

ಮಹಾತ್ಮ ಗಾಂಧೀಜಿಯವರ 'ಗ್ರಾಮ ಸ್ವರಾಜ್' ಕಲ್ಪನೆಯನ್ನು ಸಾಕಾರಗೊಳಿಸುವತ್ತ ನಾವೆಲ್ಲರೂ ಸಕಾರಾತ್ಮಕವಾಗಿ ಹಾಗೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕಾಗಿದೆ. ಇದಕ್ಕಾಗಿಯೇ ಕೇಂದ್ರ, ರಾಜ್ಯ ಹಾಗೂ ವಿದೇಶಿ ನೆರವಿನ ಹಲವಾರು ಅಭಿವೃದ್ಧಿ ಯೋಜನೆಗಳೊಂದಿಗೆ ಪ್ರಮುಖವಾಗಿ ವಿದೇಶಿ ನೆರವಿನ 'ಗ್ರಾಮ ಸ್ವರಾಜ್' ಯೋಜನೆಯು ಈಗಾಗಲೇ ಅನುಷ್ಠಾನಗೊಂಡು ಜಾರಿಯಲ್ಲಿರುವ ವಿಷಯ ತಮಗೆಲ್ಲ ತಿಳಿದಿರುವ ಸಂಗತಿಯೆ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ಅಭಿವೃದ್ಧಿಯ ಹಿನ್ನೆಲೆಯಲ್ಲಿ ರಾಜ್ಯದ ಇತರ ಜಿಲ್ಲೆಗಳಿಂದ ತೀರಾ ಹಿಂದೆ ಉಳಿದಿರುವುದನ್ನು ಪ್ರಾದೇಶಿಕ ಅಸಮತೋಲನ ಕುರಿತ ಸಮಿತಿಯು ವರದಿ ಮಾಡಿದೆ. ರಾಜ್ಯದ ಒಟ್ಟು 176 ತಾಲ್ಲೂಕುಗಳ 39 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದ್ದು, ಈ ತಾಲ್ಲೂಕುಗಳ ಅಭಿವೃದ್ಧಿಯ ಹಿನ್ನಡೆಗೆ ಕಾರಣಗಳನ್ನು ಸಹ ಗುರುತಿಸಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವಿಶ್ವ ಬ್ಯಾಂಕ್‌ನವರ ಆರ್ಥಿಕ ಸಹಾಯದೊಂದಿಗೆ 'ಗ್ರಾಮ ಸ್ವರಾಜ್'–ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯನ್ನು ರಾಜ್ಯದಲ್ಲಿ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 2006–07ನೇ ಸಾಲಿನಿಂದ ಅನುಷ್ಠಾನಗೊಂಡು ಜಾರಿಯಲ್ಲಿದೆ.

ಗ್ರಾಮ ಸ್ವರಾಜ್ ಯೋಜನೆಯು ಯಶಸ್ವೀ ಅನುಷ್ಠಾನ ಹಾಗೂ ಕಾರ್ಯಚರಣೆಗಾಗಿ ಇಲಾಖೆಯ ವತಿಯಿಂದ ಸೂಚನೆ, ಮಾರ್ಗದರ್ಶನವನ್ನು ಸುತ್ತೋಲೆ/ಪತ್ರಗಳ ರೂಪದಲ್ಲಿ ಕಾಲಾನುಕಾಲಕ್ಕೆ ನೀಡುತ್ತಾ ಬಂದಿದೆ.

ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಿಸಲಾಗುತ್ತಿರುವ 'ಸಾಮರ್ಥ್ಯ ಸೌಧ' ಕೇಂದ್ರಗಳಿಗೆ ಅಗತ್ಯವಿರುವ ಪರಿಕರಗಳನ್ನು ಪಾರದರ್ಶಕತೆ ಅಧಿನಿಯಮದ 1999ರಂತೆ ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಎಲೆಕ್ಟ್ರಾನಿಕ್ ಉಪಕರಣಗಳು ಒಳಗೊಂಡಿದ್ದು, ತರಬೇತಿ ಹಾಗೂ ಸಮೂಹ ಸಂವಹನಕ್ಕೆ ಅತ್ಯಂತ ಸಹಕಾರಿಯಾಗಿರುತ್ತದೆ. ಜೊತೆಯಲ್ಲಿಯೇ ಸೌರಶಕ್ತಿ ಬಳಕೆಯ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಕ್ರಮವಹಿಸಿದೆ. ಯೋಜನೆ ಅನುಷ್ಠಾನಗೊಂಡಿರುವ ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯಿತಿಗಳಲ್ಲಿ ತಪ್ಪದೇ ಕಡ್ಡಾಯವಾಗಿ ಪ್ರತಿ ಮಾಹೆ ಸಭೆಗಳನ್ನು ನಡೆಸಲು ಕ್ರಮ ಕೈಗೊಂಡು ಆಡಳಿತ ವಿಕೇಂದ್ರಿಕರಣದ ಆಶಯಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ಕರ ಸಂಗ್ರಹಣೆಯ ಬಗ್ಗೆ ವಿಶೇಷ ಅಭಿಯಾನಗಳನ್ನು ಹಮ್ಮಿಕೊಳ್ಳುವುದರ ಮೂಲಕ ಕರ ಸಂಗ್ರಹಣೆ ಪ್ರಮಾಣವನ್ನು ವೃದ್ಧಿಸಿಕೊಂಡು ಆರ್ಥಿಕವಾಗಿ ಸದೃಢಗೊಳ್ಳಲು ಕ್ರಮವಹಿಸಲಾಗಿದೆ. ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ ಹರಿದು ಬರುತ್ತಿದ್ದು, ಹಣದ ಹರಿವನ್ನು ಶಿಸ್ತು ಬದ್ಧವಾಗಿ ಹಾಗೂ ಉದ್ದೇಶಕ್ಕನುಗುಣವಾಗಿ ಮಾಡಲು ಮತ್ತು ಪೂರ್ಣ ಅರ್ಹತೆಯ ನಿಬಂಧನೆಗಳನ್ನು ಜಾರಿಗೊಳಿಸಲು, ಕಾರ್ಯಾಚರಣೆ ಕೈಪಿಡಿಯನ್ನು ಪರಿಷ್ಕರಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಂಬಂಧಿಸಿದಂತೆ ಕೆಲವು ಸುತ್ತೋಲೆಗಳನ್ನು ಪತ್ರಿಕೆಯ ಸುತ್ತೋಲೆ ವಿಭಾಗದಲ್ಲಿ ಪ್ರಕಟಿಸಲಾಗಿದೆ.

ವಿಶ್ವ ಬ್ಯಾಂಕ್‌ನವರು ಭಾರತ ದೇಶದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಪ್ರಮುಖ ರಾಜ್ಯವಾಗಿದೆ. 'ಗ್ರಾಮ ಸ್ವರಾಜ್' ಯೋಜನೆಯು ರಾಜ್ಯದಲ್ಲಿ ಯಶಸ್ವಿಯಾಗಿ ಐದು ಆರ್ಥಿಕ ವರ್ಷಗಳನ್ನು ಪೂರೈಸಿದ್ದು, ಇನ್ನುಳಿದ ಒಂದು ವರ್ಷದ ಅವಧಿಯ ಕಾಲಮಿತಿಯೊಳಗೆ, ಯೋಜನೆಯ ಪ್ರಯೋಜನಗಳನ್ನು ಫಲಾನುಭವಿಗಳಿಗೆ ಕೊಂಡುಯ್ಯುವಲ್ಲಿ ದೃಢ ಹೆಜ್ಜೆಯನ್ನಿಟ್ಟಿರುವುದು ಶ್ಲಾಘನೀಯ. ಅಲ್ಲದೆ ವಿಶ್ವ ಬ್ಯಾಂಕ್‌ನವರ ನಿರೀಕ್ಷೆಗಳಿಗುಣವಾಗಿ ಯೋಜನೆಯು ಕಾರ್ಯ ಪ್ರವೃತ್ತವಾಗಿದ್ದು, ಕರ್ನಾಟಕದಲ್ಲಿ ಈ ಯೋಜನೆಯ ಯಶಸ್ಸನ್ನು ಆಧರಿಸಿ ದೇಶದ ಇತರ ರಾಜ್ಯಗಳಿಗೆ ವಿಸ್ತರಿಸುವ ಚಿಂತನೆ ಹೊಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ಈ ಹಿನ್ನೆಲೆಯಲ್ಲಿ ಗ್ರಾಮ ಸ್ವರಾಜ್ ಯೋಜನೆಯು ತನ್ನ ಉಳಿದ ಒಂದು ವರ್ಷದ ಅವಧಿಯಲ್ಲಿ ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳ ಸಾಂಘಿಕ ಪ್ರಯತ್ನದ ಮೂಲಕ ಗರಿಷ್ಠ ಸಾಧನೆ ಮಾಡಿ ನಿರೀಕ್ಷಿತ ಗುರಿಗಳನ್ನು ತಲುಪಿ ಕರ್ನಾಟಕದ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯು ಗಟ್ಟಿಯಾಗಿದೆ ಎಂಬುದನ್ನು ಸಾಬೀತುಪಡಿಸುವಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.



(ಪಿ. ರವಿ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕಾರ್ಯದರ್ಶಿಗಳ ಆಶಯ

ಜಿ.ಎಸ್. ನಾರಾಯಣ ಸ್ವಾಮಿ
ಸರ್ಕಾರದ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಬಂಧುಗಳೇ,

# ಕರ್ನಾಟಕ ಪಂಚಾಯತಿ ಸಬಲೀಕರಣದ ಸಾಕಾರದತ್ತ ...

ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯದ ಖಾತ್ರಿಯೊಂದಿಗೆ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು ಕರ್ನಾಟಕದಲ್ಲಿನ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಮೊದಲಿದ್ದ ಚಿತ್ರಣವನ್ನು ಸುಧಾರಿಸಲು ರೂ.600 ಕೋಟಿಗಳ ಅಭಿವೃದ್ಧಿ ಸಾಲವನ್ನು ಮಂಜೂರು ಮಾಡಿದೆ. ಈ ಹಣವನ್ನು ಗ್ರಾಮ ಸ್ವರಾಜ್ ಯೋಜನೆಯ ಮೂಲಕ ವ್ಯಯಿಸಲಾಗುತ್ತಿದೆ. ಗ್ರಾಮ ಸ್ವರಾಜ್ ಯೋಜನೆಯಲ್ಲಿ ಪ್ರಮುಖವಾಗಿ ನಾಲ್ಕು ಘಟಕಗಳನ್ನು ಹೊಂದಲಾಗಿದೆ. ಅವುಗಳೆಂದರೆ, ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ; ಭಾಗೀದಾರರಿಗೆ ಮಾಹಿತಿ ವ್ಯವಸ್ಥೆ; ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ; ರಾಜ್ಯದ ಸಾಮರ್ಥ್ಯಾಭಿವೃದ್ಧಿ. ಯೋಜನಾ ವ್ಯಾಪ್ತಿಗೆ ಬರುವ 1341 ಗ್ರಾಮ ಪಂಚಾಯಿತಿಗಳಿಗೆ ಐದು ಆರ್ಥಿಕ ವರ್ಷಗಳ ಅವಧಿಗೆ ಪ್ರತಿ ಸಾಲಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ಸರಾಸರಿ ರೂ. 8 ರಿಂದ 10 ಲಕ್ಷಗಳವರೆಗೆ ಮುಕ್ತ ಅನುದಾನವನ್ನು ಒದಗಿಸಿ ಗ್ರಾಮ ಪಂಚಾಯಿತಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸಲು ಕ್ರಮವಹಿಸಿರುವುದು ಗಮನಿಸಬೇಕಾದ ಅಂಶವಾಗಿದೆ. ಅಲ್ಲದೇ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ ಮಾಡುವುದು, ಗ್ರಾಮ ಪಂಚಾಯಿತಿಗಳು ಸ್ವಂತ ಆದಾಯ ಸಂಗ್ರಹಣೆಯನ್ನು ಹೆಚ್ಚಿಸಿಕೊಳ್ಳಲು ಮಾರ್ಗದರ್ಶನ ಮತ್ತು ಕಾರ್ಯವಿಧಾನದಲ್ಲಿ ಸುಧಾರಣೆ ತರುವುದು, ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯಲ್ಲಿ ಪುನಶ್ಚೇತನಗೊಳಿಸುವುದು ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರಡಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಸಹಕರಿಸುವುದು ಸೇರಿದಂತೆ ಗ್ರಾಮ ಸ್ವರಾಜ್ ಯೋಜನೆಯು ಇತರೆ ಪ್ರಮುಖ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದೆ.

ಗ್ರಾಮ ಸ್ವರಾಜ್ ಯೋಜನೆಯಡಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರೆ ಈ ಯೋಜನೆಯು ಬಹಳ ಉಪಯುಕ್ತವಾಗಿದೆ ಎಂದೆನಿಸುತ್ತದೆ. ರಾಜ್ಯ ಸರ್ಕಾರದ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳ ಜೊತೆ ಜೊತೆಗೆ ಯೋಜನೆಗಾಗಿಯೇ ಪ್ರತ್ಯೇಕ ಸಂಗ್ರಹಣಾ ನಿಯಮಗಳನ್ನು ಅಳವಡಿಸಿಕೊಂಡು ಪಾಲಿಸುತ್ತಿರುವುದು ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲು ನಡೆಸಿದ ಒಂದು ಪ್ರಯತ್ನವಾಗಿದೆ. ಗ್ರಾಮ ಸ್ವರಾಜ್ ಯೋಜನೆಯಡಿ ವ್ಯಾಪಕ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡು ಪಂಚಾಯತ್ ರಾಜ್‌ನ ಮೂರು ಹಂತದ ಸಂಸ್ಥೆಗಳ ಎಲ್ಲಾ ಭಾಗೀದಾರರಿಗೆ ತರಬೇತಿ ನೀಡುವುದರ ಮುಖಾಂತರ ಸಾಮರ್ಥ್ಯವನ್ನು ಹೆಚ್ಚಳ ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಖಾತ್ರಿ ಪಡಿಸಲಾಗುತ್ತಿದೆ. ಇದರಿಂದಾಗಿ ಕರ್ನಾಟಕದಲ್ಲಿ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯು ಸರಿ ದಾರಿಯಲ್ಲಿ ಸಾಗಲು ಅನುಕೂಲವಾಗುತ್ತದೆ.

ಗ್ರಾಮ ಸ್ವರಾಜ್ ಯೋಜನೆಯಡಿ ಬಹುಮುಖ್ಯವಾಗಿ ಗುರುತಿಸಬಹುದಾದ ಅಂಶಗಳೆಂದರೆ ಸಾಮರ್ಥ್ಯ ಸೌಧ ಹಾಗೂ ಸ್ಯಾಟ್‌ಕಾಂಗಳ ನಿರ್ಮಾಣ. ಇವು ನಿಜವಾಗಿಯೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅತ್ಯುಪಯುಕ್ತ ಆಸ್ತಿಗಳೆನಿಸಿಕೊಳ್ಳುತ್ತವೆ. ಗ್ರಾಮ ಪಂಚಾಯಿತಿಗಳು ಒದಗಿಸುತ್ತಿರುವ ಸೇವೆಗಳ ಬಗ್ಗೆ ಮಾಹಿತಿಯನ್ನು ಜನ ಸಾಮಾನ್ಯರಿಗೆ ಒದಗಿಸುವಲ್ಲಿ ಹಾಗೂ ಪಂಚಾಯಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವ ಹಿಸಲು ಈ ಯೋಜನೆಯಿಂದ ಉಸ್ತುವಾರಿ ಮಾಡುತ್ತಿರುವುದು ಉಲ್ಲೇಖನೀಯವಾಗಿದೆ. ಅಲ್ಲದೇ ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳನ್ನು ಜೋಡಿ ನಮೂದು ಪದ್ಧತಿಯಲ್ಲಿ ನಿರ್ವಹಿಸುವುದು ಹಾಗೂ ಪಂಚತಂತ್ರ ಗಣಕ ತಂತ್ರಾಂಶದ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಗ್ರಾಮ ಸ್ವರಾಜ್‌ನ ಪಾತ್ರ ಹಿರಿದಾದುದು ಎಂದು ಹೇಳಬಹುದು. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಒಟ್ಟಾರೆಯಾಗಿ ಹೇಳುವುದಾದರೆ ಗ್ರಾಮ ಸ್ವರಾಜ್ ಯೋಜನೆಯು ಒಂದು ಫಲಪ್ರದ ಯೋಜನೆಯಾಗಿದ್ದು ಇನ್ನೂ ಉತ್ತಮ ಕೆಲಸಗಳನ್ನು ಅನುಷ್ಠಾನಗೊಳಿಸುವಂತಾಗಲಿ ಎಂದು ಆಶಿಸುತ್ತೇನೆ.

(ಜಿ.ಎಸ್. ನಾರಾಯಣಸ್ವಾಮಿ)
ಸರ್ಕಾರದ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ನಿರ್ಮಲ

ಸಂಪೂರ್ಣ ಸ್ವಚ್ಛತಾ ಆಂದೋಲನ

ಸ್ವಚ್ಛ ಕರ್ನಾಟಕ

## ನುಡಿ ನಿರ್ಮಲ

ಸಂಪೂರ್ಣ ಸ್ವಚ್ಛತಾ ಆಂದೋಲನದ ಪ್ರಮುಖ ಉದ್ದೇಶ ಹಾಗೂ ಆಶಯಗಳು ಅತ್ಯಂತ ಸ್ಪಷ್ಟವಾಗಿವೆ. ಯಾವುದೇ ಒಂದು ಗ್ರಾಮ ಪಂಚಾಯಿತಿ ಅಥವಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಹಳ್ಳಿಗಳು ಸ್ವಚ್ಛ ಹಾಗೂ ನಿರ್ಮಲವಾಗಿರಬೇಕು. ಸ್ವಚ್ಛತೆಯೆನ್ನುವುದು ಎಲ್ಲ ಗ್ರಾಮೀಣ ಜನರ ಜೀವನ ವಿಧಾನವಾಗಬೇಕು. ಗ್ರಾಮದ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡ ಮಾತ್ರಕ್ಕೆ ಸಂಪೂರ್ಣ ಸ್ವಚ್ಚತೆ ಸಾಧಿಸಿದಂತಾಗುವುದಿಲ್ಲ. ಗ್ರಾಮೀಣ ಭಾಗದ ಜನರು ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯಗಳನ್ನು ಹೊಂದಿರಬೇಕು ಹಾಗೂ ಮಲ-ಮೂತ್ರಗಳ ವಿಸರ್ಜನೆಗೆ ಕಡ್ಡಾಯವಾಗಿ ಶೌಚಾಲಯಗಳನ್ನು ಬಳಸಬೇಕು. ಅಲ್ಲದೆ ಆ ಗ್ರಾಮಗಳ ಎಲ್ಲ ಶಾಲೆ ಹಾಗೂ ಅಂಗನವಾಡಿಗಳಲ್ಲೂ ಶೌಚಾಲಯ ಸೌಲಭ್ಯಗಳಿರಬೇಕು. ಮಕ್ಕಳು ಪುಟ್ಟ ವಯಸ್ಸಿನಿಂದಲೇ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಊರಿನ ಬೀದಿಗಳು, ರಸ್ತೆಗಳು ಶುಚಿಯಾಗಿರಬೇಕು, ಊರುಗಳಲ್ಲಿನ ಘನ ಹಾಗೂ ದ್ರವ ತ್ಯಾಜ್ಯಗಳು ಉತ್ತಮವಾಗಿ ನಿರ್ವಹಣೆಯಾಗುತ್ತಿರಬೇಕು. ಕೌಟುಂಬಿಕ ಶೌಚಾಲಯಗಳು, ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳು ಸಮರ್ಪಕ ಬಳಕೆ ಹಾಗೂ ಸೂಕ್ತ ನಿರ್ವಹಣೆಗಳನ್ನು ಹೊಂದಿರಬೇಕು.

ಸ್ವಚ್ಛತೆಯ ಅನುಷ್ಠಾನದಲ್ಲಿ ಸುಸ್ಥಿರತೆ ಎಂಬುದು ಅತ್ಯಂತ ಪ್ರಮುಖ ಅಂಶ. ಯಾವುದೇ ಒಂದು ಸೌಲಭ್ಯದ ನಿರ್ಮಾಣ ಹಾಗೂ ಬಳಕೆಯ ಗುಣಮಟ್ಟ ಅದರ ನಿರ್ವಹಣೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಗೃಹ ಶೌಚಾಲಯಗಳಿರಲಿ, ಶಾಲಾ ಹಾಗೂ ಅಂಗನವಾಡಿ ಶೌಚಾಲಯಗಳಿರಲಿ ಅಥವಾ ಸಮುದಾಯ ಶೌಚಾಲಯಗಳಿರಲಿ ಇವೆಲ್ಲವುಗಳ ನಿರ್ವಹಣೆ ಅತ್ಯಂತ ಮುಖ್ಯ. ಅದೂ ಕೇವಲ ಒಂದು ದಿನದ, ಒಂದು ವಾರದ ಅಥವಾ ಒಂದು ವರ್ಷದ ನಿರ್ವಹಣೆಯಲ್ಲ; ನಿರ್ವಹಣೆಯೆಂಬುದು ನಿರಂತರ ಪ್ರಕ್ರೀಯೆಯಾಗಬೇಕು. ಆಗ ಮಾತ್ರ ಸೌಲಭ್ಯಗಳಲ್ಲಿ ಸುಸ್ಥಿರತೆಯನ್ನು ಕಾಣಬಹುದು. ಇಲ್ಲವಾದಲ್ಲಿ ಈ ಸೌಲಭ್ಯಗಳು ಕಾಲ ಕ್ರಮೇಣ ನಿರುಪಯೋಗಿಗಳಾಗಿ ತಮ್ಮ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತವೆ ಹಾಗೂ ಯೋಜನೆಯೊಂದರ ಪಳಯುಳಿಕೆಗಳಾಗಿಬಿಡುವ ಅಪಾಯವಿರುತ್ತದೆ.

ಸಂಪೂರ್ಣ ನೈರ್ಮಲ್ಯವೆಂದರೆ ಇಷ್ಟೇ ಅಲ್ಲ; ಮನೆಗಳ ಶುಚಿತ್ವ, ವೈಯಕ್ತಿಕ ಶುಚಿತ್ವಗಳೂ ಬಹಳ ಮುಖ್ಯ. ಕೇವಲ ಶೌಚಾಲಯಕ್ಕೆ ಹೋಗಿಬಂದ ನಂತರ ಹಾಗೂ ಊಟಕ್ಕೆ ಮುನ್ನ ಶುಚಿಯಾಗಿ ಕೈ ತೊಳೆಯುವುದರಿಂದಲೇ ಹಲವು ರೋಗಗಳನ್ನು ದೂರಮಾಡಬಹುದು. ಅಂದಮೇಲೆ ಮನೆಯ ಸ್ವಚ್ಛತೆ ಹಾಗೂ ವೈಯಕ್ತಿಕ ಸ್ವಚ್ಛತೆಯನ್ನು ಕ್ರಮವಾಗಿ ಪಾಲಿಸಿದಲ್ಲಿ ಎಷ್ಟೆಲ್ಲಾ ರೋಗಗಳಿಗೆ ಕಡಿವಾಣ ಹಾಕಬಹುದಲ್ಲವೆ? ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಮೂಲಕ ನಿರ್ಮಲ ಗ್ರಾಮ ಪುರಸ್ಕಾರ ಪಡೆದಿರುವ ಗ್ರಾಮ ಪಂಚಾಯಿತಿಗಳು ಪುರಸ್ಕಾರ ಪಡೆದ ಮೇಲೆ ತಮ್ಮ ಹೊಣೆಗಾರಿಕೆಯನ್ನು ಮರೆಯಬಾರದು. ತಮ್ಮ ಗ್ರಾಮಗಳ ನೈರ್ಮಲ್ಯ ಪಾಲನೆಯಲ್ಲಿ ಸುಸ್ಥಿರತೆಯನ್ನು ಸಾಧಿಸಬೇಕು. ಸಂಪೂರ್ಣ ನೈರ್ಮಲ್ಯ ಹಾಗೂ ಅದರ ಸುಸ್ಥಿರತೆ ನಮ್ಮೆಲ್ಲ ಆದ್ಯತೆಯಾಗಬೇಕು. ಆಗ ಮಾತ್ರ ಸಂಪೂರ್ಣ ಸ್ವಚ್ಛತಾ ಆಂದೋಲನದಂತ ಕಾರ್ಯಕ್ರಮಗಳು ಅರ್ಥಪೂರ್ಣವಾಗಲು ಸಾಧ್ಯ.

**– ಡಾ॥ ಪಿ. ಬೋರೇಗೌಡ,**

ನಿರ್ದೇಶಕರು, ಕ.ಗ್ರಾ.ನೀ.ಸ. ಮತ್ತು ನೈ. ಸಂಸ್ಥೆ,

ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ.




# ಆಯವ್ಯಯ – 2011-12
## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಮುಖಾಂಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು 2011-2012ನೇ ಸಾಲಿನ ಆಯ-ವ್ಯಯದಲ್ಲಿ ನೀಡಿದ ಪ್ರಮುಖಾಂಶಗಳು.

ಗ್ರಾಮೀಣ ಅಭಿವೃದ್ಧಿಗಾಗಿ ಈ ಆಯವ್ಯಯದಲ್ಲಿ ಅನುದಾನವನ್ನು 4,385 ಕೋಟಿ ರೂ.ಗಳಿಗೆ ಹೆಚ್ಚಳ, ಇದರಿಂದಾಗಿ ಗ್ರಾಮೀಣ ಅಭಿವೃದ್ಧಿಗಾಗಿ ಮುಂದಿನ ವರ್ಷದ ಹಂಚಿಕೆಯು 8,500 ಕೋಟಿ ರೂ. ಮೀರುವ ಸಾಧ್ಯತೆಯಿದೆ. ಈ ಅನುದಾನವು ಕುಡಿಯುವ ನೀರು, ಉದ್ಯೋಗ ಸೃಜನೆ, ಇತ್ಯಾದಿ ಹಲವಾರು ಯೋಜನೆಗಳಿಗಾಗಿ ಭಾರತ ಸರ್ಕಾರದಿಂದ ಬರುವ ಅನುದಾನಗಳಿಗೆ ಪೂರಕವಾಗಿರುತ್ತದೆ.

### ರಸ್ತೆ ಮತ್ತು ಕುಡಿಯುವ ನೀರು

2011-12ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳಿಗಾಗಿ 1,000 ಕೋಟಿ ರೂ. ಮತ್ತು ಕುಡಿಯುವ ನೀರಿಗಾಗಿ 1,2580 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

2010-11ರಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 655 ಕೋಟಿ ರೂ.ಗಳನ್ನು ವಿನಿಯೋಗಿಸಿ 1,294 ಕಿ.ಮೀ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ.

ರಾಜ್ಯದ ಗ್ರಾಮೀಣ ರಸ್ತೆಗಳನ್ನು ಏಕರೂಪದಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರವು 189 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿದೆ.

### ಸುವರ್ಣ ಗ್ರಾಮೋದಯ

ಗ್ರಾಮಗಳಲ್ಲಿ ಮೂಲಸೌಕರ್ಯ ಸೌಲಭ್ಯಗಳನ್ನು ಉತ್ತಮಪಡಿಸಲು ಸುವರ್ಣ ಗ್ರಾಮೋದಯ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಈವರೆವಿಗೂ 1,061 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. 1,121 ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 2010-11ರಲ್ಲಿ 250 ಕೋಟಿ ರೂ.ಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದ್ದು, 2011-12ನೇ ಸಾಲಿನಲ್ಲಿಯೂ ಸಹ ಮುಂದುವರೆಸಲಾಗುವುದು ಹಾಗೂ ಈ ಉದ್ದೇಶಕ್ಕಾಗಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

## ಧಾರವಾಡದಲ್ಲಿ ಪಂಚಾಯತ್ ರಾಜ್ ಪೀಠ ಸ್ಥಾಪನೆ

ಧಾರವಾಡದಲ್ಲಿರುವ ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ರೀಸರ್ಚ್ ಸಂಸ್ಥೆಯಲ್ಲಿ ಅಬ್ದುಲ್ ನಜೀರ್ ಸಾಬ್‌ರವರ ಹೆಸರಿನಲ್ಲಿ ಪಂಚಾಯತ್ ರಾಜ್ ಪೀಠ ಸ್ಥಾಪಿಸಲು ಏಕಕಾಲಿಕ ಅನುದಾನವಾಗಿ 1 ಕೋಟಿ ರೂ.ಗಳನ್ನು ನೀಡಲಾಗುವುದು.

## ಆಸರೆ

ಪ್ರವಾಹ ಪೀಡಿತ ಗ್ರಾಮಗಳಿಗೆ ಪುನರ್ವಸತಿ ಕಲ್ಪಿಸುವ ಆಸರೆ ಕಾರ್ಯಕ್ರಮದಡಿ ಸಾಧಿಸಲಾದ ಯಶಸ್ಸಿನ ಬಗ್ಗೆ ತಿಳಿಸಿವುದು ನನಗೆ ಅತ್ಯಂತ ತೃಪ್ತಿಕರವಾದ ಸಂಗತಿಯಾಗಿದೆ. ಈ ಯೋಜನೆಯನ್ನು 297 ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದ್ದು, ಈ ಗ್ರಾಮಗಳ ಪುನರ್ವಸತಿಗಾಗಿ ಬೇಕಾಗಿರುವ ಒಟ್ಟು 5,610 ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 57,675 ಮನೆಗಳ ಪೈಕಿ 47,626 ಮನೆಗಳ ಕೆಲಸ ಪ್ರಗತಿಯಲ್ಲಿದ್ದು, ಈ ಪೈಕಿ 15,800 ಮನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ ಮತ್ತು ಮಾರ್ಚ್ 2011ರ ವೇಳೆಗೆ 32,400 ಮನೆಗಳನ್ನು ಪೂರ್ಣಗೊಳಿಸಲಾಗುವುದು. ಬಾಕಿ ಮನೆಗಳಣ್ನು ಮೆ 2011ರ ವೇಳೆಗೆ ಪೂರ್ಣಗೊಳಿಸಲಾಗುವುದು. ಗ್ರಾಮಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ 170 ಕೋಟಿ ರೂ.ಗಳನ್ನು ಈಗಾಗಲೆ ಬಿಡುಗಡೆ ಮಾಡಲಾಗಿದೆ.

## ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ

ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ: 50ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಿರುವ ಕಾರಣದಿಂದ ಮುಂಬರುವ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸಬಹುದು.

## ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಪದಾಧಿಕಾರಿಗಳ ಗೌರವ ಧನ ಹೆಚ್ಚಳ

ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಗೌರವಧನವನ್ನು ಕ್ರಮವಾಗಿ, 3000, 2250 ಮತ್ತು 1500 ರೂ.ಗಳಿಗೆ ಹೆಚ್ಚಿಸಲಾಗುವುದು. ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಗೌರವಧನವನ್ನು ಕ್ರಮವಾಗಿ, 2250, 1500 ಮತ್ತು 750 ರೂ.ಗಳಿಗೆ ಹೆಚ್ಚಿಸಲಾಗುವುದು.

## ಗ್ರಾಮ ಪಂಚಾಯತಿಗಳಿಗೆ ಅನುದಾನ ಹೆಚ್ಚಳ

ಗ್ರಾಮ ಪಂಚಾಯತಿಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು 2011–12ನೇ ಸಾಲಿನಲ್ಲಿ 6 ಲಕ್ಷದಿಂದ 8 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುತ್ತಿದೆ.

## ತಾಲ್ಲೂಕು ಪಂಚಾಯತಿಗೆ ಅನುದಾನ

ಪ್ರತಿ ತಾಲ್ಲೂಕು ಪಂಚಾಯತಿಗೆ ವಾರ್ಷಿಕ 1 ಕೋಟಿ. ರೂ.ಗಳ ಅನಿರ್ಬಂಧಿತ ಅನುದಾನವನ್ನು ಒದಗಿಸಲಾಗುವುದು.

❑

# ಗ್ರಾಮ ಸ್ವರಾಜ್ – ಅಭಿವೃದ್ಧಿಯ ಒಂದು ಸಾಧನ



ಡಾ. ಎಂ.ಆರ್. ಏಕಾಂತಪ್ಪ *
ಮೊಬೈಲ್ : 9449440261

ಸ್ಥಳೀಯರ ಆದ್ಯತೆ ಮತ್ತು ನಿರ್ಧಾರಕ್ಕನು ಗುಣವಾಗಿ ಸೇವೆ ಒದಗಿಸುವಲ್ಲಿ ಮತ್ತು ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡುವಲ್ಲಿ ಗ್ರಾಮ ಸ್ವರಾಜ್ ಯೋಜನೆಯು ಕಾರ್ಯತತ್ಪರ ವಾಗಿದೆ.

ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಒಂದು ಪ್ರಮುಖ ಯೋಜನೆಯಾಗಿದೆ. ಯೋಜನೆಯು ಐದು ವರ್ಷಗಳ ಕಾಲಾವಧಿಯೊಂದಿಗೆ 2006–07ನೇ ಆರ್ಥಿಕ ಸಾಲಿನಿಂದ ಪ್ರಾರಂಭಗೊಂಡಿದೆ. ಯೋಜನೆಯು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಉದ್ದೇಶವನ್ನು ಹೊಂದಿದೆ. ಗ್ರಾಮೀಣ ಪ್ರದೇಶಗಳ ಅಗತ್ಯಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಅದನ್ನು ಸಮರ್ಪಕವಾಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸಲು ಉತ್ತೇಜನ ನೀಡಬೇಕಾದ ಅವಶ್ಯಕತೆಯೊಂದಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಿ ಗ್ರಾಮ ಪಂಚಾಯತಿಗಳನ್ನು ನಿಜವಾದ ಅರ್ಥದಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳನ್ನಾಗಿ ರೂಪಿಸುವುದಕ್ಕೆ ಈ ಯೋಜನೆಯಿಂದ ಕ್ರಮವಹಿಸಲಾಗಿದೆ.

ಸ್ಥಳೀಯರ ಆದ್ಯತೆ ಮತ್ತು ನಿರ್ಧಾರಕ್ಕನುಗುಣವಾಗಿ ಸೇವೆ ಒದಗಿಸುವಲ್ಲಿ ಮತ್ತು ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡುವಲ್ಲಿ ಗ್ರಾಮ ಸ್ವರಾಜ್ ಯೋಜನೆ ಮಹತ್ವದ ಪಾತ್ರ ವಹಿಸುತ್ತಿದೆ. ಡಾ॥ ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತಾಧಿಕಾರದ ಸಮಿತಿಯ ವರದಿಯಲ್ಲಿ ಗುರುತಿಸಿರುವ ರಾಜ್ಯದಲ್ಲಿನ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯತಿಗಳಲ್ಲಿ ಮೊದಲಿದ್ದ ಸ್ಥಿತಿಯನ್ನು ಸುಧಾರಿಸಿ ಈ ಭಾಗದ ಗ್ರಾಮೀಣ ಜನರ ಜೀವನ ಮಟ್ಟವನ್ನು ಅಭಿವೃದ್ಧಿಪಡಿಸಲು ಈ ಯೋಜನೆಯಿಂದ ವ್ಯಾಪಕವಾಗಿ ಶ್ರಮಿಸಲಾಗುತ್ತಿದೆ. ಈ ಕಾರ್ಯಕ್ಕಾಗಿ ಸಂಬಂಧಿಸಿದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಂದ ಅಗತ್ಯ ನೆರವು ಪಡೆಯಲಾಗುತ್ತಿದೆ.

ಯೋಜನಾ ಗಾತ್ರವು ಐದು ವರ್ಷಗಳ ಅವಧಿಗೆ ರೂ. 600 ಕೋಟಿಗಳಾಗಿದೆ. ವಲಯ ಹೂಡಿಕೆ ಸಾಲದ ರೂಪದಲ್ಲಿ ಅಂತರಾಷ್ಟ್ರೀಯ ಅಭಿವೃದ್ಧಿ ಸಂಘವು (ಐ.ಡಿ.ಎ) ಹೆಚ್ಚುವರಿ ಮುಕ್ತ ಅನುದಾನವನ್ನು ಕಾರ್ಯಕ್ರಮ ಸಾಲವಾಗಿ ನೀಡಿದೆ. ಕರ್ನಾಟಕ ಸರ್ಕಾರದ ನಿಯಮಾವಳಿಗಳು, ಹಣಕಾಸಿನ ನಿರ್ವಹಣೆ, ವರದಿಸುವಿಕೆ, ಲೆಕ್ಕ ಪರಿಶೋಧನೆ ಸೇರಿದಂತೆ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಐ.ಡಿ.ಎಯು ಭರವಸೆಯನ್ನಿಟ್ಟಿದೆ.

**ಗ್ರಾಮ ಸ್ವರಾಜ್ ಯೋಜನೆಯ ಪ್ರಮುಖ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದೆ.**

- ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ.
- ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯ ಕುರಿತು ಮಾರ್ಗದರ್ಶನ ಮತ್ತು ಕಾರ್ಯ ವಿಧಾನದಲ್ಲಿ ಸುಧಾರಣೆ.
- ಅತ್ಯಂತ ಹಿಂದುಳಿದ 39 ತಾಲೂಕುಗಳ 1341 ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನವನ್ನು ಸೂತ್ರದ ಆಧಾರದ ಮೇಲೆ ಒದಗಿಸುವುದು.
- ಗ್ರಾಮ ಪಂಚಾಯತಿಗಳಲ್ಲಿನ ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಶ್ಚೇತನ ಹಾಗೂ ಪಾರದರ್ಶಕತೆ.
- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಪರಿಣಾಮಕಾರಿ ಸುಧಾರಣೆ.

**ಯೋಜನೆಯ ಪ್ರಮುಖ ಪರಿಣಾಮಗಳು :**

- ಸ್ಥಳೀಯ ಆದ್ಯತೆಗಳಿಗನುಗುಣವಾಗಿ ಮುಕ್ತ ಅನುದಾನದ ಪರಿಣಾಮಕಾರಿ ಬಳಕೆಯಲ್ಲಿ ಹೆಚ್ಚಿದ ಅರಿವು.
- ಗ್ರಾಮ ಪಂಚಾಯಿತಿಗಳ ಹಣಕಾಸು ವ್ಯವಸ್ಥೆಯ ಮತ್ತು ಸಂಗ್ರಹಣಾ ವ್ಯವಸ್ಥೆಯ ನಿರ್ವಹಣಾ ಸುಧಾರಣೆ.

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, 6ನೇ ಮಹಡಿ, ಎಂಎಸ್.ಐ.ಎಲ್. ಕಟ್ಟಡ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

ಗುರಿ ಇಲ್ಲದ ಯೋಜನೆ ಎಂದರೆ ಅದು ಕೇವಲ ಆಶಯ ಮಾತ್ರ.

- ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸೇವೆಗಳ ನಿರ್ವಹಣೆ ಉಸ್ತುವಾರಿ (ಉದಾ: ಗ್ರಾಮೀಣ ಕುಡಿಯುವ ನೀರು, ಶಿಕ್ಷಣ, ಪಾಲ್ಗೊಳ್ಳುವಿಕೆ ಮೂಲಕ ಯೋಜನಾ ತಯಾರಿಕೆ, ಹಣಕಾಸು ನಿರ್ವಹಣೆ, ಸಾಮರ್ಥ್ಯ ನಿರ್ಮಾಣ)
- ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ಸುಧಾರಿತ ಕ್ರಮಗಳು
- ಗ್ರಾಮ ಪಂಚಾಯಿತಿಗಳಿಗೆ ಪರಿಸರ ನಿರ್ವಹಣಾ ಚೌಕಟ್ಟು

## ಐದು ವರ್ಷಗಳ ಅವಧಿಗೆ ಯೋಜನಾ ಹಣಕಾಸು ಗಾತ್ರ :

(ರೂ. ಕೋಟಿಗಳಲ್ಲಿ)

| | ಘಟಕಗಳು | ಒಟ್ಟು ಮೊತ್ತ | ಐ.ಡಿ.ಎ ನಿಂದ ಪಡೆಯಲಾದ ನೆರವು | | ರಾಜ್ಯ ಸರ್ಕಾರದ ಪಾಲು | |
|---|---|---|---|---|---|---|
| | | | ಮೊತ್ತ | ಶೇಖಡಾವಾರು | ಮೊತ್ತ | ಶೇಖಡಾವಾರು |
| 1. | ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನ | 510.00 | 510.00 | 100.00 | – | – |
| 2. | ಸಾಮಾಗ್ರಿಗಳು, ಸೇವೆಗಳು ಮತ್ತು ಕೆಲಸ | 67.75 | 22.36 | 33.00 | 45.39 | 67.00 |
| 3. | ಹೆಚ್ಚುವರಿ ಕಾರ್ಯಾಚರಣೆ ವೆಚ್ಚ ಸಂಬಳ, ಪ್ರವಾಸ, ದಿನಭತ್ಯೆ, | 11.55 | 4.12 | 33.00 | 7.43 | 67.00 |
| 4. | ಸಾದಿಲ್ವಾರು ವೆಚ್ಚ, ಇತ್ಯಾದಿ. | 10.70 | 3.52 | 33.00 | 7.18 | 67.00 |
| | ಒಟ್ಟು | 600.00 | 540.00 | 90.00 | 60.00 | 10.00 |

## ಗ್ರಾಮ ಸ್ವರಾಜ್ ಯೋಜನೆಯಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಚಟುವಟಿಕೆಗಳ ಸ್ಥೂಲ ಪರಿಚಯ : ಯೋಜನಾ ಪ್ರಕ್ರಿಯೆ

ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಒದಗಿಸಲಾಗುತ್ತಿರುವ ಮುಕ್ತ ಅನುದಾನದ ವಿನಿಯೋಗಕ್ಕೆ ಗ್ರಾಮ ಪಂಚಾಯತಿಗಳು ಪ್ರತಿ ವರ್ಷ ವಾರ್ಡ್ / ಗ್ರಾಮ ಸಭೆ ನಿರ್ಧಾರಿತ, ಸಾಮಾನ್ಯ ಸಭೆ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸಬೇಕಾಗಿರುತ್ತದೆ. ಈ ಕ್ರಿಯಾ ಯೋಜನೆಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ,1993ರ ಪ್ರಕರಣ 58ರಲ್ಲಿ ತಿಳಿಸಿದ ಎಲ್ಲಾ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಬಳಸಿಕೊಳ್ಳಬಹುದಾಗಿದೆ. ಮತ್ತು ಆ ಮೂಲಕ ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳು ತಮ್ಮ ಈಗಿನ ಸ್ಥಿತಿಯನ್ನು ಸುಧಾರಿಸಿಕೊಂಡು ಜನತೆಗೆ ಉತ್ತಮ ಸೇವೆಯನ್ನು ಒದಗಿಸಲು ಕ್ರಮವಹಿಸಲಾಗಿದೆ. ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳು ಇದುವರೆಗೆ ಎಲ್ಲಾ ಸಾಲಿನ ತಮ್ಮ ಕ್ರಿಯಾ ಯೋಜನೆಗಳನ್ನು ತಯಾರಿಸಿದ್ದು ಅನುಷ್ಠಾನದಲ್ಲಿ ತೊಡಗಿಸಿಕೊಂಡಿವೆ.

## ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನ ಬಿಡುಗಡೆ :

ಯೋಜನೆಯ ಘಟಕ – ಎ ಅಡಿಯಲ್ಲಿ ಯೋಜನಾ ವ್ಯಾಪ್ತಿಯ 1341 ಗ್ರಾಮ ಪಂಚಾಯತಿಗಳಿಗೆ 2006–07, 2007–08, 2008–09, 2009–10 ಮತ್ತು 2010–11ನೇ ಆರ್ಥಿಕ ಸಾಲುಗಳಿಗೆ ಪ್ರತಿ ಗ್ರಾಮ ಪಂಚಾಯತಿಗೆ ಕ್ರಮವಾಗಿರೂ. 6, 8, 10, 8 ಮತ್ತು 6 ಲಕ್ಷಗಳಂತೆ ಮುಕ್ತ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿಗೆ ಈ ಅನುದಾನವನ್ನು ಸೂತ್ರದ ಅನ್ವಯ ಹಂಚಿಕೆ ಮಾಡಲಾಗುತ್ತಿದ್ದು ಸೂತ್ರದಲ್ಲಿ ಆಯಾ ಗ್ರಾಮ ಪಂಚಾಯತಿಯ ಭೌಗೋಳಿಕ ವಿಸ್ತೀರ್ಣ, ಒಟ್ಟು ಜನ ಸಂಖ್ಯೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನ ಸಂಖ್ಯೆ, ಅನಕ್ಷರಸ್ಥರ ಜನ ಸಂಖ್ಯೆ ಮತ್ತು ಇತ್ಯಾಧಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯತಿಗಳು ಈ ಅನುದಾನವನ್ನು ಪಡೆದು ತಾವು ತಯಾರಿಸಿದ ಕ್ರಿಯಾ ಯೋಜನೆಗಳ ಅನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಬಿಡುಗಡೆಗೊಳಿಸಿದ ಅನುದಾನಕ್ಕೆ ಹಣ ಬಳಕೆ ಪತ್ರಗಳನ್ನು ಯೋಜನಾ ಕಛೇರಿಗೆ ಸಲ್ಲಿಸುವುದರ ಮೂಲಕ ನಂತರದ ಕಂತಿನ ಅನುದಾನವನ್ನು ಪಡೆಯಲು ಅರ್ಹತೆಗಳಿಸುತ್ತವೆ.

## ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿಗಾಗಿ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯ ಸೌಧ ಕಟ್ಟಡಗಳ ನಿರ್ಮಾಣ :

ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಈ ಯೋಜನಾ ವತಿಯಿಂದ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತವಾದ ಸಾಮರ್ಥ್ಯ ಸೌಧ ಕಟ್ಟಡಗಳನ್ನು ಪ್ರತಿಯೊಂದಕ್ಕೆ ರೂ. 16 ರಿಂದ 25 ಲಕ್ಷಗಳ ಅನುದಾನವನ್ನು ಒದಗಿಸುವುದರ ಮೂಲಕ ನಿರ್ಮಿಸಲಾಗುತ್ತಿದೆ. ಇಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸಂಬಂಧಿತ ಇತರೆ ಇಲಾಖೆಗಳ ಅಧಿಕಾರಿ ಹಾಗೂ ಸಿಬ್ಬಂಧಿಗಳಿಗೆ, ಸ್ವ ಸಹಾಯ ಗುಂಪುಗಳು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆರೋಗ್ಯ ಕಾರ್ಯಕರ್ತೆಯರಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡಲು ಉದ್ದೇಶಿಸಲಾಗಿದೆ. ಸಾಮರ್ಥ್ಯ ಸೌಧ ಕಟ್ಟಡಗಳ ನಿರ್ಮಾಣ ಕಾರ್ಯಕ್ಕಾಗಿ ಇದುವರೆಗೆ ರೂ. 24.38 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು ಇದರಲ್ಲಿ ರೂ. 17.62 ಕೋಟಿಗಳನ್ನು ವಿನಿಯೋಗಿಸಿ 90 ಕಟ್ಟಡಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಬಾಕಿ 85 ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಶೀಘ್ರವೇ ಪೂರ್ಣಗೊಳಿಸುವ

ಜೀವನ ಎಂಬುದು ನಿಮ್ಮ ಎಲ್ಲಾ ಆಯ್ಕೆಗಳ ಒಟ್ಟು ರೂಪ.

ವಿಶ್ವಾಸ ಹೊಂದಲಾಗಿದೆ. ಇಷ್ಟೇ ಅಲ್ಲದೇ ಪೂರ್ಣಗೊಂಡಿರುವ ಪ್ರತಿ ಸಾಮರ್ಥ್ಯ ಸೌಧ ಕಟ್ಟಡದಲ್ಲಿ ತರಬೇತಿ ನಡೆಸಲು ಅಗತ್ಯವಾಗಿ ಬೇಕಾಗಿರುವ ಅಗತ್ಯ ಪಿಠೋಪಕರಣಗಳು ಮತ್ತಿತರೆ ಉಪಕರಣಗಳ ಅಳವಡಿಕೆಗಾಗಿ ರೂ.1.824 ಲಕ್ಷಗಳ ಅನುದಾನವನ್ನು ಗ್ರಾಮ ಸ್ವರಾಜ್ ಯೋಜನಾ ವತಿಯಿಂದ ಬಿಡುಗಡೆಗೊಳಿಸಲಾಗುತ್ತಿದೆ.

**ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯ ವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಪರಿಣಾಮಕಾರಿ ಅನುಷ್ಠಾನದ ಉಸ್ತುವಾರಿ :**

ಸದರಿ ನಿಯಮಗಳನ್ವಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಲೆಕ್ಕಪತ್ರಗಳನ್ನು ಜೋಡಿ ದಾಖಲೆ ಲೆಕ್ಕಪತ್ರ ಪದ್ಧತಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಸಹಕರಿಸಲು ಚಾರ್ಟರ್ಡ್ ಅಕೌಂಟೆಂಟ್ ಫರ್ಮ್‌ಗಳ ಸೇವೆಯನ್ನು ಗ್ರಾಮ ಪಂಚಾಯತಿಗಳಿಗೆ ಒದಗಿಸಿಕೊಡಲಾಗಿದೆ. ಹೊಸ ನಿಯಮಗಳನ್ವಯ ಲೆಕ್ಕಪತ್ರಗಳನ್ನು ಕಡ್ಡಾಯಗೊಳಿಸಲಾಗಿದ್ದು ಈ ಕಾರ್ಯದ ಉಸ್ತುವಾರಿಯನ್ನು ಗ್ರಾಮ ಸ್ವರಾಜ್ ಯೋಜನಾ ವತಿಯಿಂದ ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.

**ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳನ್ನು ಹೊಸ ನಿಯಮಗಳನ್ವಯ ನಿರ್ವಹಿಸಲು ಅನುಕೂಲವಾಗುವಂತೆ ಗಣಕ ತಂತ್ರಾಂಶದ ಅಭಿವೃದ್ಧಿ :**

ಕರ್ನಾಟಕ ಪಂಚಾಯತ್ ರಾಜ್ ( ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು ) ನಿಯಮಗಳು 2006ರ ಅನ್ವಯ ನಿಗಧಿಪಡಿಸಿದ ಗ್ರಾಮ ಪಂಚಾಯತಿಗಳ ಲೆಕ್ಕಪತ್ರ ನಿರ್ವಹಣೆಯನ್ನು ಜೋಡಿ ದಾಖಲೆ ಲೆಕ್ಕಪತ್ರ ಪದ್ಧತಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ನಿಯಮಗಳಲ್ಲಿ ಕಡ್ಡಾಯಗೊಳಿಸಿದ ಇತರೆ ಎಲ್ಲಾ ಅಂಶಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಗೂ ಗ್ರಾಮ ಪಂಚಾಯತಿಗಳ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಶೀಘ್ರತೆಯನ್ನು ತರಲು ಎನ್.ಐ.ಸಿ ಸಹಯೋಗದಲ್ಲಿ ಪಂಚತಂತ್ರ ಹೆಸರಿನ ಗಣಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲಾಗುತ್ತಿದೆ. ಈ ತಂತ್ರಾಂಶದ ಕಾರ್ಯವಿಧಾನದ ಬಗ್ಗೆ ವಿಶ್ವ ಬ್ಯಾಂಕ್‌ನವರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ. ಅಲ್ಲದೇ ಪಂಚತಂತ್ರ ಗಣಕ ತಂತ್ರಾಂಶದ ಅಭಿವೃದ್ಧಿ ಮತ್ತು ಅಳವಡಿಕೆಯ ಉತ್ತಮ ಕಾರ್ಯಕ್ಕಾಗಿ ಭಾರತ ಸರ್ಕಾರದಿಂದ ಬಂಗಾರದ ಪದಕ ಮತ್ತು ಪ್ರಶಸ್ತಿ ಪತ್ರದೊಂದಿಗೆ ಪುರಸ್ಕಾರ ದೊರೆತಿರುವುದು ಸಹ ಹೆಮ್ಮೆಯ ವಿಷಯವಾಗಿದೆ. ವೆಬ್‌ಸೈಟ್ ವಿಳಾಸ : **http://panchatantra.kar.nic.in**

**ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳ ಸಾಮರ್ಥ್ಯಾಭಿವೃದ್ಧಿಗಾಗಿ ವಿಶೇಷ ಕಾರ್ಯ ಚಟುವಟಿಕೆ:**

ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯಲ್ಲಿ ಬರುವ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳ ಕಾರ್ಯಕ್ಷಮತೆಯನ್ನು ಉತ್ತಮಪಡಿಸಲು, ಈ ಭಾಗದ ಸಾರ್ವಜನಿಕರಲ್ಲಿ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲು, ಗ್ರಾಮ ಪಂಚಾಯತಿಗಳು ಸಾರ್ವಜನಿಕರಿಗೆ ಒದಗಿಸುತ್ತಿರುವ ಸೇವೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಉಂಟು ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಲು ಅನುಕೂಲವಾಗುವಂತೆ ಯೋಜನಾ ವತಿಯಿಂದ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಹಲವು ಭಾಗೀದಾರರಿಗೆ ನೀಡಲಾಗಿದೆ. ಅಲ್ಲದೇ ಯೋಜನಾ ವತಿಯಿಂದ ವಿವಿಧ ಮಾಧ್ಯಮಗಳಾದ ದಿನಪತ್ರಿಕೆಗಳು, ದೂರದರ್ಶನ, ರೇಡಿಯೋಗಳ ಮೂಲಕ, ಕಲಾಜಾಥಗಳ ಮೂಲಕ ಪ್ರಚಾರ ಮತ್ತು ಅರಿವು ಕಾರ್ಯಕ್ರಮಗಳನ್ನು ನಿರ್ವಹಿಸಲಾಗಿದೆ.

**ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾಮಗಾರಿಗಳಲ್ಲಿ ಪರಿಸರ ಸಂಬಂಧದ ಮಾರ್ಗಸೂಚಿಗಳ ಪರಿಣಾಮಕಾರಿ ಅನುಷ್ಠಾನ :**

ಗ್ರಾಮ ಸ್ವರಾಜ್ ಯೋಜನೆಯಡಿ ಯೋಜನಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಒದಗಿಸಲಾಗುತ್ತಿರುವ ಮುಕ್ತ ಅನುದಾನದ ನೆರವಿನಿಂದ ಗ್ರಾಮ ಪಂಚಾಯತಿಗಳು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗದಂತೆ ತಡೆಯಲು ಯೋಜನಾ ವತಿಯಿಂದ ಪರಿಸರ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಯೋಜನಾ ವತಿಯಿಂದ ಶ್ರಮಿಸಲಾಗುತ್ತಿದೆ.

**ಗ್ರಾಮ ಸ್ವರಾಜ್ ಯೋಜನೆಯ ವೆಬ್‌ಸೈಟ್ ಸ್ಥಾಪನೆ ಮತ್ತು ನಿರ್ವಹಣೆ :**

ಗ್ರಾಮ ಸ್ವರಾಜ್ ಯೋಜನೆಯ ಬಗೆಗಿನ ಮಾಹಿತಿ ಮತ್ತು ಯೋಜನೆಗೆ ಸಂಬಂಧಿಸಿದ ವಿವರಗಳು ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ದೊರಕುವಂತೆ ಮಾಡಲು ಯೋಜನಾ ವತಿಯಿಂದ ಪ್ರತ್ಯೇಕ ವೆಬ್‌ಸೈಟ್‌ವೊಂದನ್ನು ರೂಪಿಸಿ ನಿರ್ವಹಿಸಲಾಗುತ್ತಿದೆ. **ವೆಬ್‌ಸೈಟ್ ವಿಳಾಸ : http://rdpr.kar.nic.in/gramswaraj.htm**

**ಯೋಜನೆಯಡಿ ಸಾಧಿಸಲಾದ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಗಳ ವ್ಯವಸ್ಥಿತ ದಾಖಲಾತಿ :**

ಗ್ರಾಮ ಸ್ವರಾಜ್ ಯೋಜನೆಯಡಿ ಬಿಡುಗಡೆಗೊಳಿಸಿದ ಎಲ್ಲಾ ಅನುದಾನಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಗಳು ಪ್ರತಿ ಮಾಹೆ ಯೋಜನಾ ಕಛೇರಿಗೆ ಮತ್ತು ಸರ್ಕಾರಕ್ಕೆ ಸುಲಭವಾಗಿ ಲಭ್ಯವಾಗುವ ರೀತಿಯಲ್ಲಿ ಈ ವರದಿಗಳನ್ನು ಆನ್‌ಲೈನ್ ಎಂ.ಐ.ಎಸ್ ಮಾದರಿಯಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಗ್ರಾಮ ಸ್ವರಾಜ್ ಯೋಜನೆಯ ಒಟ್ಟು ಯೋಜನಾ ಮೊತ್ತ ರೂ. 600 ಕೋಟಿಗಳ ಪೈಕಿ ಆಯವ್ಯಯದಲ್ಲಿ ಇದುವರೆಗೆ ರೂ. 561.80 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ. ಈ ಅನುದಾನದಲ್ಲಿ ರೂ. 459.06 ಕೋಟಿಗಳನ್ನು ಸಂಬಂಧಿಸಿದ ವಿವಿಧ ಅನುಷ್ಠಾನ ಪ್ರಾಧಿಕಾರಗಳಿಗೆ ಬಿಡುಗಡೆಗೊಳಿಸಲಾಗಿದ್ದು ಕ್ಷೇತ್ರ ಮಟ್ಟದಲ್ಲಿ ರೂ. 334.73 ಕೋಟಿಗಳನ್ನು ವಿನಿಯೋಗಿಸಿ ವಿವಿಧ ಸಾಧನೆ ಮಾಡಲಾಗಿದೆ. ಆ ಪೈಕಿ ಭೌತಿಕ ಒಟ್ಟು 63794 ಕಾಮಗಾರಿಗಳ ಗುರಿಯಲ್ಲಿ 57720 ವಿವಿಧ ಕಾಮಗಾರಿಗಳನ್ನು ಪೂರ್ಣಗೊಳಿಸಿ ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ. ಕಾಮಗಾರಿಗಳ ವಿವರವಾದ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ಒದಗಿಸಲಾಗಿದೆ.

ಸ್ವೀಕರಿಸುವುದಕ್ಕಿಂತ ನೀಡುವುದೇ ಲೇಸು. ಏಕೆಂದರೆ ನೀಡುವಿಕೆಯಲ್ಲೇ ಸ್ವೀಕಾರದ ಪ್ರಕ್ರಿಯೆ ಆರಂಭವಾಗಿರುತ್ತದೆ.

| ಕ್ರ. ಸಂ. | ಕಾಮಗಾರಿಗಳ ಹೆಸರು | ಕಾಮಗಾರಿಗಳ ಸಂಖ್ಯೆ | ವಿನಿಯೋಗಿಸಿದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| 1 | ಗ್ರಾಮಗಳಲ್ಲಿ ಸಿ.ಸಿ ರಸ್ತೆಗಳ ನಿರ್ಮಾಣ | 9360 | 69.39 |
| 2 | ಗ್ರಾಮಗಳಲ್ಲಿ ಡಾಂಬರು ರಸ್ತೆಗಳ ನಿರ್ಮಾಣ | 2340 | 7.61 |
| 3 | ಗ್ರಾಮಗಳಲ್ಲಿ ಚರಂಡಿಗಳ ನಿರ್ಮಾಣ | 15015 | 79.26 |
| 4 | ಗ್ರಾಮಗಳಲ್ಲಿ ಸೇತುವೆಗಳ ನಿರ್ಮಾಣ | 1365 | 4.15 |
| 5 | ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣ | 157 | 10.93 |
| 6 | ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ | 1170 | 2.93 |
| 7 | ಅಂಗನವಾಡಿ ಕಟ್ಟಡಗಳ ನಿರ್ಮಾಣ | 7020 | 48.80 |
| 8 | ಗ್ರಂಥಾಲಯ ಕಟ್ಟಡಗಳ ನಿರ್ಮಾಣ | 975 | 4.40 |
| 9 | ಕುಡಿಯುವ ನೀರು ಸರಬರಾಜು ಸಂಬಂಧಿತ ಕಾಮಗಾರಿಗಳು | 1755 | 2.46 |
| 10 | ಶಾಲಾ ಕಟ್ಟಡಗಳ ನಿರ್ಮಾಣ | 4290 | 24.77 |
| 11 | ಬೀದಿ ದೀಪಗಳ ಅಳವಡಿಕೆ ಕಾಮಗಾರಿಗಳು | 1365 | 0.97 |
| 12 | ಗ್ರಾಮಗಳಲ್ಲಿ ಶೌಚಾಲಯಗಳ ನಿರ್ಮಾಣ | 6473 | 39.87 |
| 13 | ಗ್ರಾಮಗಳಲ್ಲಿ ಬಸ್ ತಂಗುದಾಣಗಳ ನಿರ್ಮಾಣ | 1755 | 2.46 |
| 14 | ಇತರೆ ಕಾಮಗಾರಿಗಳು | 4680 | 28.20 |
| | **ಒಟ್ಟು** | **57720** | **326.19** |

**ಸ್ಯಾಟ್‌ಕಾಂ – ಉಪಗ್ರಹ ಆಧಾರಿತ ತರಬೇತಿ ಕೇಂದ್ರಗಳ ಸ್ಥಾಪನೆ :** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕೈಗೊಳ್ಳಲಾಗುವ ತರಬೇತಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಶೀಘ್ರವಾಗಿ ಒದಗಿಸಲು ಅನುಕೂಲವಾಗುವಂತೆ ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮಾದರಿಯಲ್ಲಿ ಗ್ರಾಮ ಸ್ವರಾಜ್ ಯೋಜನಾ ವತಿಯಿಂದ ರಾಜ್ಯದ ಇತರೆ ಐದು ಕಡೆಗಳಾದ ದಾರವಾಡ, ದಾವಣಗೆರೆ, ಬೆಂಗಳೂರು, ಗುಲಬರ್ಗಾ ಮತ್ತು ಮಂಗಳೂರುಗಳಲ್ಲಿ ಉಪಗ್ರಹ ಆಧಾರಿತ ತರಬೇತಿ ಕೇಂದ್ರಗಳನ್ನು (ಸ್ಟುಡಿಯೋಗಳನ್ನು) ಸ್ಥಾಪಿಸಲು ಕ್ರಮವಹಿಸಲಾಗಿದೆ. ಇದರಿಂದ ಆಯಾ ಭಾಗದ ಜನರು ತಮ್ಮದೇ ಆದ ಭಾಷೆ ಹಾಗೂ ರೀತಿಯಲ್ಲಿ ತರಬೇತಿಯನ್ನು ಪಡೆಯಬಹುದಾಗಿದೆ. ಈ ಕೇಂದ್ರಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು ಉಪಕರಣಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.

**ತಾಲ್ಲೂಕು ಸಂಪನ್ಮೂಲ ಕೋಶಗಳು :** ಗ್ರಾಮ ಸ್ವರಾಜ್ ಯೋಜನೆಯನ್ನು ಪರಿಣಾಮಕಾರಿ ಯಾಗಿ ಅನುಷ್ಠಾನಗೊಳಿಸಿ ಯೋಜನೆಯ ನಿರೀಕ್ಷಿತ ಉದ್ದೇಶಗಳನ್ನು ಸಾಧಿಸುವಲ್ಲಿ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಹಕರಿಸಲು ಯೋಜನಾ ವ್ಯಾಪ್ತಿಯ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಗ್ರಾಮ ಸ್ವರಾಜ್ ಯೋಜನಾ ವತಿಯಿಂದ ತಾಲ್ಲೂಕು ಸಂಪನ್ಮೂಲ ಕೋಶಗಳನ್ನು ಸ್ಥಾಪಿಸಲಾಗಿದೆ. ಸಾಮಾಜಿಕ ಸಂಘಟನೆ, ಹಣಕಾಸು ಲೆಕ್ಕಪತ್ರ ಮತ್ತು ಗಣಕೀಕರಣ ಹಾಗೂ ಮಾಹಿತಿ ನಿರ್ವಹಣೆ ಸಲುವಾಗಿ ಈ ಕೋಶಗಳಲ್ಲಿ ಮೂರು ಜನ ಸಮಾಲೋಚಕರ ಸೇವೆಯನ್ನು ಪಡೆಯಲಾಗಿದೆ. ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದಲ್ಲಿ ಈ ಸಮಾಲೋಚಕರು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಾರೆ.

**ಉಪ ಸಂಹಾರ :** ಒಟ್ಟಾರೆಯಾಗಿ ಹೇಳುವುದಾದರೆ ಗ್ರಾಮ ಸ್ವರಾಜ್ ಯೋಜನೆಯ ಪರಿಕಲ್ಪನೆ ಇಡೀ ದೇಶದಲ್ಲೇ ಪ್ರಥಮದ್ದಾಗಿದ್ದು ಪ್ರಾಯೋಗಿಕವಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಯಶಸ್ಸನ್ನು ಆಧರಿಸಿ ವಿಶ್ವ ಬ್ಯಾಂಕಿನವರು ದೇಶದ ಇತರೆ ರಾಜ್ಯಗಳಿಗೆ ವಿಸ್ತರಿಸುವ ಉದ್ದೇಶವನ್ನು ಹೊಂದಿದ್ದಾರೆ. ರಾಜ್ಯದ ಮಟ್ಟಿಗೆ ಹೇಳುವುದಾದರೆ ಇದು ಒಂದು ವಿನೂತನ ಪ್ರಯೋಗವಾಗಿದ್ದು ಪಂಚಾಯತ್ ರಾಜ್ ಸಂಸ್ಥೆಗಳನ್ನು ಅದರಲ್ಲೂ ತಳಮಟ್ಟದಲ್ಲಿರುವ 1341 ಗ್ರಾಮ ಪಂಚಾಯತಿಗಳನ್ನು ಸಬಲೀಕರಣಗೊಳಿಸಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂಬ ಹಣೆಪಟ್ಟಿಯಿಂದ ಹೊರಬರಲು ತಾಲ್ಲೂಕುಗಳಿಗೆ ಸಹಕಾರಿಯಾಗಲಿದೆ. ಯೋಜನೆಯ ಅನುಷ್ಠಾನವು ಇದುವರೆಗೆ ಅತ್ಯಂತ ಸಮರ್ಪಕವಾಗಿ ಸಾಗಿದ್ದು ಉತ್ತಮ ಪ್ರಗತಿಯನ್ನು ಸಾಧಿಸಲಾಗಿದೆ. ಯೋಜನೆಯ ಉದ್ದೇಶಗಳನ್ನು ಹಾಗೂ ನಿರೀಕ್ಷಿತ ಫಲಶ್ರುತಿಗಳನ್ನು ಈಡೇರಿಸಲು ಶ್ರಮಿಸಲಾಗುತ್ತಿದೆ. ಗ್ರಾಮ ಪಂಚಾಯತಿಗಳ ಹಣಕಾಸು ಮತ್ತು ದಾಖಲಾತಿಗಳ ನಿರ್ವಹಣೆ, ಗಣಕೀಕರಣ, ಸ್ವ ಸಂಪನ್ಮೂಲಗಳ ಸಂಗ್ರಹದಲ್ಲಿ ಗಣನೀಯ ಹೆಚ್ಚಳ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನರ ಸಹಭಾಗಿತ್ವವನ್ನು ಖಾತ್ರಿಪಡಿಸುವುದು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಪಂಚಾಯತಿಗಳು ಸಾರ್ವಜನಿಕರಿಗೆ ಒದಗಿಸುತ್ತಿರುವ ಸೇವೆಗಳಲ್ಲಿ ಪರಿಣಾಮಕಾರಿ ಸುಧಾರಣೆ ಹೀಗೆ ಹತ್ತು ಹಲವು ಪ್ರಯೋಜನಗಳು ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ನೆರವಿನಿಂದ ರಾಜ್ಯಕ್ಕೆ ಪ್ರಯೋಜನವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ❑

ತ್ಯಾಗ, ಪ್ರೀತಿ, ಕರುಣೆ, ವಿನಯ ಮತ್ತು ಪ್ರಾಮಾಣಿಕತೆಯೇ ನಿಜವಾದ ಶಿಕ್ಷಣ.



ಡಾ. ಕೆ.ವಿ. ದೇವರಾಜುಲು *

ಗ್ರಾಮ ಸ್ವರಾಜ್ ಯೋಜನೆಯಿಂದ ಅನುದಾನವನ್ನು ಒದಗಿಸಿದ ಕಾರ್ಯಕ್ರಮಗಳಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ತಿಳಿದಿರಬೇಕು. ಅದರ ದುಷ್ಪರಿಣಾಮಗಳಿಗೆ ಪರಿಹಾರೋಪಾಯ ಗಳನ್ನು ಒದಗಿಸಬೇಕು.

# ನಮ್ಮ ಪರಿಸರ – ನಮ್ಮ ಜವಾಬ್ದಾರಿ

## (ಗ್ರಾಮ ಪಂಚಾಯಿತಿಗಳಿಗೆ ಪರಿಸರ ನಿರ್ವಹಣಾ ಚೌಕಟ್ಟು)

– ವಿದ್ಯಾಶ್ರೀ ಎಸ್. ಪ್ರವೀಣ್**

ಪರಿಸರ ನಾಶ ಒಂದು ದೊಡ್ಡ ಸಮಸ್ಯೆಯಾಗಿದೆ. ಪರಿಸರ ಮಾಲಿನ್ಯದಿಂದ ಸಾರ್ವಜನಿಕ ಬದುಕು ಅಸಹನೀಯವಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರು, ನೀರಾವರಿ ಯೋಜನೆಗಳು, ಆಧುನಿಕ ಜೀವನ ಶೈಲಿ ಮುಂತಾದ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ ಪರಿಸರ ಶೋಷಣೆ, ಮಾನವನ ಹಸ್ತಕ್ಷೇಪ ಮಿತಿ ಮೀರಿದೆ. ಅರಣ್ಯ ನಾಶವಾಗುತ್ತಿದೆ. ಅಂತರ್ಜಲ ಮಟ್ಟ ಕುಸಿಯುತ್ತಿದೆ. ಆಧುನಿಕ ಕೃಷಿ ಪದ್ಧತಿಯ ಹೆಸರಿನಲ್ಲಿ ರಸಗೊಬ್ಬರಗಳ ಬಳಕೆಯಿಂದ ಭೂಮಿಯ ತನ್ನ ಒಡಲಲ್ಲಿ ಅಡಗಿಸಿಕೊಂಡಿದ್ದ, ಫಲವತ್ತತೆಗೆ ಪೂರಕವಾದ ಅಸಂಖ್ಯಾತ ಜೀವ ಸಂಕುಲಗಳ ನಾಶವುಂಟಾಗಿ ಬರಡಾಗುತ್ತಿದೆ. ಕೀಟನಾಶಕಗಳ ಅವೈಜ್ಞಾನಿಕ ಬಳಕೆಯಿಂದ (ದುರ್ಬಳಕೆ) ಉಪಕಾರಿ ಕೀಟಗಳನ್ನು ಕೊಲ್ಲಲಾಗುತ್ತಿದೆ, ವಾಯು ಮತ್ತು ಜಲಮಾಲಿನ್ಯಕ್ಕೂ ಇದು ಕಾರಣವಾಗಿರುತ್ತದೆ. ಅಲ್ಪಾವಧಿ ಲಾಭಕ್ಕಾಗಿ ಈ ಎಲ್ಲಾ ಅನಾಹುತಗಳಿಗೆ ನಾವು ಆಹ್ವಾನ ನೀಡಿದ್ದೇವೆ.

ಪರಿಸರಕ್ಕೆ ತನ್ನದೇ ಆದ ಪದ್ಧತಿಯಿದೆ. ಪ್ರತಿಯೊಂದು ಜೀವಿ ಸಂಕುಲಕ್ಕೆ ತನ್ನದೇ ಆದ ವಿಕಸನ ವ್ಯವಸ್ಥೆಯಿದೆ. ಪರಿಸರಕ್ಕೂ ಮತ್ತು ಜೀವ ಸಂಕುಲಕ್ಕೂ (ಮಾನವ ಸಹಿತ) ಅವಿನಾಭಾವ ಸಂಬಂಧವಿದೆ, ಅವಲಂಬನವಿದೆ. ಇದೊಂದು ಸಂಪೂರ್ಣ ವ್ಯವಸ್ಥಿತ ಪದ್ಧತಿ. ಇಂತಹ ಜೀವಜಾಲಗಳನ್ನೊಳಗೊಂಡ ಪರಿಸರವನ್ನು ನಮ್ಮ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

ಈ ದಿಸೆಯಲ್ಲಿ ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಪರಿಸರ ಹಾನಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾರ್ಗೋಪಾಯಗಳನ್ನು ವಿವಿಧ ಇಲಾಖೆಗಳು, ಸಂಸ್ಥೆಗಳ ಮೂಲಕ ಕಂಡುಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯಿತಿಗಳ ಹಂತದಲ್ಲಿಯೂ ಇಂತಹ ಪ್ರಯತ್ನ ನಡೆಯಬೇಕು. ಪರಿಸರ ರಕ್ಷಣೆಯ ಬಗ್ಗೆ ಚಿಂತನೆ ನಡೆಸಿ ಪರಹಾರೋಪಾಯಗಳನ್ನು ಕಂಡುಕೊಳ್ಳಬೇಕಿದೆ.

ಗ್ರಾಮ ಸ್ವರಾಜ್ ಯೋಜನೆಯಿಂದ ಅನುದಾನವನ್ನು ಒದಗಿಸಿದ ಕಾರ್ಯಕ್ರಮಗಳಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ತಿಳಿದಿರಬೇಕು. ಅದರ ದುಷ್ಪರಿಣಾಮಗಳಿಗೆ ಪರಿಹಾರೋಪಾಯಗಳನ್ನು ಒದಗಿಸಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾಯೋಜನೆಯನ್ನು ರೂಪಿಸಬೇಕು. "ಪರಿಸರ ನಿರ್ವಹಣಾ ಚೌಕಟ್ಟು" ಮಾರ್ಗಸೂಚಿಗಳ ಆಧಾರದ ಮೇಲೆ ಮತ್ತು ನಿಗದಿಪಡಿಸಿದ ಮಾನದಂಡಗಳ ಅಂದಾಜು ಮಾಡುವುದಕ್ಕಾಗಿ ಓ.ಕೆ. ಕಾರ್ಡ್ ವ್ಯವಸ್ಥೆಯ ಮೂಲಕ ಯಥಾರ್ಥಗೊಳಿಸಬೇಕು.

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಸಾಮಾನ್ಯವಾಗಿ ಕೈಗೆತ್ತಿಕೊಳ್ಳುವ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಸರ ನಿರ್ವಹಣಾ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಗ್ರಾಮ ಪಂಚಾಯಿತಿಗಳಿಗೆ ವಿತರಿಸಲಾಗಿದೆ. ಪರಿಸರ ನಿರ್ವಹಣಾ ಮಾರ್ಗಸೂಚಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗ್ರಾಮ ಸ್ವರಾಜ್ ಯೋಜನಾ ಕಛೇರಿಯು ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಿ ಸಾಮರ್ಥ್ಯ ನಿರ್ಮಾಣಕ್ಕೆ ಕ್ರಮಕೈಗೊಂಡಿರುತ್ತದೆ.

### ತರಬೇತಿ ಕಾರ್ಯಕ್ರಮದ ಸ್ಥೂಲ ಪರಿಚಯ

ಸಿದ್ಧಪಡಿಸಿದ **"ಗ್ರಾಮ ಪಂಚಾಯಿತಿಗಳಿಗೆ ಪರಿಸರ ನಿರ್ವಹಣಾ ಚೌಕಟ್ಟು ವ್ಯವಸ್ಥೆ"**ಮಾರ್ಗಸೂಚಿಯನ್ನು ಆಧರಿಸಿ ತರಬೇತಿಯ ವಿನ್ಯಾಸ ಮತ್ತು ಅಧಿವೇಶನಗಳನ್ನು ಸಿದ್ಧಪಡಿಸಿ, ಎರಡು ರೀತಿಯ ತರಬೇತಿಯನ್ನು ನೀಡಲಾಗಿದೆ.

**ತರಬೇತುದಾರರ ತರಬೇತಿ –** ಎರಡು ತಂಡಗಳಲ್ಲಿ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. 1ನೇ ತಂಡ – ದಿನಾಂಕ 15.11.2010 ರಿಂದ 16.11.2010, 2ನೇ ತಂಡ – ದಿನಾಂಕ 22.11.2010 ರಿಂದ 23.11.2010

* ಪಂಚಾಯತಿ ಸೌಲಭ್ಯ ತಜ್ಞರು, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು
** ಕಾರ್ಯನಿರ್ವಾಹಕ ಸಹಾಯಕರು, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು

ಸೋಲಿಗೆ ಹೆದರುವ ಮಂದಿ ಯಶಸ್ಸಿನ ಸಂತೋಷವನ್ನು ಎಂದಿಗೂ ಅನುಭವಿಸಲು ಸಾಧ್ಯವಿಲ್ಲ.

**ಭಾಗೀದಾರರು :** ಪ್ರತಿ ತಾಲ್ಲೂಕಿನ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಮತ್ತು ಗ್ರಾಮ ಸ್ವರಾಜ್‌ನಿಂದ ತಾಲ್ಲೂಕಿಗೆ ನಿಯೋಜಿಸಲಾಗಿರುವ ಸಾಮಾಜಿಕ ಸಂಘಟಕರು.

**ಮುಖಾಮುಖಿ ತರಬೇತಿ –** ಯೋಜನಾ ವ್ಯಾಪ್ತಿಗೊಳಪಡುವ 39 ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿಗಳಲ್ಲಿ, ಆರು ತಂಡಗಳಲ್ಲಿ ಆಯೋಜಿಸಲಾಗಿತ್ತು. 1ನೇ ತಂಡ – ದಿನಾಂಕ 17.01.2011, 2ನೇ ತಂಡ – ದಿನಾಂಕ 18.01.2011, 3ನೇ ತಂಡ – ದಿನಾಂಕ 19.01.2011, 4ನೇ ತಂಡ – ದಿನಾಂಕ 24.01.2011, 5ನೇ ತಂಡ – ದಿನಾಂಕ 25.01.2011, 6ನೇ ತಂಡ – ದಿನಾಂಕ 10.02.2011

**ಭಾಗೀದಾರರು** 1) ಪ್ರತಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಾಕ್ಷರು., 2) ಪ್ರತಿ ಗ್ರಾಮ ಪಂಚಾಯಿತಿಯ ಸದಸ್ಯರಲ್ಲಿ ಒಬ್ಬರನ್ನು ಆಯ್ಕೆ ಮಾಡಿರುವ ಪರಿಸರ ಸಮಾಲೋಚಕರು., 3) ಪ್ರತಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 4) ಪಂಚಾಯಿತಿಗಳಿಗೆ ಸಂಬಂಧಿಸಿದ ಕಿರಿಯ/ಸಹಾಯಕ ಅಭಿಯಂತರು, 5) ತಾಲ್ಲೂಕು ಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಯೋಜನಾ ವಿಷಯ ನಿರ್ವಾಹಕರು. ತರಬೇತುದಾರರ ತರಬೇತಿಯಲ್ಲಿ ಭಾಗವಹಿಸಿದ್ದ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಮತ್ತು ಗ್ರಾಮ ಸ್ವರಾಜ್ ಯೋಜನೆಯ ಟಿಆರ್‌ಸಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ನಿಗದಿ ಮಾಡಿದ ದಿನಾಂಕಗಳಂದು ಮುಖಾಮುಖಿ ತರಬೇತಿ ಕಾರ್ಯಕ್ರಮವನ್ನು ನೆರವೇರಿಸಿರುತ್ತಾರೆ.

ಓ.ಕೆ.ಕಾರ್ಡ್ ಪದ್ಧತಿಯ ಅಗತ್ಯವನ್ನು ಮನಗಂಡು ತರಬೇತಿಯಲ್ಲಿ ಈ ವಿಷಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಾಮಾನ್ಯವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮ/ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು 15 ವಿಷಯಗಳ ಕುರಿತಂತೆ ಪರಿಸರಕ್ಕೆ ದಕ್ಕೆಯುಂಟುಮಾಡುವ ಅಂಶಗಳು, ನಿವಾರಣಾ ಕ್ರಮಗಳು, ಪರಿಸರ ನಿರ್ವಹಣೆಗಾಗಿ ಇರುವ ಸಾಂಸ್ಥಿಕ ರಚನೆ, ಓ.ಕೆ.ಕಾರ್ಡ್ ನಮೂನೆ, ಪರಿಸರ ಹಾನಿ ಗುರುತಿಸುವ ಸೂಚಕಗಳು, ಓ.ಕೆ.ಕಾರ್ಡ್ ಅನುಮೋದನೆ ಪ್ರಕ್ರಿಯೆ, ಅನುಮತಿಸದಿರುವ ಕೀಟನಾಶಕಗಳು, ಅನುಮತಿಸಿರುವ ಕೀಟನಾಶಕಗಳು, ರಾಜ್ಯದಲ್ಲಿ ಅಂತರ್ಜಲವನ್ನು ಮಿತಿ ಮೀರಿ ಶೋಷಣೆ ಮಾಡಿರುವ, ಅಪಾಯದಲ್ಲಿರುವ ಮತ್ತು ಕಡಿಮೆ ಅಪಾಯದಲ್ಲಿರುವ ಜಿಲ್ಲಾ/ತಾಲ್ಲೂಕುವಾರು ವಿವರಗಳು ಮುಂತಾದ ವಿಷಯಗಳನ್ನೊಳಗೊಂಡ ಕೈಪಿಡಿಯನ್ನು ಯೋಜನಾ ಕಛೇರಿಯಿಂದ ಸಿದ್ಧಪಡಿಸಿ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೆ, ತರಬೇತಿಯ ಭಾಗೀದಾರರುಗಳಿಗೆ ಹಂಚಿಕೆ ಮಾಡಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಯಾವುದೇ ಕಾಮಗಾರಿಯನ್ನು ಮಾಡಬೇಕಾದರೂ ಓ.ಕೆ.ಕಾರ್ಡ್ ಸಿದ್ಧಪಡಿಸಿ ಮುಂದುವರಿಯುವುದು ಕಡ್ಡಾಯವಾಗಿರುತ್ತದೆ. ಈ ದಿಸೆಯಲ್ಲಿ ಕೈಪಿಡಿಯು ತುಂಬಾ ಸಹಾಯಕವಾಗಿರುತ್ತದೆ. ಅನುಷ್ಠಾನದ ಜವಾಬ್ದಾರಿ ಹೊತ್ತ ಎಲ್ಲರೂ ಕೈಪಿಡಿಯನ್ನು ಆಧಾರವಾಗಿಟ್ಟುಕೊಂಡು ಚಾಚೂ ತಪ್ಪದೆ ಅದರಂತೆ ಅನುಸರಿಸಿದರೆ ಪರಿಸರ ನಿರ್ವಹಣೆಯಲ್ಲಿ ಯಶಸ್ಸನ್ನು ಕಾಣಬಹುದಾಗಿದೆ.

### ಓ.ಕೆ.ಕಾರ್ಡ್‌ಗಳನ್ನು ತುಂಬಲು ಅನುಸರಿಸಬೇಕಾದ ಕ್ರಮಗಳು

● ಓ.ಕೆ.ಕಾರ್ಡ್ ನಮೂನೆ (ಕೈಪಿಡಿ ಪುಟ–21) ಓದಿಕೊಳ್ಳಬೇಕು. ಗ್ರಾಮದ ವಿವರ, ಕ್ರಿಯಾ ಯೋಜನೆಯಲ್ಲಿರುವಂತೆ ಕಾಮಗಾರಿಯ ಹೆಸರನ್ನು ಬರೆಯಬೇಕು. ● ಸಂಭವಿಸಬಹುದಾದ ಹಾನಿ ಮತ್ತು ಕೈಗೊಳ್ಳಬೇಕಾದ ಪರಿಹಾರದ ಬಗ್ಗೆ ವಿವರ ಬರೆಯುವುದಕ್ಕಿಂತ ಮುಂಚಿತವಾಗಿ (ಕೈಪಿಡಿ ಪುಟ – 22 ಮತ್ತು 23)ರಲ್ಲಿರುವ ಹಾನಿಯನ್ನು ಗುರುತಿಸುವ ಸೂಚಕಗಳನ್ನು ಅವಲೋಕಿಸುವುದು ಅಗತ್ಯ. ● ಉದ್ದೇಶಿತ ಕಾಮಗಾರಿ ಅನುಷ್ಠಾನದ ಯಾವುದೇ ಹಂತದಲ್ಲಿ ಸೂಚಕಗಳಲ್ಲಿನ ವಿಷಯಕ್ಕೆ ನಿಮ್ಮ ಉತ್ತರ 'ಇಲ್ಲ' ಎಂದಾದರೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ● ನಿಮ್ಮ ಉತ್ತರ 'ಹೌದು' ಎಂದಾದರೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಾರದು/ರದ್ದುಪಡಿಸಬೇಕು. ಒಂದು ವೇಳೆ ಹಾನಿಯನ್ನು ಸರಿದೂಗಿಸಲು ಅವಕಾಶವಿದ್ದಲ್ಲಿ ಅಂತಹ ಕ್ರಮಗಳನ್ನು ಖಾತರಿಪಡಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದು. ● ಕೈಪಿಡಿಯ ಪುಟ ಸಂಖ್ಯೆ 1 ರಿಂದ 19ರವರೆಗೆ 15 ವಿಷಯಗಳಿಗೆ ಸಂಬಂಧಿಸಿದಂತೆ ಸಂಭವನೀಯ ಹಾನಿ, ಮತ್ತು ನಿವಾರಣಾ ಕ್ರಮಗಳನ್ನು ವಿವರಿಸಿದೆ. ಇದನ್ನು ಅವಲೋಕಿಸಿದರೆ ವಿವರಗಳನ್ನು ದಾಖಲಿಸಲು ಸುಲಭವಾಗುತ್ತದೆ. ● ವಿವರಿಸಿದ ವಿಷಯಗಳಿಗೆ ಹೊಂದಾಣಿಕೆ ಯಾಗದಿದ್ದಲ್ಲಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ವಿವರಗಳನ್ನು ದಾಖಲಿಸಬಹುದು. ● ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ತಾಂತ್ರಿಕವಾಗಿ ವಿಶ್ಲೇಷಿಸಿ ಓ.ಕೆ.ಕಾರ್ಡ್‌ನ್ನು ಸಿದ್ಧಪಡಿಸುವುದು ಮತ್ತು ಕ್ರಮ ಕೈಗೊಳ್ಳುವುದು ಕಿರಿಯ/ಸಹಾಯಕ ಅಭಿಯಂತರುಗಳ ಜವಾಬ್ದಾರಿಯಾಗಿರುತ್ತದೆ. ● ಈ ರೀತಿ ತುಂಬಿ ಓ.ಕೆ.ಕಾರ್ಡುಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು ಪರಿಸರ ಸಮಾಲೋಚಕರು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿಡಿಓ/ಕಾರ್ಯದರ್ಶಿ ಗಳದ್ದಾಗಿರುತ್ತದೆ. ● ಕಾಮಗಾರಿ ಮುಗಿದ ನಂತರ ಓ.ಕೆ.ಕಾರ್ಡ್‌ಗಳಲ್ಲಿ ದಾಖಲಿಸಿದಂತೆ ಕ್ರಮಕೈಗೊಳ್ಳಲಾಗಿದೆಯೇ? ಎಂದು ಪರಿಶೀಲಿಸುವುದು ಕಾರ್ಯನಿರ್ವಾಹಕ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ● ಕಾರ್ಯನಿರ್ವಾಹಕ ಅಧಿಕಾರಿಗಳ ಅನುಷ್ಠಾನದ ಪರಿಶೀಲನೆಯ ನಂತರವಷ್ಟೇ ಬಿಲ್ಲಿನ ಮೊತ್ತವನ್ನು ಪಾವತಿಸಬೇಕಾಗುತ್ತದೆ. ● ಈ ರೀತಿ ಪೂರ್ಣಗೊಂಡ ಓ.ಕೆ.ಕಾರ್ಡ್ ಪ್ರತಿಯೊಂದು ಕಾಮಗಾರಿ ಕಡತದಲ್ಲಿರುವುದು ಕಡ್ಡಾಯ. ● ಜಿಲ್ಲಾ ಪಂಚಾಯಿತಿಯಿಂದ ನೇಮಕಗೊಂಡ ಮಾರ್ಗದರ್ಶಿ ಅಧಿಕಾರಿಗಳು ತಿಂಗಳಲ್ಲಿ ಕನಿಷ್ಠ 2 ಗ್ರಾಮ ಪಂಚಾಯಿತಿಗಳಲ್ಲಿ ಈ ದಾಖಲೆಗಳನ್ನು ಪರಿಶೀಲಿಸಬೇಕು. ● ಗ್ರಾಮ ಸ್ವರಾಜ್ ಯೋಜನೆಯ ಪಂಚಾಯಿತಿ ಸೌಲಭ್ಯ ತಜ್ಞರು ತಿಂಗಳಲ್ಲಿ ಕನಿಷ್ಠ 4 ಗ್ರಾಮ ಪಂಚಾಯಿತಿಗಳಲ್ಲಿ ಈ ದಾಖಲೆಗಳನ್ನು ಪರಿಶೀಲಿಸಬೇಕು.

ಇವೆಲ್ಲವುಗಳ ಜೊತೆಗೆ ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು, ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಳ್ಳುವುದರ ಮೂಲಕ, "ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ" ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ❑

ಹಚ್ಚೇವು ಕನ್ನಡದ ದೀಪ; ಕರುನಾಡ ದೀಪ ಸಿರಿ ನುಡಿಯ ದೀಪ, ಒಲವೆತ್ತಿ ತೋರುವ ದೀಪ.



# ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನದಲ್ಲಿ ಜಿಲ್ಲಾ ಪಂಚಾಯಿತಿ ಪಾತ್ರ



ಡಿ. ಜಯರಾಂ *

ಜನರಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ ಮತ್ತು ವಸತಿ ಇವುಗಳನ್ನು ಒದಗಿಸಿದರೆ ಅವರು ಸಹ ಕಂದಾಯ ವಸೂಲಾತಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಸಂದೇಹವಿಲ್ಲ.

ವಿಶ್ವಬ್ಯಾಂಕ್ ನೆರವಿನಿಂದ ಅನುಷ್ಠಾನಗೊಳಿಸುತ್ತಿರುವ ಗ್ರಾಮ ಸ್ವರಾಜ್ ಯೋಜನೆಯು ಕರ್ನಾಟಕ ಪಂಚಾಯತ್ ರಾಜ್ ಸಬಲೀಕರಣ ಯೋಜನೆಯಲ್ಲಿ ಬಹು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಗ್ರಾಮ ಸ್ವರಾಜ್ ಯೋಜನೆಯ ಮುಖ್ಯ ಉದ್ದೇಶ ಗ್ರಾಮ ಪಂಚಾಯಿತಿಗಳ ಸಬಲೀಕರಣ ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಹಾಗೂ ಸಾಧನ-ಸಾಲಕರಣೆಗಳ ಖರೀದಿಯಲ್ಲಿ ನಿಯಮಗಳನ್ನು ಪಾಲಿಸಿ ಮತ್ತು ಪಂಚಾಯಿತಿಯ ರಾಜಸ್ವ ಸಂಗ್ರಹಣೆ ಮೂಲಕ ಆದಾಯವನ್ನು ಹೆಚ್ಚಿಸುವುದು.

ಈ ಯೋಜನೆಯು ಒಂದು ಜನ ಯೋಜನೆಯಾಗಿದ್ದು, ಜನರ ಅವಶ್ಯಕತೆಗೆ ಅನುಗುಣವಾಗಿ ಬೇಕಾದ ಯೋಜನೆಗಳನ್ನು ಗ್ರಾಮ ಸಭೆಗಳಲ್ಲಿ ಜನರೇ ನಿರ್ಧರಿಸಿ ಒಂದು ಅಭಿವೃದ್ಧಿ ಯೋಜನೆಯನ್ನು ರೂಪಿಸುವುದು.

ಈ ರೀತಿ ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಮಾನವ ಸಂಪನ್ಮೂಲ ನೈಸರ್ಗಿಕ ಸಂಪನ್ಮೂಲ ಇವುಗಳನ್ನು ಕ್ರೋಡೀಕರಿಸಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

ಹಿಂದಿನ ಅನುಭವದ ಮೇರೆಗೆ ಹೇಳಬೇಕಾದರೆ ಬಹಳಷ್ಟು ಯೋಜನೆಗಳು ಅನುಷ್ಠಾನಗೊಂಡಿದ್ದು, ಗ್ರಾಮ ಪಂಚಾಯಿತಿಯ ಆಸ್ತಿಗಳನ್ನು ಸೃಜಿಸುವಲ್ಲಿ ನೆರವಾಗಿದ್ದರೂ ಕೂಡ ಅವುಗಳ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಈಗಾಗಲೇ ಸೃಜಿಸಿರುವ ಆಸ್ತಿಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ ಇನ್ನು ಮುಂದೆ ಯೋಜನೆಗಳನ್ನು ರೂಪಿಸುವಾಗ ಇಂತಹವುಗಳನ್ನು ಗುರುತಿಸಿ ಗಣನೆಗೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ಅವಶ್ಯವಿದ್ದಲ್ಲಿ ಮಾತ್ರ ತೆಗೆದುಕೊಂಡರೆ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಪ್ರಗತಿಯ ಜೊತೆಗೆ ರಾಜ್ಯದ ಮತ್ತು ದೇಶದ ಅಭಿವೃದ್ಧಿಯು ಆಗುತ್ತದೆ. ಉದಾ ಹರಣೆಗೆ ಈಗಾಗಲೇ ಒಂದು ಕೊಳವೆ ಬಾವಿಯನ್ನು ಕೊರೆಯಿಸಲಾಗಿದ್ದು, ಅದು ಕೆಲವು ಕಾರಣಗಳಿಂದ ಸ್ಥಗಿತಗೊಂಡಿದ್ದು, ಅದನ್ನು ದುರಸ್ಥಿ ಮಾಡದೇ ನಿಷ್ಕ್ರಿಯ ಎಂದು ಪರಿಗಣಿಸಿ ಮತ್ತೊಂದು ಕೊಳವೆ ಬಾವಿಯನ್ನು ಕೊರೆಯಿಸುವುದರಲ್ಲಿ ಅರ್ಥವಿಲ್ಲ. ಕೊಳವೆ ಬಾವಿ ದುರಸ್ಥಿ ಮಾಡಲು ಶೇ 5-10ರಷ್ಟು ಅನುದಾನ ವೆಚ್ಚವಾಗಬಹುದಾದ ಸನ್ನಿವೇಶದಲ್ಲಿ ಶೇ.100ರಷ್ಟು ವೆಚ್ಚವನ್ನು ಮಾಡುವುದು ಸರಿಯಲ್ಲ.

ಈ ನಿಟ್ಟಿನಲ್ಲಿ ಜನರ ಭಾಗವಹಿಸುವಿಕೆ ಯೋಜನೆಗಳನ್ನು ರೂಪಿಸುವಲ್ಲಿ, ಪಂಚಾಯಿತಿಯ ಹಂತದಲ್ಲಿರುವ ಸಿಬ್ಬಂದಿ ವರ್ಗದವರು ಮತ್ತು ಚುನಾಯಿತ ಪ್ರತಿನಿಧಿಗಳು ಇದರ ಬಗ್ಗೆ ಬೆಳಕು ಚೆಲ್ಲಿ ಅಭಿವೃದ್ಧಿ ಯೋಜನೆಗಳನ್ನು ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವುದು ಗಮನಾರ್ಹ.

ಪ್ರಸ್ತುತ ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ಡಾ.ನಂಜುಂಡಪ್ಪ ವರದಿ ಆಧಾರದ ಮೇಲೆ ಈಗಾಗಲೇ ಗುರುತಿಸಲಾದ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನವನ್ನು ಒದಗಿಸಿದ್ದು, ಇದರಿಂದ ಹಳ್ಳಿಗಳ ಅಭಿವೃದ್ಧಿಗೆ ನೆರವಾಗಲು ಅನುಕೂಲ ವಾಗಿರುತ್ತದೆ.

ಕೇವಲ ಯೋಜನೆಗಳನ್ನು ರೂಪಿಸಿ ಅವುಗಳನ್ನು ಸರಿಯಾದ ರೀತಿಯಲ್ಲಿ ಉಸ್ತುವಾರಿ ಮಾಡದಿದ್ದರೆ, ಉದ್ದೇಶ ಸಫಲವಾಗುವುದಿಲ್ಲ.

ಯೋಜನೆಗಳನ್ನು ರೂಪಿಸಬೇಕಾದರೆ ವಾರ್ಡ್ ಮತ್ತು ಗ್ರಾಮ ಸಭೆಯ ಮೂಲಕ ಜನರಿಗೆ ಬೇಕಾದ ಯೋಜನೆಗಳನ್ನು ಜನರೇ ಆರಿಸಿಕೊಳ್ಳಲು ಸೂಕ್ತವಾದ ವೇದಿಕೆಯಾಗಿರಬೇಕು.

* ಮುಖ್ಯ ಯೋಜನಾಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತ್, ರಾಮನಗರ.

ಯಾವುದರ ಬಗ್ಗೆ ಪ್ರಯತ್ನಿಸುವುದಿಲ್ಲವೋ ಅದಷ್ಟೇ ಅಸಾಧ್ಯ ಎನಿಸಿಬಿಡುತ್ತದೆ.

ಈ ನಿಟ್ಟಿನಲ್ಲಿ ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿ ಯೋಜನೆಯ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ 5 ವರ್ಷಗಳ ಅಭಿವೃದ್ಧಿ ಯೋಜನೆಯನ್ನು 2006 ರಲ್ಲಿ ತಯಾರಿಸಲಾಗಿದ್ದು, ಈಗಾಗಲೇ 5 ವರ್ಷಗಳು ಕಳೆದ ನಂತರ ಗಣನೀಯವಾದ ಅಭಿವೃದ್ಧಿಯನ್ನು ಹಳ್ಳಿಗಳಲ್ಲಿ ನೋಡಬಹುದಾಗಿದೆ.

ಗ್ರಾಮ ಪಂಚಾಯಿತಿಗಳು ತಮ್ಮ ಯೋಜನೆಗಳನ್ನು ರೂಪಿಸಿಕೊಳ್ಳಲು ಸ್ವತಂತ್ರವಾಗಿದ್ದು, ಸೂಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸಿದಾಗ ಮಾತ್ರ ಅಭಿವೃದ್ಧಿಯನ್ನು ಸಾಧಿಸಲು ಅನುಕೂಲವಾಗುತ್ತದೆ.

ಜಿಲ್ಲಾ ಪಂಚಾಯಿತಿಯು ಗ್ರಾಮ ಪಂಚಾಯತಿಯು ಅನುಷ್ಠಾನಗೊಳಿಸುತ್ತಿರುವ ಗ್ರಾಮ ಪಂಚಾಯಿತಿಗಳ ಮೇಲುಸ್ತುವಾರಿಯನ್ನು ತಾಲ್ಲೂಕು ಪಂಚಾಯಿತಿಯ ನೆರವಿನಿಂದ ಮಾಡಲಾಗುತ್ತಿದೆ.

ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ ನಂತರ ಅವುಗಳ ಕ್ರೋಢಿಕರಣವನ್ನು ತಾಲ್ಲೂಕು ಪಂಚಾಯಿತಿಯಿಂದ ತಯಾರಿಸಿ ನಂತರ ಇವುಗಳನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿದ ಮೇಲೆ ಇವುಗಳನ್ನು ಸಮಗ್ರೀಕರಣಗೊಳಿಸಿ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯು ನಿರ್ವಹಿಸಲಾಗುತ್ತಿದೆ. ಈ ಯೋಜನೆಯ ಉಸ್ತುವಾರಿ ನಡೆಸಲು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯೋಜಿಸಿದ ನೋಡಲ್ ಅಧಿಕಾರಿಗಳು ಈ ಕೆಲಸವನ್ನು ಮಾಡುತ್ತಿದ್ದಾರೆ.

ಕೇವಲ ಅನುಷ್ಠಾನಗೊಳಿಸಿ ಪ್ರಗತಿ ವರದಿಯನ್ನು ಪಡೆದು ಅದನ್ನು ಸರ್ಕಾರಕ್ಕೆ ಕಳುಹಿಸಿದರೆ ಸಾಲದು. ಈ ಯೋಜನೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಮೌಲ್ಯ ಮಾಪನ (Concurrent Evalution) ಅಥವಾ ತುರ್ತು ಅವಲೋಕನ ನಡೆಸಿ ಕೇವಲ ಇದು ಒಂದು ಯೋಜನೆಯಲ್ಲ. ಇದರ ಮೂಲಕ ಹಳ್ಳಿಯ ಜನರ ಜೀವನಮಟ್ಟ ಮೇಲೇತ್ತಲು ಸಹಾಯವಾಗಿದೆಯೇ ಎನ್ನುವುದನ್ನು ಪ್ರತಿಬಿಂಬಿಸ ಬೇಕಾಗುತ್ತದೆ.

ಈ ನಿಟ್ಟಿನಲ್ಲಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರು, ಕಲ್ಯಾ ಮತ್ತು ಬಿಳಗುಂಬ ಈ ಪಂಚಾಯಿತಿಗಳು ಗ್ರಾಮ ಸ್ವರಾಜ್ ಯೋಜನೆಯಲ್ಲಿ ಬರುವ ಮುಂಚೆ ಕಂದಾಯ ವಸೂಲಾತಿ ಕಡಿಮೆ ಇದ್ದು, ಗ್ರಾಮ ಸ್ವರಾಜ್ ಯೋಜನೆ ಬಂದ ಮೇಲೆ ಹೆಚ್ಚಿನ ರೀತಿಯಲ್ಲಿ ತೆರಿಗೆಯನ್ನು ಸಂಗ್ರಹಿಸಲಾಗಿದೆ. ಜನರಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ ಮತ್ತು ವಸತಿ ಇವುಗಳನ್ನು ಒದಗಿಸಿದರೆ ಅವರು ಸಹ ಕಂದಾಯ ವಸೂಲಾತಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಸಂದೇಹವಿಲ್ಲ.

ಪ್ರತಿ ತಾಲ್ಲೂಕುಗಳಲ್ಲಿ ಸಾಮರ್ಥ್ಯ ಸೌಧ ನಿರ್ಮಿಸಲಾಗಿದ್ದು, ಇವುಗಳನ್ನು ಎಲ್ಲಾ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಗಳು ಸದಸ್ಯರಿಗೆ ನೀಡಬೇಕಾದರೆ ಬಹಳಷ್ಟು ರೀತಿಯಲ್ಲಿ ಇದು ಅನುಕೂಲವಾಗಿದೆ. ಇದರಿಂದ ಗ್ರಾಮ ಸ್ವರಾಜ್ ಯೋಜನೆಯ ಒಂದು ಸೌಧ ತಾಲ್ಲೂಕು ಮಟ್ಟದಲ್ಲಿ ಇರುವುದು ಯೋಜನೆಯ ಪ್ರತೀಕ.

ಗ್ರಾಮ ಸ್ವರಾಜ್ ಯೋಜನೆಯು ಬಂದ ಮೇಲೆ ಜೋಡಿಲೆಕ್ಕ ಪದ್ಧತಿ (Double Entry Accounting System) ಯನ್ನು ಅಳವಡಿಸಿದ್ದು, ಲೆಕ್ಕಪರಿಶೋಧಕರಿಗೆ ಹಾಗೂ ಆರ್ಥಿಕ ವ್ಯವಹಾರಗಳಲ್ಲಿ ಇದು ಬಹಳಷ್ಟು ಪ್ರಯೋಜನವಾಗಿದೆ.

ಈಗಾಗಲೇ ವಿಶ್ವಬ್ಯಾಂಕ್ ತಂಡದವರು ಮೇಲೆ ತಿಳಿಸಿದ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಗ್ರಾಮ ಸ್ವರಾಜ್ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ಸರ್ಕಾರದ ಅನುದಾನವನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳುವುದರ ಜೊತೆಗೆ ವಿಶ್ವಬ್ಯಾಂಕ್ ನೆರವು / ವಿದೇಶಿ ನೆರವು (EAP) ಯೋಜನೆಗಳನ್ನು ಹೆಚ್ಚು ಹೆಚ್ಚು ಬಳಸಿ ಗ್ರಾಮ ಪಂಚಾಯಿತಿ ಗಳನ್ನು ಬಲಪಡಿಸಿ ಹಳ್ಳಿಗಳ ಅಭಿವೃದ್ಧಿ ಮಾಡಲು ಎಲ್ಲರು ಒಟ್ಟಾಗಿ ಶ್ರಮಿಸೋಣ.

ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳು ಸಾಗಿದ್ದಲ್ಲಿ ವಿಶ್ವದಲ್ಲೇ ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳು ಮಾದರಿ ಆಗುವುದರಲ್ಲಿ ಸಂದೇಹವಿಲ್ಲ.

❑

---

## ಲೆಕ್ಕ-ಚೊಕ್ಕ

ಎಲ್ಲಾ ಚೊಕ್ಕವಾಗಿದೆ ಎಂದು ಹೇಳಲು ಬೇಕು
ಎಲ್ಲಿ ಅಡ್ಡದಾರಿಹಿಡಿದಿದ್ದೀರಿ ಎಂದು ಹೇಳಲು ಬೇಕು
ಎಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಲು ಬೇಕು
ಎಲ್ಲಿ ದುರುಪಯೋಗವಾಗಿದೆ ಎಂದು ಹೇಳಲು ಬೇಕು
ಎಲ್ಲಿ ಪಾರದರ್ಶಕತೆಯಿದೆಯೊ ಅಲ್ಲಿ ಬೇಕು
ಎಲ್ಲದಕ್ಕು ಅಸರೆ ಲೆಕ್ಕ ಇದನ್ನು ಇಡು ನೀನು ಚೊಕ್ಕ.

## ಅಟಕ್ಕುಂಟು ಲೆಕ್ಕಕ್ಕೂ ಉಂಟು

ಅಟಕ್ಕುಂಟು ಲೆಕ್ಕಕ್ಕಿಲ್ಲಾ
ಎನ್ನುವ ಮಾತಿನಂತಲ್ಲಾ ನಮ್ಮ
ಗ್ರಾಮ ಪಂಚಾಯಿತಿಯ ಲೆಕ್ಕ
ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು.

– ಜಯ್ಯಣ್ಣ, ಯೋಜನಾ ಲೆಕ್ಕಪತ್ರ ಸಮಾಲೋಚಕರು.

ಸತ್ಯ ಮತ್ತು ಪ್ರಾಮಾಣಿಕತೆಯಿಂದ ಬದುಕುವವರು ಯಾರಿಗೂ ಹೆದರಬೇಕಾಗಿಲ್ಲ.

# ಕ್ಷೇತ್ರದಲ್ಲಿ ನಾ ಕಂಡಂತೆ ಗ್ರಾಮ ಸ್ವರಾಜ್



ಎಂ.ಬಿ. ಸಿಪಾಯಿ *

ಕರ್ನಾಟಕ ರಾಜ್ಯದ ಆಂಧ್ರದ ಗಡಿಯಲ್ಲಿ ಗ್ರಾಮದ ಜನರು ಗ್ರಾಮ ಸ್ವರಾಜ್ಯ ಯೋಜನೆಯ ಪೂರ್ಣ ಲಾಭ ಪಡೆದು ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವಲ್ಲಿ ಹೆಜ್ಜೆ ಇಡುತ್ತಿದ್ದಾರೆ,

ಯಾದಗೀರ ಜಿಲ್ಲಾ ಕೇಂದ್ರದಿಂದ 22 ಕಿ.ಮೀ ದೂರದಲ್ಲಿ ಯಾದಗೀರ-ಹೈದ್ರಾಬಾದ ರಾಜ್ಯ ರಸ್ತೆಯ 2 ಕಿ.ಮೀ ದೂರದಲ್ಲಿ ಬೆಟ್ಟ ಗುಡ್ಡಗಳ ಮನೋಹರ ದೃಶ್ಯದೊಂದಿಗೆ ಹಸಿರು ಭತ್ತದ ಹೊಲಗಳ ನಡುವೆ ಸಾಗಿದಲ್ಲಿ ಸಿಗುವ ಊರೇ ಪಸಪೂಲ. ಇದು ಸುಮಾರು 7ರಿಂದ 8 ಸಾವಿರ ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತ ಕೇಂದ್ರವಾಗಿದ್ದು ಪುಟ್ಟ ಐದು ಹಳ್ಳಿಗಳೂ ಹಾಗೂ ಮೂರು ತಾಂಡಗಳನ್ನೊಳಗೊಂಡ ಗ್ರಾಮ ಪಂಚಾಯತವಾದರೂ ಹಲವಾರು ಮೂಲಭೂತ ಸೌಕರ್ಯಗಳನ್ನು ಹಾಗೂ ತನ್ನ ಮಡಿಲಲ್ಲಿರುವ ಮಗದಂಪೂರ, ಮಗದಂಪೂರ ತಾಂಡ, ತಾತಳಗೇರಾ, ಯಂಪಾಡ, ಯಂಪಾಡ ತಾಂಡ, ಗೋಪಾಳಪೂರ, ಪಸಪೂಲ, ಹಾಗೂ ಪಸಪೂಲ ತಾಂಡಾಗಳಿಗೆ ಮುಖ್ಯವಾಗಿ ಗ್ರಾಮ ಸ್ವರಾಜ ಯೋಜನೆ ಹಾಗೂ ಇತರ ಯೋಜನೆಗಳ ಅಡಿಯಲ್ಲಿ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಸಫಲವಾಗಿದೆ ಎಂದರೇ ತಪ್ಪಾಗಲಿಕ್ಕಿಲ್ಲ.

ಅಂದು ಮುಂಜಾನೆ 9.00 ಗಂಟೆಗೆ ಸಿಬ್ಬಂದಿಯೊಂದಿಗೆ ಪಸಪೂಲ ಗ್ರಾಮಕ್ಕೆ ಹೋದಾಗ ಶ್ರೀ ಶಿವಕುಮಾರ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಮಗದಂಪೂರಕ್ಕೆ ಹೋಗಿದ್ದಾರೆ ಎಂದು ತಿಳಿದು, ಹಾಗೆ ಡಾಂಬರ ರಸ್ತೆಯಲ್ಲಿ ಮಗದಂಪೂರಕ್ಕೆ ಹೋದಾಗ ಅಲ್ಲಿ ಶ್ರೀ ಹನುಮಾನ ದೇವರ ಕಟ್ಟೆಯ ಮೇಲೆ ಗ್ರಾಮಸ್ಥರು, ಹಾಗೂ ಹಿರಿಯ ನಾಗರಿಕರು ಹತ್ತು ಹಲವಾರು ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು, ಚರ್ಚೆಯಲ್ಲಿ ಭಾಗವಹಿಸಿ ಗ್ರಾಮ ಸ್ವರಾಜ ಯೋಜನೆ ಕಡೆಗೆ ಅವರ ಅಭಿಪ್ರಾಯಕ್ಕಾಗಿ ಚರ್ಚೆಯ ದಿಕ್ಕು ಬದಲಾಯಿಸಿದಾಗ ಅವರ ಅನಿಸಿಕೆಗಳು ಹೀಗಿದ್ದವು.

"ಸಾಹೇಬರೆ ಬೇರೆ ಯೋಜನೆಗಳು ಊರು ಸುತ್ತಲು ತೆಗೆದುಕೊಳ್ಳುತ್ತಾರೆ, ಆದರೆ ಗ್ರಾಮ ಸ್ವರಾಜ ಯೋಜನೆ ಕೆಲಸಗಳು ಗ್ರಾಮದೊಳಗೆ ಇರುತ್ತವೆ. ನಾವೆಲ್ಲಾ ಕೂಡಿ ಛಲೊ ಕೆಲಸ ಮಾಡಿಸಿಕೊಳ್ಳುತ್ತೇವೆ. ಅಲ್ಲದೆ ಎಲ್ಲರೂ ಗ್ರಾಮ ಸಭೆಯೊಳಗೆ ಯಾವ ಕೆಲಸ ಅರ್ಜಂಟ ಅದ ಅದನ್ನೇ ಮೊದಲು ಮಾಡ್ಲಿಕ್ಕೆ ಹೇಳತಿವಿ".



ಮಗದಂಪೂರ ಗ್ರಾಮದಲ್ಲಿ ಗ್ರಾಮಸ್ಥರ ಜೊತೆ ಗ್ರಾಮ ಸ್ವರಾಜ ಯೋಜನೆ ಕುರಿತು ಚರ್ಚೆ

* ಸಂಗ್ರಹಣಾ ಸಲಹೆಗಾರರು, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು.

ಜೀವನ ಪ್ರೀತಿ ಬೆಳೆಸಿಕೊಳ್ಳಿ,ಅದಕ್ಕಿಂತ ದೊಡ್ಡ ಸಂಪತ್ತು ಬೇರೊಂದಿಲ್ಲ.



ಮಗದಂಪೂರ ಗ್ರಾಮದಲ್ಲಿ ಬಟ್ಟೆ ಹೊಗೆಯುವ (ಧೋಬಿ ಘಾಟ್) ನಿರ್ಮಾಣ

ಮತ್ತೊಬ್ಬ ಅಜ್ಜ "ಈಗ ನೋಡ್ರಿ ಒಗೆಲಿಕ್ಕ ಕಟ್ಟೆ ಕಟ್ಟ್ಯಾರ ಅದರಿಂದ ಬಟ್ಟೆ ಒಗೆಯುವುದು ಇತ್ಯಾದಿ ಊರ ಹೊರಗಿನ ಧೋಭಿ ಕಟ್ಟೇಯಲ್ಲೇ ಮಾಡ್ತಾರ. ಇದರಿಂದ ನೀರು ಅಲ್ಲಲ್ಲಿ ನಿಲ್ಲುವುದಿಲ್ಲ ಮತ್ತು ಸೊಳ್ಳೆ ಮತ್ತು ಇತ್ಯಾದಿ ಆಗುವುದಿಲ್ಲ" ಎಂಬ ಮಾತು ಪರಿಸರ ಕಾಳಜಿಯ ಅನಿಸಿಕೆ ಎಂಬಲ್ಲಿ ಎರಡು ಮಾತಿಲ್ಲ. ಹಾಗೆಯೇ ಚರ್ಚೆಯ ಒಂದು ಫೋಟೊ ಕ್ಲಿಕ್ಕಿಸಿದಾಯಿತು. ನಿಜವಾಗಿಯು ನೀರು ಸೌಕರ್ಯ, ಪೈಪಲೈನ ಮುಖಾಂತರ ಟ್ಯಾಂಕಿಗೆ ಸಂಪರ್ಕ ಇದ್ದು ಅಲ್ಲದೆ ಹ್ಯಾಂಡ ಪಂಪ ಬೋರವೆಲ ಸಹ ಒಗೆಯುವ ಕಟ್ಟೆಯ ಹತ್ತಿರ ಇರುವುದು, ಕಂಡು ಬಂದಿತು. ಸಣ್ಣ ಕಾಮಗಾರಿಯಾದರೂ ಗ್ರಾಮ ಸ್ವರಾಜ ಯೋಜನೆ ಗ್ರಾಮ ಸಭೆಯಲ್ಲಿ ಚರ್ಚಿಸಿ ತೆಗೆದುಕೊಳ್ಳಲಾಗಿದೆ.

ಅಲ್ಲದೇ ಎಲ್ಲಾ ಕಡೆಗಳಲ್ಲಿಯೂ ಸಿ.ಸಿ.ರಸ್ತೆಯೊಂದಿಗೆ ಬದಿಯಲ್ಲಿ ಚರಂಡಿ ಕಾಮಗಾರಿ ಇದ್ದು, ನೀರು ಪೂರ್ಣವಾಗಿ ಹರಿದು ಹೋಗಲು ಅವಕಾಶವಾಗುವಂತೆ 2010–11ನೇ ಸಾಲಿಗೆ ಕಾಮಗಾರಿಗಳಲ್ಲಿ ಅವಕಾಶ ಮಾಡಲಾಗಿದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದರು. ಅದೇ ರೀತಿ ಪಸಪೂಲ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ಸಿ.ಸಿ.ರಸ್ತೇ ಬಟ್ಟೆ ಒಗೆಯುವ ಧೋಭಿ ಘಾಟ, ಕುಡಿಯುವ ನೀರಿನ ಸರಬರಾಜು ಕಾಮಗಾರಿ ನವಿಕರಣ ಇತ್ಯಾದಿ ಕೈಕೊಳ್ಳಲಾಗಿದೆ.

ಪಸಪೂಲ ಗ್ರಾಮದಲ್ಲಿ ಜನರ ಅಭಿಪ್ರಾಯ ಕೋರಿದಾಗ "ನಮ್ಮ ಗ್ರಾಮ ಪಂಚಾಯತದಲ್ಲಿ 7 ಗ್ರಾಮಗಳು ಇದ್ದು ಎಲ್ಲಾ ಕಡೆಗಳಲ್ಲಿ ದೊಡ್ಡ ಪ್ರಮಾಣದ ಕಾಮಗಾರಿ ತೆಗೆದುಕೊಳ್ಳದೆ ಸಣ್ಣ ಪುಟ್ಟ ಅವಶ್ಯವಿದ್ದ ಕಾಮಗಾರಿಗಳು ತೆಗೆದುಕೊಳ್ಳಲಾಗಿದೆ" ಎಂದು ಅಧ್ಯಕ್ಷರಾದ ಶ್ರೀಮತಿ ಮಂಜುಬಾಯಿ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ತಾಯಮ್ಮ ನಾಯಕ ಹೇಳಿದ್ದು ಸತ್ಯಕ್ಕೆ ದೂರವಾಗಿರಲಿಲ್ಲ. ಮಹಿಳಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಡಳಿತಾತ್ಮಕ ಹಾಗೂ ದೂರ ದೃಷ್ಟಿ ಮೆಚ್ಚಬೇಕಾದುದ್ದೆ.

12 ವರ್ಷಗಳಿಂದ ಅದೇ ಗ್ರಾಮ ಪಂಚಾಯತಿಗೆ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುವ ಶ್ರೀ ಅಣ್ಣಾರಾವ ಪಾಟೀಲ ಸಹ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿರುವ ಅಂಶ ಎಂದು ಕಂಡುಬಂದಿತ್ತು. 2009–10ನೇ ಸಾಲಿನ ಲೆಕ್ಕ ಪರಿಶೋಧನೆ ಪೂರ್ಣಗೊಂಡಿದ್ದು 2010–11ನೇ ಸಾಲಿನ ಅನುದಾನಕ್ಕಾಗಿ ಗ್ರಾಮ ಸ್ವರಾಜ ಯೋಜನೆ ಟೆಂಡರ ಕರೆದು ಕಾಮಗಾರಿ ಪೂರ್ಣಗೊಳಿಸಲು ಮಹಿಳಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಉತ್ಸುಕರಾಗಿದ್ದು ಹೆಮ್ಮೆಯ ವಿಷಯವಾಗಿತ್ತು. ಕರವಸೂಲಿಯಲ್ಲಿ 2010–11ನೇ ಸಾಲಿನ ರೂ.5.00 ಲಕ್ಷ ವಾರ್ಷಿಕ ಬೇಡಿಕೆಗೆ, ಈಗಾಗಲೇ ರೂ.3.00 ಲಕ್ಷ ವಸೂಲಿಯಾಗಿದ್ದು ಫೆಬ್ರುವರಿ ಮತ್ತು ಮಾರ್ಚ ಸುಗ್ಗಿಯ ಕಾಲವಾಗಿದ್ದು, ನಂತರದಲ್ಲಿ ಪೂರ್ಣ ಕರ ವಸೂಲಿಯನ್ನು ಮಾಡುವ ಬಗ್ಗೆ ಕಾರ್ಯದರ್ಶಿಗಳ ಹೇಳಿಕೆ ನಿಜಕ್ಕೂ ಗ್ರಾಮೀಣ ಜನರು ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳುತ್ತಿದ್ದಾರೆ ಎಂದು ಅನಿಸಿತು.

ಇದು ಅಲ್ಲದೆ ಗ್ರಾಮ ಪಂಚಾಯತಿಯ ಎಲ್ಲ ಗ್ರಾಮಗಳಲ್ಲಿ 10 ರಿಂದ 15 ಸ್ತ್ರೀ ಶಕ್ತಿ ಸ್ವ ಸ್ವಹಾಯ ಗುಂಪುಗಳು ರಚನೆ ಮಾಡಿ ಕೆಲಸ ಮಾಡುತ್ತಿರುವುದು ಕಂಡಾಗ ದೂರದ ಕರ್ನಾಟಕ ರಾಜ್ಯದ ಆಂಧ್ರದ ಗಡಿಯಲ್ಲಿ ಗ್ರಾಮದ ಜನರು ಗ್ರಾಮ ಸ್ವರಾಜ್ಯ ಯೋಜನೆಯ ಪೂರ್ಣ ಲಾಭ ಪಡೆದು ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವಲ್ಲಿ ಹೆಜ್ಜೆ ಇಡುತ್ತಿದ್ದಾರೆ, ಎಂಬ ಅಂಶ ಅವರ ಮಾತುಗಳಲ್ಲಿ ಮತ್ತು ನಡೆಯಲ್ಲಿ ಕಂಡು ಮನಸ್ಸಿಗೆ ಹರ್ಷವೆನಿಸಿತು.

❑

---

## ನಗದು ಪಸ್ತಕ

ದಿನದ ಪ್ರಾರಂಭದ ಶಿಲ್ಕು ಎಷ್ಟೆಂದು ಹೇಳುವೆನು
ದಿನವಹಿ ಜಮಾ ಮತ್ತು ಪಾವತಿ ಹೇಳುವೆನು
ದಿನದ ಅಂತಿಮದ ಶಿಲ್ಕು ಎಷ್ಟೆಂದು ಹೇಳುವೆನು
ನಾನು ಸರಿಯಿದ್ದರೆ ನೀನು ಸರಿಯಿದ್ದೀಯ
ಎಂದು ಹೇಳುವರು ಲೆಕ್ಕ ಪರಿಶೋಧಕರು

## ಜಮಾ ಮತ್ತು ಪಾವತಿ ತ:ಖ್ತೆ

ನಾನು ಹೇಳುವೆನು ವಾರ್ಷಿಕ ಪ್ರಾರಂಭದ ಶಿಲ್ಕು
ನಾನು ಹೇಳುವೆನು ಜಮಾ ಬಂದಿರುವುದನ್ನು
ನಾನು ಹೇಳುವೆನು ಪಾವತಿ ಮಾಡಿರುವುದನ್ನು
ನಾನು ಹೇಳುವೆನು ವಾರ್ಷಿಕ ಅಂತಿಮ ಶಿಲ್ಕು
ನಾನು ಸರಿಯಿದ್ದರೆ ನೀನು ಸರಿಯಿದ್ದಿಯ
ಎಂದು ಹೇಳುವರು ಲೆಕ್ಕ ಪರಿಶೋಧಕರು.

– ಜಯ್ಯಣ್ಣ, ಯೋಜನಾ ಲೆಕ್ಕಪತ್ರ ಸಮಾಲೋಚಕರು.

ಚಿಂತನೆ ಇಲ್ಲದೆ ಕಲಿಯುವುದು ವ್ಯರ್ಥ,ಕಲಿಯದೇ ಚಿಂತನೆ ಮಾಡುವುದು ಅಪಾಯಕಾರಿ.

# ಆಡಳಿತದಲ್ಲಿ ಪಾರದರ್ಶಕತೆ, ಜನರ ಸಹಭಾಗಿತ್ವ



ನಾಗೇಶ್ ಎಂ.ವಿ, *

ಗ್ರಾಮ ಸ್ವರಾಜ್ ಯೋಜನೆಯು ಬೆಂಗಳೂರಿನಲ್ಲಿ ಕೇಂದ್ರ ಘಟಕ ಸ್ಥಾಪಿಸಿದಂತೆ ಪ್ರತಿ ತಾಲ್ಲೂಕಿನಲ್ಲಿಯೂ ತಾಲ್ಲೂಕು ಸಂಪನ್ಮೂಲ ಕೋಶಗಳನ್ನು ಸ್ಥಾಪಿಸಿ ಯೋಜನೆಯ ಮೂಲ ಆಶಯವನ್ನು ಈಡೇರಿಸಲು ಯೋಜನೆಯ ಅನುಷ್ಠಾನಕ್ಕೆ ಪ್ರಮುಖ ಮೂರು ಜನ ತಜ್ಞರನ್ನು ನೇಮಿಸಿತು. ಈ ನಿಟ್ಟಿನಲ್ಲಿ ಮಾಗಡಿ ತಾಲ್ಲೂಕಿನ ಸಂಪನ್ಮೂಲ ಕೋಶದಲ್ಲಿ ಜನರು ಗ್ರಾಮ ಪಂಚಾಯ್ತಿಗಳತ್ತ ಮುಖ ಮಾಡಲು ಹಾಗೂ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಭಾಗಿಯಾಗಲು–ಸಮುದಾಯ ವಿಕಾಸ ಯೋಜನೆಯೊಂದು ಜಾರಿಗೊಳ್ಳಬೇಕಿತ್ತು. ಈ ಯೋಜನೆಯು ಸರಾಗವಾಗಿ ಸಾಗಬೇಕಾದರೆ ಅಧಿಕಾರಿ ವರ್ಗ ಹಾಗೂ ಜನರ ಸಹಬಾಗಿತ್ವ ಈ ಎರಡು ಕಾರ್ಯಘಟ್ಟಗಳು ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಬೇಕಿತ್ತು. ಈ ಎಲ್ಲಾ ಅಂಶಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ತಿದ್ದಿದ ಹೆಗ್ಗಳಿಕೆಯು ಗ್ರಾಮ ಸ್ವರಾಜ್ ಯೋಜನೆಗೆ ಪೂರ್ಣವಾಗಿ ಸಲ್ಲಲೇಬೇಕು. ಗ್ರಾಮ ಸ್ವರಾಜ್ ಯೋಜನೆಯು ಪಂಚಾಯತ್‌ರಾಜ್ ಸ್ಥಳೀಯ ಸಂಸ್ಥೆಗಳಿಗೆ ವರದಾನವಾಗಿ ಪರಿಣಮಿಸಿದೆ ಎಂದರೆ ಅತಿಶಯೋಕ್ತಿ ಯಾಗಲಾರದು.

ಗ್ರಾಮ ಸ್ವರಾಜ್ ಯೋಜನೆಯು ಗ್ರಾಮ ಪಂಚಾಯ್ತಿಗಳು ಕೇವಲ ಸೀಮಿತ ಪರಿದಿಗೆ ತಮ್ಮನ್ನು ತಾವು ಮಿತಿಗೊಳಿಸಿಕೊಳ್ಳದೇ ಗ್ರಾಮಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂತಾಗಬೇಕು ಎಂಬ ತಾರ್ಕಿಕ ಆಲೋಚನೆಯಿಂದ ವಾರ್ಡ್ ಮತ್ತು ಗ್ರಾಮ ಸಭೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ತಿಳಿಸಿಕೊಟ್ಟಿತು. ಈ ಮೊದಲಿನ ವಾರ್ಡ್/ಗ್ರಾಮ ಸಭೆಗಳು ವಿಫಲವಾದುದ್ದಕ್ಕೆ ಕಾರಣಗಳನ್ನು ಗುರುತಿಸಿ ಸರಿಪಡಿಸುವುದು ಮುಖ್ಯ ಗುರಿಯಾಗಿತ್ತು.

ಗ್ರಾಮ ಸ್ವರಾಜ್ ಯೋಜನೆಯು ಪಂಚಾಯತ್‌ರಾಜ್ ಸ್ಥಳೀಯ ಸಂಸ್ಥೆಗಳಿಗೆ ವರದಾನವಾಗಿ ಪರಿಣಮಿಸಿದೆ ಎಂದರೆ ಅತಿಶಯೋಕ್ತಿ ಯಾಗಲಾರದು.




* ಸಮುದಾಯ ಸಂಘಟಕರು, ತಾಲ್ಲೂಕು ಸಂಪನ್ಮೂಲ ಕೋಶ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.

ನಿನಗೆಷ್ಟು ತಿಳಿದಿದೆಯೋ ಅದಕ್ಕಿಂತ ಕಡಿಮೆ ಮಾತನಾಡು.

| ಸಂ | ಯೋಜನೆಯ ಮುನ್ನ | ಯೋಜನೆಯ ನಂತರ |
|---|---|---|
| 1 | ಯಾವುದೇ ವಾಡ್/ಗ್ರಾಮ ಸಭೆಗಳಾಗಲೀ ಪೂರ್ವ ನಿಯೋಜಿತ ಕಾರ್ಯಕ್ರಮವಾಗಿ ನಡೆಯುತ್ತಿರಲಿಲ್ಲ | ಈಗ ವಾರ್ಡ್ ಸಭೆಯಾಗಲೀ , ಗ್ರಾಮ ಸಭೆಗಳಾಗಲೀ ಸುಮಾರು 15 ದಿನಗಳಿಗಿಂತ ಮುಂಚಿತವಾಗಿಯೇ ನಿರ್ಧಾರಗೊಂಡು ನಡೆಯುತ್ತವೆ. |
| 2 | ವಾರ್ಡ್/ಗ್ರಾಮ ಸಭೆಗಳಿಗೆ ನಿಯೋಜಿತ ನೋಡಲ್ ಅಧಿಕಾರಿಗಳು ಗೈರು ಹಾಜರಾಗುತ್ತಿದ್ದರು. | ಈಗ ಯೋಜನೆಯ ಶಿಸ್ತು ಬದ್ಧ ಆದೇಶ ದಿಂದ ಯಾವುದೇ ವಾರ್ಡ್/ಗ್ರಾಮ ಸಭೆ ಗಳಿಗೆ ನಿಯೋಜಿತ ನೋಡಲ್ ಅಧಿಕಾರಿ ಗಳು ಗೈರು ಹಾಜರಾಗುತ್ತಿಲ್ಲ. |
| 3 | ವಾರ್ಡ್/ಗ್ರಾಮ ಸಭೆಗಳು ಕೇವಲ ಐದಾರು ಜನ ಚುನಾಯಿತ ಪ್ರತಿನಿಧಿಗಳು ಭಾಗವಹಿಸಿವ್ಯಕ್ತಿಗತವಾದ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು. | ಈಗ ವಾರ್ಡ್/ಗ್ರಾಮ ಸಭೆಗಳಲ್ಲಿ ಜನಸಾಮಾನ್ಯರು ಸಹ ಭಾಗವಹಿಸುವ ಮೂಲಕ ಗ್ರಾಮಪಂಚಾಯ್ತಿಗಳಲ್ಲಿ ಜರುಗುವ ಎಲ್ಲಾ ಚಟುವಟಿಕೆಗಳ ಮಾಹಿತಿಯನ್ನು ಗ್ರಹಿಸುತ್ತಿದ್ದಾರೆ. |
| 4 | ವಾರ್ಡ್ ಸಭೆಗಳಲ್ಲಿ ಸದಸ್ಯರ ಕೋರಂನ ಕೊರತೆ ಇರುತ್ತಿತ್ತು. | ಈಗ ವಾರ್ಡ್ ಸಭೆಗಳಲ್ಲಿ ಕೋರಂನ ಕೊರತೆ ಕಾಣದೆ, ಶೇಕಡಾ 30ಕ್ಕಿಂತಲೂ ಅಧಿಕವಾಗಿ ಮಹಿಳೆಯರೂ ಭಾಗವಹಿಸುತ್ತಿರು ವುದು ಗಮನಾರ್ಹ ಸಂಗತಿಯಾಗಿದೆ. |
| 5 | ವಾರ್ಡ್/ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಯಾವುದೇ ಪೂರ್ವ ಸಿದ್ಧತೆ ನಡೆಸದೇ ಇರುತ್ತಿದ್ದವು | ಈಗ ವಾಡ್/ಗ್ರಾಮ ಸಭೆಗಳನ್ನು ನಡೆಸಬೇಕಾದರೆ ಪೂರ್ವಭಾವಿಯಾಗಿ ಚರ್ಚಿಸಿಬೇಕಾದ ವಿಷಯಗಳ ಕುರಿತು ಮೊದಲೇ, ಸಭೆಯಲ್ಲಿ ಪಾಲ್ಗೊಳುವ ಎಲ್ಲರಿಗೂ ಮಾಹಿತಿ ತಲುಪುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. |
| 6 | ವಾರ್ಡ್/ಗ್ರಾಮ ಸಭೆಗಳಲ್ಲಿ ಪ.ಜಾತಿ & ಪ.ಪಂಗಡದ ವರ್ಗದವರು ಭಾಗವಹಿಸಿರುವ ಹಾಗೇ ಯಾವುದೇ ಕ್ರಮಗಳನ್ನು ಕೈಗೊಳ್ಳುತಿರಲಿಲ್ಲ. | ಈಗ ವಾರ್ಡ್/ಗ್ರಾಮ ಸಭೆಗಳಲ್ಲಿ ಪ.ಜಾತಿ & ಪ.ಪಂಗಡದ ವರ್ಗದವರು ಕಡ್ಡಾಯವಾಗಿ ಭಾಗವಹಿಸಿರುವಂತೆ ಹಾಗೂ ಸಮಾಜದಲ್ಲಿ ಹಿಂದುಳಿದಿರುವವರೂ ಸಹ ಸಬೇಗಳಲ್ಲಿ ಪಾಲ್ಗೊಳಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ |
| 7 | ವಾರ್ಡ್/ಗ್ರಾಮ ಸಭೆಗಳಲ್ಲಿ ಚರ್ಚಿಸಿದ ವಿಷಯಗಳನ್ನು ದಾಖಲಿಸದೇ ಇರುವುದು. | ಈಗ ಗ್ರಾಮ ಸಭೆಗಳಲ್ಲಿ ಚರ್ಚಿಸಿದ ಪ್ರತಿಯೊಂದು ವಿಚಾರವನ್ನು ಬಹುಮತದ ಆಧಾರಲ್ಲಿ ಅಂಗೀಕಾರದ ಠರಾವು ಪುಸ್ತಕದಲ್ಲಿ ದಾಖಲಿಸಿ, ಸಭೆಯಲ್ಲಿ ಹಾಜರಿದ್ದ ಸದಸ್ಯರು, ಅಧಿಕಾರಿಗಳು, ಸಾರ್ವಜನಿಕರು ಎಲ್ಲರಿಂದಲೂ ಠರಾವು ಪುಸ್ತಕದಲ್ಲಿ ಸಹಿ ಮಾಡಿಸಿಕೊಳ್ಳುತ್ತಾರೆ. |
| 8 | ವಾರ್ಡ್/ಗ್ರಾಮ ಸಭೆಳನ್ನು ಆಯೋಜಿಸುವ ಮೊದಲು ಕೈಗೊಳ್ಳಬೇಕಾದ ಪ್ರಚಾರದಲ್ಲಿ ಸಾಕಷ್ಟು ಕೊರತೆ ಇರುತಿತ್ತು. | ಈಗ ಕಲಾಜಾಥ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಬೀದಿನಾಟಕ ಆಡಿಸುವ ಮೂಲಕ ಪ್ರಚಾರ ಮಾಡುವುದು, ಮೈಕ್ ಸೆಟ್‌ನಲ್ಲಿ ಪ್ರಚುರಪಡಿಸುವಿಕೆ. ಟಾಂ.ಟಾಂ ಸಾರಿಸುವುದು, ಬಿತ್ತಿಪತ್ರಗಳನ್ನು ಹಂಚುವುದು, ಗೋಡೆ ಬರಹಗಳನ್ನು ಬರೆಯಿಸುವುದು, ಕಾಮಗಾರಿಗಳ ಮುಂದೆ ನಾಮಫಲಕಗಳನ್ನು ಬರೆಯಿಸುವುದು. ಮುಂತಾದವುಗಳು. |
| 9 | ವಾರ್ಡ್/ಗ್ರಾಮ ಸಭೆಗಳು ನಡೆದ ಯಾವುದೇ ದಾಖಲೆಗಳನ್ನು ಸರಿಯಾಗಿ ನಿರ್ವಹಿಸುತ್ತಿರಲಿಲ್ಲ. | ಈಗ ವಾರ್ಡ್/ ಗ್ರಾಮ ಸಭೆಗಳು ಜರುಗಿದ ವಿಷಯವಾಗಿ ಠರಾವು ಪುಸ್ತಕದಲ್ಲಿ ಸಮಗ್ರ ಮಾಹಿತಿಯುನ್ನು ನಮೂದಿಸಿ ಸಹಿ ಪಡೆಯುವುದರಿಂದ ಹಿಡಿದು ಛಾಯಾಚಿತ್ರ, ವೀಡಿಯೋ ದಾಖಲಾತಿಗಳನ್ನು ಸಹ ವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿದೆ. |

ಅನುಭವ ಹೆಚ್ಚಿದಂತೆ ಜಗತ್ತು ಹೆಚ್ಚು ಅರ್ಥವಾಗುತ್ತಾ ಹೋಗುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಮುಂಚೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳ ಮಾಹಿತಿಯ ಕೊರತೆ ಹೆಚ್ಚಾಗಿತ್ತು. ಅವರನ್ನು ಜಾಗೃತಿಗೊಳಿಸಿ ಪರಿಣಾಮಕಾರಿಯಾಗಿ ಭಾಗವಹಿಸಲು ಈ ಯೋಜನೆಯಿಂದ ಸಾಧ್ಯವಾಯಿತು.

| ಸಂ. | ಯೋಜನೆಯ ಮೊದಲು | ಯೋಜನೆಯ ನಂತರ |
|---|---|---|
| 1. | ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ತಾವು ಆಯ್ಕೆಗೊಂಡ ಪಂಚಾಯ್ತಿಯಲ್ಲಿ ತಮಗೆ ಇರುವ ಅಧಿಕಾರಗಳು, ಕರ್ತವ್ಯಗಳು ಏನು ಎಂಬುದರ ಸ್ಪಷ್ಟ ಅರಿವು ತಿಳಿದಿರಲಿಲ್ಲ. | ಆದರೆ ಯೋಜನೆಯು ಜಾರಿಗೆ ಬಂದಾಗಿನಿಂದ ಹಲವಾರು ಹಂತಗಳಲ್ಲಿ ತರಬೇತಿಗಳನ್ನು ನೀಡುವುದರ ಮೂಲಕ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ಗ್ರಾಮಪಂಚಾಯ್ತಿಗಳಲ್ಲಿ ತಮ್ಮ ಕರ್ತವ್ಯಗಳು, ಅಧಿಕಾರಗಳು ಮತ್ತು ಅವುಗಳ ಇತಿಮಿತಿಗಳು ಎಷ್ಟರ ಮಟ್ಟಿಗೆ ಇವೆ ಎಂಬ ಪೂರ್ಣ ಮಾಹಿತಿಯು ತಿಳಿದಂತಾಗಿದೆ. |
| 2. | ಗ್ರಾಮ ಪಂಚಾಯ್ತಿಗಳ ಸ್ಥಾಯಿ ಸಮಿತಿಗಳಿಗೆ ಸದಸ್ಯರು ಆಯ್ಕೆಗೊಂಡಿದ್ದರೂ ಸಹ ಆ ಸಮಿತಿಗಳು ನಿರ್ವಹಿಸುವ ಕೆಲಸಗಳು ಏನು ಎಂಬುದರ ಅರಿವು ಇರಲಿಲ್ಲ. | ಈಗ ಗ್ರಾಮ ಪಂಚಾಯ್ತಿಯ ಎಲ್ಲಾ ಸದಸ್ಯರುಗಳಿಗೆ ಗ್ರಾಮ ಪಂಚಾಯ್ತಿಯಲ್ಲಿ 1) ಉತ್ಪಾದನಾ ಸಮಿತಿ 2) ಸಾಮಾಜಿಕ ಸಮಿತಿ 3) ಸೌಕರ್ಯಗಳ ಸಮಿತಿ ಎಂಬ ಮೂರು ಬಗೆಯ ಸಮಿತಿಗಳು ಇರುತ್ತವೆ ಎಂದು ಹಾಗೂ ಈ ಸಮಿತಿಗಳು ಕಡ್ಡಾಯವಾಗಿ ನಿರ್ವಹಿಸಬೇಕಾದ ಎಲ್ಲಾ ಕೆಲಸಗಳ ಬಗ್ಗೆ ಪೂರ್ಣ ಮಾಹಿತಿಯು ಇದ್ದು ಆ ನಿಟ್ಟಿನಲ್ಲಿ ಕಾರ್ಯಪ್ರವೃತರಾಗುತ್ತಿದ್ದಾರೆ. |
| 3. | ಗ್ರಾಮ ಪಂಚಾಯ್ತಿಯ ಸದಸ್ಯರುಗಳು ತಾವು ಕೇವಲ ಚುನಾಯಿತ ಪ್ರತಿನಿಧಿಗಳು ಮಾತ್ರ, ನಮಗೂ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಕೆಲವೊಂದು ಅವ್ಯವಹಾರಗಳಲ್ಲಿ ತೊಡಗುತ್ತಿದ್ದರು. | ಈಗ ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೂ ಸಹ ಆಯ್ಕೆಯಾದ ದಿನದಿಂದಲೇ ನಾವುಗಳು ಸರ್ಕಾರದ ನೌಕರರಾಗಿದ್ದೇವೆ ಅಂದರೇ "ಲೋಕ ನೌಕರ" ಆಗಿದ್ದೇವೆ ನಮ್ಮ ಮೇಲೂ ಸಹ ಸರ್ಕಾರಕ್ಕೆ ಕೆಲವೊಂದು ನಿಯಂತ್ರಣವಿದೆ ಎಂಬ ಅರಿವು ಮೂಡಿ ಅವ್ಯವಹಾರದಲ್ಲಿ ತೊಡಗುವುದನ್ನು ಬಿಟ್ಟಿದ್ದಾರೆ. |

ಗ್ರಾಮ ಪಂಚಾಯ್ತಿಗಳು ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ ಸಮಯದಲ್ಲಿ ಪರಿಸರಕ್ಕೆ ಉಂಟಾಗುವ ದಕ್ಕೆಗಳೆಡೆಗೆ ಗಮನ ಹರಿಸದೇ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದರು. ಆದರೆ ಗ್ರಾಮ ಸ್ವರಾಜ್ ಯೋಜನೆಯು ಪಂಚಾಯ್ತಿಗಳಲ್ಲಿ ಪರಿಸರದ ಬಗ್ಗೆ ತೆಗೆದುಕೊಳ್ಳಬೇಕಾದ ಕಾಳಜಿ ಹಾಗು ಮುನ್ನೆಚ್ಚರಿಕೆ ಕ್ರಮಗಳನ್ನು ಮತ್ತು ಅಧಿಕಾರಿ ವರ್ಗದವರ ಚುನಾಯಿತ ಪ್ರತಿನಿಧಿಗಳ ಮತ್ತು ಸಾರ್ವಜನಿಕರ ಜವಾಬ್ದಾರಿಗಳ ಬಗ್ಗೆ ತರಬೇತಿಗಳನ್ನು ನೀಡಿ. ಆ ಸದಸ್ಯರಲ್ಲಿ ಒಬ್ಬರನ್ನು ಪರಿಸರ ಸಂಯೋಜಕನಾಗಿ ನೇಮಿಸಿದೆ, ಹಾಗೂ ಸಾಂಸ್ಥಿಕವಾಗಿ ಓ.ಕೆ. ಕಾರ್ಡ್ ಎಂಬ ವಿಧಾನವನ್ನು ಸಹ ಜಾರಿಗೆ ತಂದಿದೆ.

ಗ್ರಾಮ ಪಂಚಾಯ್ತಿಗಳಲ್ಲಿ ಸಂಗ್ರಹಣಾ ವಿಧಾನ, ಗಣಕೀಕರಣ ವ್ಯವಸ್ಥೆ, ಇಂಟರ್ ನೆಟ್, ಸೋಲಾರ್ ಯುಪಿಎಸ್ ಸೌಲಭ್ಯ, ಜೋಡಿ ನಮೂದು ಲೆಕ್ಕಪದ್ದತಿಯನ್ನು, ಜಾರಿಗೆ ತರುವುದರ ಮೂಲಕ ಪಂಚಾಯ್ತಿಗಳನ್ನು ಆಧುನೀಕರಣದ ಸ್ಪರ್ಧಾತ್ಮಕ ಪ್ರಪಂಚಕ್ಕೆ ತೆರೆದುಕೊಳ್ಳುವಂತೆ ಮಾಡಿತು. ಮೇಲಿನ ಎಲ್ಲಾ ವಿಷಯಗಳಲ್ಲಿಯೂ ಸಹ ಗ್ರಾಮ ಸ್ವರಾಜ್ ಯೋಜನೆಯು ಪರಿಣಾಮಕಾರಿಯಾಗಿ ತನ್ನದೇ ಆದ ಛಾಪನ್ನು ಮೂಡಿಸಿದೆ.

"ಜನರು ತಾವು ಬದುಕಿರುವಾಗ ಗುರುತಿಸಿಕೊಳ್ಳದೇ ನಡೆದು ಹೋದ ಹೆಜ್ಜೆಗುರುತುಗಳಿಂದ ಗುರುತಿಸಲ್ಪಡುತ್ತಾರೆ" ಎಂಬ ಗಾದೆಯು ಪ್ರಸ್ತುತ ಗ್ರಾಮ ಸ್ವರಾಜ್ ಯೋಜನೆಯು ಮುಗಿದ ನಂತರವೂ ನೆನಪಿನಲ್ಲಿ ಉಳಿಯುವಂತೆ ಆಗಿದೆ.

❑

**'ಬದುಕುವ ಮಾತು', 'ಆರೋಗ್ಯ', 'ಲೆಕ್ಕಪತ್ರ' ಮತ್ತು ಕವಿಯ(ಕ್ಷ) ಪ್ರಶ್ನೆಗಳು ಅಂಕಣಗಳನ್ನು ಮುಂದಿನ ಸಂಚಿಕೆಯಿಂದ ಮುಂದುವರೆಸಲಾಗುವುದು.**

**– ಸಂ.**

ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.




ಇನಾಯತ್ ಪಾಷ. ಎಸ್, *
ಮೊಬೈಲ್ : 9845022741


ಗ್ರಾಮಗಳಲ್ಲಿ ಜರುಗುವ ಯಾವುದೇ ಸಮಾರಂಭ, ಮಹೋತ್ಸವ, ವಿವಾಹ, ಜನನ ಮತ್ತು ಮರಣದಂತಹ ಸಂದರ್ಭಗಳಲ್ಲಿ ವ್ಯಕ್ತಿಗಳ ನೆನಪಿಗೋಸ್ಕರ ಗಿಡಗಳನ್ನು ನೆಡುವ ಮತ್ತು ಪೋಷಣೆ ಮಾಡುವ ಪರಿಪಾಠ ಬೆಳೆಸಿಕೊಂಡರೆ ಘಟನೆಯು ಚಿರಸ್ಮರಣೀಯವಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕರು ಚಿಂತಿಸಬೇಕಾದುದು ಅಗತ್ಯವಾಗಿದೆ.

# ಗ್ರಾಮ ಪಂಚಾಯತಿಗಳಲ್ಲಿ ವೃಕ್ಷ ವೃದ್ಧಿ – ಒಂದು ಚಿಂತನೆ

ಭಾರತದ ನಿಜ ಜೀವ ಅಡಗಿರುವುದು ಹಳ್ಳಿಗಳಲ್ಲಿ. ಹಳ್ಳಿಗಳು ಅಭಿವೃದ್ಧಿ ಹೊಂದಿದರೆ ದೇಶವೇ ಅಭಿವೃದ್ಧಿ ಹೊಂದಿದಂತೆ ಎಂದು ನಮ್ಮ ದೇಶದ ಬಹುಪಾಲು ಶ್ರೇಷ್ಠರು ಹೇಳಿರುವುದನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಅಂದರೆ ಭಾರತದ ವ್ಯವಸ್ಥೆಯಲ್ಲಿ ಹಳ್ಳಿಗಳೇ ದೇಶದ ಜೀವನಾಡಿಗಳಾಗಿವೆ. ಇಂತಹ ಹಳ್ಳಿಗಳ ಸರ್ವತೋಮುಖ ಜೀರ್ಣೋದ್ಧಾರಕ್ಕಾಗಿ ಭಾರತ ಸರ್ಕಾರವು ಸಂವಿಧಾನಕ್ಕೆ ಮಾಡಲಾದ 73 ಮತ್ತು 74ನೇ ತಿದ್ದುಪಡಿಯ ಅನುಸಾರ ಭಾರತದಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತಂದು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ಥಾಪಿಸಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಅದರಲ್ಲೂ ತಳ ಮಟ್ಟದಲ್ಲಿರುವ ಗ್ರಾಮ ಪಂಚಾಯತಿಗಳು ತಮ್ಮದೇ ಆದ ಹಳ್ಳಿಗಳ ಏಳಿಗೆಗೆ ಶ್ರಮಿಸಲು ಸಶಕ್ತವಾಗಿರುವುದನ್ನು ಮನಗಾಣಬೇಕಿದೆ.

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯ ಸಂಬಂಧಿತ ವಿಷಯಗಳು ಜಾಗತಿಕ ಮಟ್ಟದಲ್ಲಿ ಹೆಚ್ಚಾಗಿ ಚರ್ಚೆಯಾಗುತ್ತಿರುವುದನ್ನು ವಿವಿಧ ಮಾಧ್ಯಮಗಳ ಮೂಲಕ ಗಮನಿಸುತ್ತಿದ್ದೇವೆ. ಇತ್ತೀಚೆಗೆ ಡೆನ್ಮಾರ್ಕ್‌ನ ಕೋಪನ್ ಹೇಗನ್‌ನಲ್ಲಿ ನಡೆದ ಜಾಗತಿಕ ತಾಪಮಾನ ಸಂಬಂಧದ ಶೃಂಗ ಸಭೆಯಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಿದ್ದನ್ನು ಸಹ ಸ್ಮರಿಸಬಹುದು. ಪ್ರಕೃತಿಯಲ್ಲಿನ ತಾಪಮಾನ ವೈಪರೀತ್ಯದ ಬಗ್ಗೆ ತಿಳಿದುಕೊಳ್ಳಬೇಕಾದುದು ಈ ಸಂದರ್ಭದಲ್ಲಿ ಪ್ರಸ್ತುತವೆನಿಸುತ್ತದೆ. ಹಾಗೂ ಭಾರತ ಗಣರಾಜ್ಯದ ಅಂಗವಾಗಿರುವ ಕರ್ನಾಟಕದಲ್ಲಿನ ನಾವುಗಳು ಈ ಸಂದರ್ಭದಲ್ಲಿ ತಾಪಮಾನ ವೈಪರೀತ್ಯದ ಬಗ್ಗೆ ಜಾಗತಿಕವಾಗಿ ಮಾತನಾಡುವ ಬದಲು ನಮ್ಮ ರಾಜ್ಯದ ಗ್ರಾಮ ಮಟ್ಟಗಳಲ್ಲಿ ಏನಾದರೂ ಮಾಡಬಹುದೇ ಎಂದು ಚಿಂತಿಸಿದರೆ ಒಳ್ಳೆಯದು.



ಹೆಚ್ಚುತ್ತಿರುವ ತಾಪಮಾನಕ್ಕೆ ಪರಿಸರದ ನಾಶ ಅಥವಾ ಮಾಲಿನ್ಯ ಪ್ರಮುಖ ಕಾರಣವೆನಿಸಿದೆ. ಹಲವಾರು ಕಾರಣಗಳಿಂದಾಗಿ ಇತ್ತೀಚೆಗೆ ಹೆಚ್ಚು ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಪರಿಸರ ಮಾಲಿನ್ಯವೆಂದರೆ ಜಲ ಮಾಲಿನ್ಯ, ವಾಯು ಮಾಲಿನ್ಯ, ಭೂ ಮಾಲಿನ್ಯ , ಶಬ್ದ ಮಾಲಿನ್ಯ ಹೀಗೆ ಹಲವು ಪ್ರಕಾರಗಳನ್ನಾಗಿ ವಿಂಗಡಿಸಬಹುದು.


* ಕಾರ್ಯನಿರ್ವಾಹಕ ಸಹಾಯಕ, ಗ್ರಾಮ ಸ್ವರಾಜ್ ಯೋಜನೆ, ಕೇಂದ್ರ ಕಛೇರಿ, ಬೆಂಗಳೂರು.


ವಿಳಂಬ ಎಂಬುದು ನಮ್ಮನ್ನು ನಾವು ನಾಶ ಮಾಡಿಕೊಂಡಂತೆ.

ಹೆಚ್ಚುತ್ತಿರುವ ನಗರೀಕರಣ, ಗಣಿಗಾರಿಕೆ, ಕೈಗಾರೀಕೋದ್ಯಮಗಳು, ಸರ್ಕಾರದ ಹಲವು ಯೋಜನೆಗಳು (ವಿದ್ಯುತ್ ಮತ್ತು ಇತರೆ), ಮಿತಿ ಮೀರಿದ ಜನ ಸಂಖ್ಯೆ ಮತ್ತು ದುರಾಸೆಯ ಫಲವಾಗಿ ಮನುಷ್ಯ ಇಂದು ಭೂ ತಾಯಿಯ ಮೇಲೆ ಆಕ್ರಮಣಕಾರಿ ಮನೋವೃತ್ತಿಗಿಳಿದಿದ್ದಾನೆ. ಇವೆಲ್ಲವುಗಳ ಒಟ್ಟು ರೂಪವೇ ಪರಿಸರಕ್ಕಾದ ಹಾನಿ. " ಭೂಮಿಯು ಮನುಷ್ಯನ ಆಸೆಗಳನ್ನು ಈಡೇರಿಸಬಲ್ಲದು ಆದರೆ ದುರಾಸೆಗಳನ್ನಲ್ಲ" ಎಂಬ ಮಹಾತ್ಮಾ ಗಾಂಧೀಜಿಯವರ ಮಾತು ಈ ಸಂದರ್ಭದಲ್ಲಿ ಮನನ ಯೋಗ್ಯವಾದುದು. " ಪರಿಸರದ ನಾಶ – ಜೀವ ಸಂಕುಲದ ವಿನಾಶ " ಎಂಬುದು ಗೊತ್ತಿದ್ದಾಗ್ಯೂ ಸಹ ಮನುಷ್ಯನು ಪರಿಸರದ ನಾಶಕ್ಕೆ ಮುಂದಾಗಿರುವುದು ದುರದೃಷ್ಟವೇ ಸರಿ. ಪರಿಸರವು ತನ್ನ ಸಮತೋಲನ ಕಾಯ್ದುಕೊಳ್ಳುವಲ್ಲಿ ಅರಣ್ಯದ ಅಥವಾ ಗಿಡ ಮರಗಳ ಪಾತ್ರ ಮಹತ್ತರವಾದುದು. ಗಿಡ ಮರಗಳ ಸಂಪತ್ತು ಭೂತಾಯಿಯ ಅಮೂಲ್ಯ ಕೊಡುಗೆ. ಅರಣ್ಯವು ಹಲವು ಜೀವ ಸಂಕುಲಗಳ ವಾಸಸ್ಥಾನ, ಔಷಧೀಯ ಸಂಪನ್ಮೂಲಗಳ ಕೇಂದ್ರ ಬಿಂದು, ಆರೋಗ್ಯವಂತ ಭೂಮಿಗೆ ಬೇಕಾಗಿರುವ ಆಮ್ಲಜನಕ ಮತ್ತು ಸಾರಜನಕಗಳ ಪೂರೈಕೆಯ ಕೈಗಾರಿಕೆ. ಹೀಗೆ ಹತ್ತು ಹಲವು ಪ್ರಯೋಜನಗಳು ಅರಣ್ಯದಿಂದ ಮನುಷ್ಯನಿಗೆ ಲಭ್ಯವಾಗಿವೆ. ಇಂತಹ ಪೂಜ್ಯನೀಯ ಪ್ರಕೃತಿ ದೇವತೆಯಾದ ಅರಣ್ಯವನ್ನು ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ ಕಡಿದು ಭೂತಾಯಿಯನ್ನು ಬಂಜರುಗೊಳಿಸುತ್ತಿದ್ದಾನೆ.

ಅರಣ್ಯ ನಾಶದಿಂದಾಗಿ ಮನುಷ್ಯನ ಆರೋಗ್ಯವಂತ ಜೀವನಕ್ಕಾಗಿ ಬೇಕಾಗಿರುವ ಆಮ್ಲಜನಕದ ಕೊರತೆಯುಂಟಾಗುವುದು. ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಅರಣ್ಯ ನಾಶದ ಫಲಿತಾಂಶಗಳೇ ಎಂಬುದರಲ್ಲಿ ಅನುಮಾನವಿಲ್ಲ. ಅಮೂಲ್ಯ ಜೀವ ಸಂಕುಲಗಳ ಮತ್ತು ಔಷಧೀಯ ಸಸ್ಯಗಳ ಕಣ್ಮರೆ, ಆಮ್ಲ ಮಳೆ, ಮಿತಿ ಮೀರಿ ಹೆಚ್ಚುತ್ತಿರುವ ತಾಪಮಾನ, ಇತ್ಯಾದಿ ಪ್ರತಿಕೂಲ ಪರಿಣಾಮಗಳು ಅರಣ್ಯ ನಾಶದಿಂದ ಉಂಟಾಗುತ್ತಿರುವುದನ್ನು ಪ್ರತಿಯೊಬ್ಬ ನಾಗರೀಕನು ತಿಳಿದುಕೊಳ್ಳಬೇಕಾಗಿರುವುದು ಇಂದಿನ ಅತಿ ಪ್ರಸ್ತುತ ವಿಷಯವೆನಿಸಿದೆ. ಅರಣ್ಯ ನಾಶವು ದೇಶವೊಂದರ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ನೇರ ಪರಿಣಾಮ ಬೀರುತ್ತಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಅರಣ್ಯ ನಾಶ ತಡೆಗಟ್ಟುವ ಹಾಗೂ ಹೆಚ್ಚು ಹೆಚ್ಚು ಗಿಡ ಮರಗಳನ್ನು ಬೆಳೆಸಲು ಶ್ರದ್ಧಾಪೂರ್ವಕ ಕ್ರಮಗಳನ್ನು ವಹಿಸಬೇಕಾದ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಸಲುವಾಗಿ ದೇಶದ ಉದ್ದಗಲಕ್ಕೂ ಈಗಾಗಲೇ ಹಲವಾರು ಪ್ರಕ್ರಿಯೆಗಳು ನಡೆಯುತ್ತಿವೆ. ಆದರೂ ಸಹ ಪ್ರಗತಿ ತೀರಾ ನಿರಾಶದಾಯಕವೆಂದೇ ಹೇಳಬಹುದು. ಇಂತಹ ಪ್ರಕ್ರಿಯೆಗಳಲ್ಲಿ ಸುಂದರ್‌ಲಾಲ್ ಬಹುಗುಣ, ಮೇಧಾ ಪಾಟ್ಕರ್, ಸಾಲು ಮರದ ತಿಮ್ಮಕ್ಕರವರಂತಹ ಹೋರಾಟಗಳು ನಮಗೆ ಆದರ್ಶವೆನಿಸುತ್ತವೆ.

ಈಗಾಗಲೇ ಚರ್ಚಿಸಿದಂತೆ, ಭಾರತವು ಹಳ್ಳಿಗಳಿಂದ ಕೂಡಿದ ಬಹುದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರ. ಕರ್ನಾಟಕದಲ್ಲಿ ಹಳ್ಳಿಗಳ ಏಳ್ಗೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹೆಸರಿನ ಒಂದು ಇಲಾಖೆಯನ್ನೇ ಸ್ಥಾಪಿಸಲಾಗಿದೆ. ಈ ಇಲಾಖೆಯಡಿ ಹಲವಾರು ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಹೆಚ್ಚು ಹೆಚ್ಚು ಅನುದಾನಗಳು ನೇರವಾಗಿ ಗ್ರಾಮ ಪಂಚಾಯತಿಗಳಿಗೆ ವರ್ಗಾವಣೆಯಾಗುತ್ತಿವೆ. ಕೇಂದ್ರ / ರಾಜ್ಯ ಸರ್ಕಾರದಿಂದ ನೀಡಲ್ಪಡುವ ಅನುದಾನಗಳು ಕ್ಷೇತ್ರ ಮಟ್ಟದಲ್ಲಿ ಉಪಯುಕ್ತವಲ್ಲದ ಅನೇಕ ಉದ್ದೇಶಗಳಿಗೆ ಬಳಕೆಯಾಗುತ್ತಿರುವುದನ್ನು ಗಮನಿಸಿದ್ದೇವೆ. ಕರ್ನಾಟಕದ ಯಾವುದೇ ಹಳ್ಳಿಗಳಿಗೂ ಹೋದರೂ ತೀರಾ ಗುರುತಿಸಬಹುದಾದಂತಹ ಅಥವಾ ಆಸ್ತಿ ನಿರ್ಮಾಣ ಮಾಡುವ ಉದ್ದೇಶವನ್ನಿಟ್ಟುಕೊಂಡು ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಖ್ಯೆ ತುಂಬಾ ವಿರಳ. ಇದುವರೆಗೆ ಮಾಡಲಾದ ಅಭಿವೃದ್ಧಿ ಕಾರ್ಯಗಳಿಂದಾಗಿ ಹಳ್ಳಿಗಳ ಚಿತ್ರಣ ಸಂಪೂರ್ಣವಾಗಿ ಬದಲಾಗಿದೆ ಎಂದೇನು ನಾವು ಭಾವಿಸಬೇಕಾಗಿಲ್ಲ. ಮಾನವನ ಅಸ್ತಿತ್ವದ ಅಳಿವು ಉಳಿವಿನ ಪ್ರಶ್ನೆ ಎದುರಾಗಿರುವ ಇಂದಿನ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಮರ ಗಿಡಗಳನ್ನು ಬೆಳೆಸಿ ಪರಿಸರದ ಸಮತೋಲನ ಕಾಯ್ದುಕೊಂಡು ಮುಂದಿನ ಪೀಳಿಗೆಗೆ ಒಳ್ಳೆಯ ಪ್ರಕೃತಿಯನ್ನು ನೀಡಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಗ್ರಾಮ ಪಂಚಾಯತಿಗಳಿಗೆ ನೀಡಲಾಗುವ ಅನುದಾನದ ನೆರವಿನಿಂದ ಗ್ರಾಮ ಮಟ್ಟದಲ್ಲಿ ಅರಣ್ಯೀಕರಣ ಸಂಬಂಧಿತ ಯೋಜನೆಗಳನ್ನು ಹೆಚ್ಚಾಗಿ ಅನುಷ್ಠಾನಗೊಳಿಸಿದರೆ ಭೂತಾಯಿಗೆ ನ್ಯಾಯ ಒದಗಿಸಿದಂತಾಗುತ್ತದೆ.

ಗಿಡ ಮರಗಳನ್ನು ಬೆಳೆಸಲು ಹಳ್ಳಿಗಳನ್ನೇ ಆಯ್ದುಕೊಂಡರೆ ರಾಜ್ಯದ ಬಹುಪಾಲು ಭೌಗೋಳಿಕ ಪ್ರದೇಶವನ್ನು ವ್ಯಾಪಿಸಬಹುದು. ಗಿಡ ಮರಗಳನ್ನು ಬೆಳೆಸಲು ಗ್ರಾಮದಲ್ಲಿರುವ ಶಾಲಾ ಕಾಲೇಜು ಮೈದಾನಗಳು, ಕಛೇರಿಗಳ ಮುಂದಿನ ಆವರಣಗಳು, ರಸ್ತೆಯ ಇಕ್ಕೆಲುಗಳು, ಹೊಲದ ಬದುವುಗಳು, ಲಭ್ಯವಿರುವ ಇತರೆ ಸರ್ಕಾರಿ ಭೂಮಿಗಳನ್ನು ಬಳಸಿಕೊಳ್ಳಬಹುದು. ಇದಕ್ಕಾಗಿ ವನ

ಜ್ಞಾನ ತಲೆಯ ಮೇಲಿನ ಕಿರೀಟ, ವಿನಯ ವ್ಯಕ್ತಿಯ ವಿಕಸನ.

ಮಹೋತ್ಸವಗಳು, ವಿಶೇಷ ಅಭಿಯಾನ / ಆಂದೋಲನಗಳನ್ನು ಹಮ್ಮಿಕೊಳ್ಳಬಹುದು. ಇದಕ್ಕೆ ಸಹಕಾರಿಯಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಭಾಗೀದಾರರಿಗೆ ಪರಿಸರದ ಅದರಲ್ಲೂ ಅರಣ್ಯ / ಗಿಡ ಮರಗಳ ಮಹತ್ವವನ್ನು ಸಾರುವ ಅರಿವು / ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ವಿಷಯದಲ್ಲಿ ಅವರ ಸಾಮರ್ಥ್ಯಾಭಿವೃದ್ಧಿಯನ್ನು ಹೆಚ್ಚಿಸಬಹುದಾಗಿದೆ.

ರಾಜ್ಯ ಸರ್ಕಾರವು ಪ್ರತಿ ಆರ್ಥಿಕ ವರ್ಷದ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿಗೆಂದು ನಿಗಧಿಪಡಿಸುವ ಅನುದಾನದಲ್ಲಿ ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಇಲ್ಲದಂತೆ ಅನುದಾನವನ್ನು ಗಿಡ ಮರಗಳನ್ನು ಅಥವಾ ಅರಣ್ಯ ಬೆಳೆಸಲು ನಿಗಧಿಪಡಿಸಿದರೆ ತುಂಬಾ ಪ್ರಯೋಜನಕಾರಿಯಾದೀತು ಎಂಬುದು ನನ್ನ ಅಭಿಪ್ರಾಯ. ಕೇವಲ ಅನುದಾನ ನಿಗಧಿಪಡಿಸಿದರೆ ಸಾಲದು, ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಶುದ್ಧ ಮನಸ್ಸುಗಳ ಅಗತ್ಯವಿದೆ. ಕಳೆದ ಕೆಲವು ದಿನಗಳ ಹಿಂದೆ ಕನ್ನಡದ ಪ್ರಮುಖ ದಿನ ಪತ್ರಿಕೆಯ ಮುಖ ಪುಟದಲ್ಲಿ ಪ್ರಕಟವಾದ ಲೇಖನವೊಂದು ಗಮನ ಸೆಳೆಯಿತು. ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅರಣ್ಯೀಕರಣದ ಒಂದು ಕಾಮಗಾರಿ ಅನುಷ್ಠಾನಗೊಳಿಸಲಾಗಿದೆಯೆಂದು ಸುಳ್ಳು ದಾಖಲೆ ಸೃಷ್ಟಿಸಿ ಸರ್ಕಾರದ ಹಣವನ್ನು ಲಪಟಾಯಿಸಿರುವುದು ಬೆಳಕಿಗೆ ಬಂದಾಗ ತನಿಖೆಗಾಗಿ ತಂಡ ಬರುವುದೆಂದು ತಿಳಿದ ಕುಕೃತ್ಯದ ಭಾಗಿದಾರರು ಊರ ಪಕ್ಕದಲ್ಲಿ ಅದಾಗಲೇ ಇದ್ದ ಅರಣ್ಯಕ್ಕೆ ಬೆಂಕಿ ಹಚ್ಚಿ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸಿದ್ದು ಒಂದು ಘಟನೆಯೆನಿಸಿದರೂ ಅಲ್ಲಿದ್ದ ಅಪಾರ ಸಂಖ್ಯೆಯ ಬೆಲೆ ಬಾಳುವ ಮರಗಿಡಗಳ, ಜೀವ ಸಂಕುಲಗಳ ನಾಶಕ್ಕೆ ಕಾರಣರಾದೆವು ಎಂಬ ಸಣ್ಣ ಅಪರಾಧಿ ಪ್ರಜ್ಞೆ ಅವರಲ್ಲಿ ಮೂಡದೇ ಹೋದದ್ದು ವ್ಯವಸ್ಥೆಯ ಅಣಕ. ಮನುಷ್ಯ ಅಕ್ಷರಸ್ಥನಾದಂತೆ ಹೊಸ ಹೊಸ ದುಷ್ಕೃತ್ಯಗಳ ಅವಿಷ್ಕಾರ ಮಾಡುತ್ತಿದ್ದಾನೆ. ಇದು ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂಬುದಕ್ಕೆ ಹಿಡಿದ ಕೈಗನ್ನಡಿ ಎಂದರೆ ಅತಿಶಯೋಕ್ತಿ ಯಾಗಲಾರದು.


ಅಂತರ್ಜಲ ಮಟ್ಟ ಕುಸಿದು ಕುಡಿಯುವ ನೀರಿಗೂ ಪರಿತಪಿಸುವಂತಹ ಕ್ಲಿಷ್ಟಕರ ಸ್ಥಿತಿ ನಿರ್ಮಾಣ ಮಾಡಿಕೊಂಡ ಮನುಷ್ಯ ಅದರ ಕಾರಣಗಳನ್ನು ಹುಡುಕಲಾರದೇ ಹೋದದ್ದು ವಿಚಿತ್ರ. ಅರಣ್ಯೀಕರಣದಿಂದಾಗಿ ಅಂತರ್ಜಲ ಮಟ್ಟವನ್ನು ವೃದ್ಧಿಸಬಹುದೆಂಬುದೇ ಸಂತೋಷದಾಯಕವಾದುದು.

ಕರ್ನಾಟಕದಲ್ಲಿ ಒಟ್ಟು 5628 ಗ್ರಾಮ ಪಂಚಾಯತಿಗಳು ಮತ್ತು ಈ ಭಾಗದಲ್ಲಿ ಸರಿ ಸುಮಾರು 40,000 ಕ್ಕಿಂತಲೂ ಹೆಚ್ಚು ಹಳ್ಳಿಗಳಿವೆ ಎಂದು ಅಂದಾಜಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿ ಬರುವ ಪ್ರತಿ ಗ್ರಾಮದಲ್ಲಿ ಪ್ರತಿ ವರ್ಷ ಕನಿಷ್ಟ 500 ಗಿಡಗಳನ್ನು ಹೊಸದಾಗಿ ನೆಟ್ಟು ಹೆಮ್ಮರಗಳನ್ನಾಗಿ ಬೆಳೆಸುವ ದೃಢಸಂಕಲ್ಪ ತೊಟ್ಟರೆ 40,000 ಹಳ್ಳಿಗಳಿಂದ ಎರಡು ಕೋಟಿ ಮರಗಳನ್ನು ಬೆಳೆಸಬಹುದು. ಇದು ಹಲವು ವರ್ಷಗಳು ಹೀಗೆ ಮುಂದುವರಿದರೆ ಫಲಿತಾಂಶ ಅದ್ಭುತವಾಗಿರುತ್ತದೆ. ಗಿಡಗಳ ನೆಡುವಿಕೆ, ಪೋಷಣೆ ಕಾರ್ಯಗಳಲ್ಲಿ ಈಗಾಗಲೇ ಗ್ರಾಮಗಳಲ್ಲಿ ಕ್ರಿಯಾಶೀಲವಾಗಿರುವ ಯುವಕ ಮಂಡಳಿಗಳು, ಸ್ವ ಸಹಾಯ ಗುಂಪುಗಳು, ಹಾಗೂ ಇತರೆ ಸಂಘಟನೆಗಳ ನೆರವನ್ನು ಪಡೆಯಬಹುದು. ಗಿಡಗಳ ಪೊರೈಕೆಯಲ್ಲಿ ಅರಣ್ಯ ಇಲಾಖೆಯು ಕಟಿಬದ್ಧವಾದ ಪಾತ್ರ ನಿರ್ವಹಿಸಬೇಕಾಗುತ್ತದೆ.

ಅಲ್ಲದೇ ಗ್ರಾಮಗಳಲ್ಲಿ ಜರುಗುವ ಯಾವುದೇ ಸಮಾರಂಭ, ಮಹೋತ್ಸವ, ವಿವಾಹ, ಜನನ ಮತ್ತು ಮರಣದಂತಹ ಸಂದರ್ಭಗಳಲ್ಲಿ ವ್ಯಕ್ತಿಗಳ ನೆನಪಿಗೋಸ್ಕರ ಗಿಡಗಳನ್ನು ನೆಡುವ ಮತ್ತು ಪೋಷಣೆ ಮಾಡುವ ಪರಿಪಾಠ ಬೆಳೆಸಿಕೊಂಡರೆ ಘಟನೆಯು ಚಿರಸ್ಮರಣೀಯುವಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕರು ಚಿಂತಿಸಬೇಕಾದುದು ಅಗತ್ಯವಾಗಿದೆ. ದಾವಣಗೆರೆ ಜಿಲ್ಲಾಡಳಿತದ ವತಿಯಿಂದ ಸಮೀಪದ ಬಾತಿ ಗುಡ್ಡದಲ್ಲಿ ಪವಿತ್ರ ವನ ಹೆಸರಿನ ಇಂತಹದ್ದೊಂದು ಯೋಜನೆಯನ್ನು ಹಮ್ಮಿಕೊಂಡಿರುವುದು ಉತ್ತಮ ಬೆಳವಣಿಗೆಯಾಗಿದೆ. ಗಿಡ ಮರಗಳನ್ನು ಕಡಿಯುತ್ತಿರುವ ಬಗ್ಗೆ ವ್ಯಾಪಕ ಜನ ಜಾಗೃತಿ ಮೂಡಿಸಿ ಚಿಪ್ಕೋ ಮತ್ತು ಅಪ್ಪಿಕೋದಂತಹ ಚಳುವಳಿಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ದೃಢ ನಿಶ್ಚಯದೊಂದಿಗೆ ಪ್ರತಿ ವರ್ಷ ಎರಡು ಕೋಟಿಯಂತೆ ಗಿಡ ಮರಗಳನ್ನು ಬೆಳೆಸುವ ಪರಿಪಾಠ ಬೆಳೆಸಿಕೊಂಡರೆ ಐದು ವರ್ಷಗಳಲ್ಲಿಯೇ ಸುಮಾರು ಹತ್ತು ಕೋಟಿ ಗಿಡ ಮರಗಳನ್ನು ಬೆಳೆಸಿದ ಹಿರಿಮೆ ನಮ್ಮದಾಗುತ್ತದೆ. ಹತ್ತು ಕೋಟಿ ಗಿಡ ಮರಗಳ ಕರ್ನಾಟಕ ಸಮೃದ್ಧ ಕರ್ನಾಟಕವಾಗಲಿದೆ. ಎಲ್ಲಿ ನೋಡಿದರೂ ಹಸಿರು, ಹಕ್ಕಿಗಳ ಕಲರವ, ಸಮಯಕ್ಕೆ ಸರಿಯಾಗಿ ಮಳೆ – ಬೆಳೆ, ರೈತನ ಮುಖದಲ್ಲಿ ಮಂದಹಾಸ. ಅಬ್ಬಾ ! ಇದೆಲ್ಲಾ ನಿಜವಾದಲ್ಲಿ ಸುಭೀಕ್ಷ ಕರ್ನಾಟಕ. ಕರ್ನಾಟಕವು ದೇಶಕ್ಕೇ ಮಾದರಿ. ನಾವಿರುವ ಇಳೆ ತಂಪಾಗಿರಲಿ ಎನ್ನುವ ಕಾರಣಕ್ಕಾಗಿ ಇದು ಸಾಕಾರಗೊಳ್ಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ಮುನ್ನಡೆಯೋಣ. ಜೈ ಭಾರತಾಂಬೆ, ಜೈ ಭುವನೇಶ್ವರಿ ಮಾತೆ. ❑

ಸುಮ್ಮನೆ ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದು ಲೇಸು.



ಎಂ.ವಿ. ಜಯಣ್ಣ. *

ಗ್ರಾಮ ಪಂಚಾಯತಿಗಳ ಸಬಲೀಕರಣ ಯೋಜನೆಯಾದ ಗ್ರಾಮ ಸ್ವರಾಜ್ ಯೋಜನೆಯಲ್ಲಿ ಲೆಕ್ಕ ದಾಖಲೆ ನಿರ್ವಹಣೆಗೆ ಹೆಚ್ಚಿನ ಮಹತ್ವ ಕೊಟ್ಟಿದೆ.

# ಜೋಡಿ ದಾಖಲೆ ಲೆಕ್ಕ ಪದ್ಧತಿ

## (Double Entry Accounting System)

ಜೋಡಿ ದಾಖಲೆ ಲೆಕ್ಕ ಪದ್ಧತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಏಕ ದಾಖಲೆ ಲೆಕ್ಕ ಪದ್ಧತಿಗಿಂತ ಭಿನ್ನವಾಗಿದೆ. ಹಿಂದಿನ ಕಾಲದಲ್ಲಿ ವ್ಯವಹಾರಗಳು ಕಡಿಮೆಯಿದ್ದುದರಿಂದ ಏಕ ದಾಖಲೆ ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ವ್ಯವಹಾರಗಳು ಬೆಳದಂತೆಲ್ಲಾ ಆಧುನಿಕ ಜೋಡಿ ದಾಖಲೆ ಪದ್ಧತಿಯು "ವಿಶ್ವದಲ್ಲಿ" ಜಾರಿಗೆ ಬಂದಿತು. ಇದುವರೆವಿಗೂ ಸರ್ಕಾರವನ್ನು ಹೊರತುಪಡಿಸಿ ಸರ್ಕಾರೇತರ ಸಂಸ್ಥೆಗಳೆಲ್ಲವು ಈ ಜೋಡಿ ದಾಖಲೆ ಲೆಕ್ಕ ಪದ್ಧತಿಯಲ್ಲಿ ಲೆಕ್ಕ ನಿರ್ವಹಿಸುತ್ತಿದ್ದಾರೆ ಹಾಗೂ ಮುಂದುವರೆದ ಸಂಸ್ಥೆಗಳೆಲ್ಲವು ಅವರದೇ ಆದಂತಹ ಜೋಡಿ ದಾಖಲೆ ಲೆಕ್ಕ ಪದ್ಧತಿ ಲೆಕ್ಕ ತಂತ್ರಾಂಶವನ್ನು ಅಳವಡಿಸಿಕೊಂಡಿರುತ್ತವೆ.

ಆದುದರಿಂದ ಆಧುನಿಕ ಕಾಲಕ್ಕೆ ಹೊಂದಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರವು ಜೋಡಿ ದಾಖಲೆ ಲೆಕ್ಕ ಪದ್ಧತಿಯನ್ನು ಮತ್ತು ಲೆಕ್ಕ ತಂತ್ರಾಂಶವನ್ನು ಅಳವಡಿಸಲು ಮುಂದಾಗಿದೆ. ಮೊದಲನೆ ಹೆಜ್ಜೆಯಾಗಿ ಕರ್ನಾಟಕ ರಾಜ್ಯ ಸರ್ಕಾರ 2006ರಲ್ಲಿ ಗ್ರಾಮಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು ನಿಯಮಗಳನ್ನು ಜಾರಿಗೊಳಿಸುವ ಮೂಲಕ ಗ್ರಾಮ ಪಂಚಾಯಿತಿಗಳಲ್ಲಿ ಜೋಡಿ ದಾಖಲೆ ಲೆಕ್ಕ ಪದ್ಧತಿಯನ್ನು ಅಳವಡಿಸುವ ಪ್ರಯತ್ನ ಕೈಗೊಂಡಿದೆ. ಆಧುನಿಕ ಗಣಕೀಕರಣ ಯುಗಕ್ಕೆ ಹೊಂದಿಕೊಳ್ಳುವ ಸಲುವಾಗಿ ಜೋಡಿ ದಾಖಲೆ ಲೆಕ್ಕ ಪದ್ಧತಿ ಒಳಗೊಂಡಂತೆ ಸರ್ವ ಮಾಹಿತಿಯನ್ನು ಪ್ರದರ್ಶಿಸುವ ಪಂಚತಂತ್ರ(ಪಂಚಾಯಿತಿ ತಂತ್ರಾಂಶ) ತಂತ್ರಾಂಶವನ್ನು ಅಭಿವೃದ್ಧಿಗೊಳಿಸಿದೆ. ಈ ತಂತ್ರಾಂಶವನ್ನು ಪ್ರಾಯೋಗಿಕವಾಗಿ 2 ತಾಲ್ಲೂಕುಗಳಲ್ಲಿ ಅಳವಡಿಸಲಾಯಿತು. ತದನಂತರ ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿಗಳ ಗಣಕಯಂತ್ರಗಳಲ್ಲಿ ಪಂಚತಂತ್ರ ತಂತ್ರಾಂಶವನ್ನು ಅಳವಡಿಸಿದೆ. ಕೆಲವೊಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದ ಮೂಲಕವೇ ವಾರ್ಷಿಕ ಲೆಕ್ಕ ದಾಖಲೆಗಳ ಜಮಾ ಖರ್ಚು ತಃಖ್ತೆಯನ್ನು ಅಳವಡಿಸಿದೆ. ಈ ತಂತ್ರಾಂಶದಿಂದ ಕುಳಿತಲ್ಲಿಯೇ ಗ್ರಾಮ ಪಂಚಾಯಿತಿಗಳ ವ್ಯವಹಾರವನ್ನು ವೀಕ್ಷಿಸುವಂತಾಗಿದೆ.

### ಜೋಡಿ ದಾಖಲೆ ಲೆಕ್ಕ ಪದ್ಧತಿಯೆಂದರೇನು ?

ದಿನನಿತ್ಯದ ವ್ಯವಹಾರದಲ್ಲಿ ಯಾವುದೊಂದು ವ್ಯವಹಾರವನ್ನು ತೆಗೆದುಕೊಂಡರೆ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವು ಇದ್ದೇ ಇರುತ್ತದೆ. ಅಂದರೆ ವ್ಯವಹಾರ ಮಾಡಲು ಎರಡು ಕ್ರಿಯೆಗಳು(ಜೋಡಿ) ಇರಲೇ ಬೇಕು. ಅಂದರೆ ಒಬ್ಬ ವ್ಯಕ್ತಿ ಕೊಟ್ಟರೆ ಇನ್ನೊಬ್ಬ ವ್ಯಕ್ತಿ ಪಡೆಯಲು ಇರಲೇ ಬೇಕು. ಉದಾ: ಹಣವನ್ನು ಬ್ಯಾಂಕಿಗೆ ತುಂಬುವುದೆಂದರೆ ಬ್ಯಾಂಕಿನವರು ತೆಗೆದುಕೊಳ್ಳುತ್ತಾರೆ, ಗ್ರಾಹಕ ಕೊಡುತ್ತಾನೆ. ಅದೇ ರೀತಿ ಗುತ್ತಿಗೆದಾರರಿಗೆ ಪಾವತಿ ಮಾಡುವಾಗ ಮತ್ತು ಕರವನ್ನು ಗ್ರಾಮ ಪಂಚಾಯಿತಿ ವಸೂಲಿ ಮಾಡುವಾಗ ಎರಡು ವ್ಯಕ್ತಿಗಳು ಇರುತ್ತಾರೆ. ಹೀಗೆ ಎರಡು ವ್ಯವಹಾರಗಳನ್ನು ದಾಖಲಿಸುವುದರಿಂದ ಜೋಡಿ ದಾಖಲೆ ಲೆಕ್ಕಪದ್ಧತಿಯೆನ್ನುತ್ತಾರೆ.

### ಏಕ ದಾಖಲೆ ಲೆಕ್ಕಪದ್ಧತಿಯೆಂದರೇನು? (Single Entry Accounting System)

ಏಕ ದಾಖಲೆ ಲೆಕ್ಕಪದ್ಧತಿ ತಜ್ಞರ ಪ್ರಕಾರ ಹೇಳಬೇಕೆಂದರೆ ಲೆಕ್ಕ ಪದ್ಧತಿಯೇ ಅಲ್ಲಾ. ಈ ಪದ್ಧತಿಯಲ್ಲಿ ಕೇವಲ ನಗದು ವ್ಯವಹಾರವಷ್ಟೆ ದಾಖಲಾಗುತ್ತದೆ. ಇದಕ್ಕೆ ತಕ್ಕದಾದ ಯಾವುದೇ ಒಂದು ನಿಯಮಗಳಿಲ್ಲ.

* ಲೆಕ್ಕಾಧಿಕಾರಿಗಳು, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು.

ಧರ್ಮ ಎಂದರೆ ಒಳ್ಳೆಯ ನಡತೆ; ಬರೇ ನಂಬಿಕೆಯಲ್ಲ.

ಈ ಪದ್ಧತಿಯನ್ನು ಕೇವಲ ವೈಯಕ್ತಿಕ (Personal) ಲೆಕ್ಕಚಾರಕ್ಕೆ ಬಳಸಬಹುದಾಗಿದೆ. ಇದರಿಂದ ಯಾರಿಗೆ ಎಷ್ಟು ಕೊಡಬೇಕು ಮತ್ತು ಎಷ್ಟು ಬರಬೇಕು ಎನ್ನುವ ನಿಖರ ಮಾಹಿತಿ ದೊರಕುವುದಿಲ್ಲಾ. ಆದುದರಿಂದ ಇದನ್ನು ಒಂದು ಅಪೂರ್ಣ ಲೆಕ್ಕ ಪದ್ದತಿ ಎಂದೇ ಪರಿಗಣಿಸಲಾಗಿದೆ. ಏಕ ದಾಖಲೆ ಪದ್ದತಿಯಿಂದ ವಾರ್ಷಿಕ ಸ್ವೀಕೃತಿ ಮತ್ತು ಪಾವತಿ ತಃಖ್ತೆಯನ್ನಾಗಲಿ(Receipt and Payment) ಆದಾಯ ಮತ್ತು ಖರ್ಚು ತಖ್ತೆಯನ್ನಾಗಲಿ (Income and Expenditure) ಅಥವಾ ಸಮತೋಲನಾ ಪಟ್ಟಿ (Balance Sheet)ಯನ್ನಾಗಲಿ ತಯಾರಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಈ ಪದ್ಧತಿಯಿಂದ ನಿಖರ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲ.

### ಜೋಡಿ ದಾಖಲೆ ಲೆಕ್ಕಪದ್ಧತಿ ಅಳವಡಿಸುವಿಕೆಯ ಉಪಯೋಗಗಳು:

ಸಂಚಯನ ಲೆಕ್ಕ ಪದ್ಧತಿ (Accural System of Accounting)ಯನ್ನು ಜೋಡಿ ಲೆಕ್ಕ ಪದ್ಧತಿಯಲ್ಲಿ ಅಳವಡಿಸಲಾಗುತ್ತದೆ. ಅಂದರೆ ನಗದು ವ್ಯವಹಾರಕಷ್ಟೇ ಅಲ್ಲದೆ ಒಂದು ವರ್ಷದಲ್ಲಿ ಬರಬೇಕಾದ ಆದಾಯ (Accural Income) ಮತ್ತು ಕೊಡಬೇಕಾದ ವೆಚ್ಚವನ್ನು (Accrual Expenditure) ಸಹ ಪರಿಗಣನೆಗೆ ತೆಗೆದು ಕೊಳ್ಳಲಾಗುತ್ತದೆ.

ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕನಿರ್ವಹಣೆ ಮಾಡುವುದರಿಂದ ದಿನ ನಿತ್ಯದ ವ್ಯವಹಾರ ತಿಳಿಯುವುದರ ಜೊತೆಗೆ ಪ್ರಾರಂಭದಲ್ಲಿ ಮತ್ತು ಅಂತಿಮದಲ್ಲಿ ಕೈಯಲ್ಲಿರುವ ನಗದು ಎಷ್ಟಿದೆ ಎನ್ನುವುದು ತಿಳಿಯುತ್ತದೆ. ಜಮಾ ಮತ್ತು ಪಾವತಿಯನ್ನು ಸುಲಭವಾಗಿ ತಿಳಿಯಬಹುದು. ವಾರ್ಷಿಕ ಆದಾಯ ಖರ್ಚಿಗಿಂತ ಹೆಚ್ಚಿದೆಯೇ ಅಥವಾ ಕಡಿಮೆಯಿದೆಯೇ ಎನ್ನುವುದು ತಿಳಿಯುತ್ತದೆ.

**ಸನದು ಲೇಖಪಾಲರ ಸೇವೆ :** ಗ್ರಾಮ ಪಂಚಾಯತಿಗಳ ಲೆಕ್ಕ ನಿರ್ವಹಣೆಯನ್ನು ಸಬಲೀಕರಣಗೊಳಿಸಲು ಜೋಡಿ ದಾಖಲೆ ಲೆಕ್ಕ ಪದ್ಧತಿಗೆ ಮಾರ್ಪಡಿಸುವ ನಿಟ್ಟಿನಲ್ಲಿ ಸರ್ಕಾರವು ಲೆಕ್ಕ ಪರಿಣಿತರಾದ ಸನದು ಲೇಖಪಾಲರ (ಚಾರ್ಟರ್ಡ್ ಅಕೌಂಟೆಂಟ್) ಸೇವೆಯನ್ನು ಏಪ್ರಿಲ್ 2007ರಿಂದ ಗ್ರಾಮ ಪಂಚಾಯತಿ ಲೆಕ್ಕ ನಿರ್ವಹಣೆಗೆ ನೇಮಿಸಲಾಗಿದೆ. ಇವರ ಸೇವೆಯನ್ನು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಈಗಾಗಲೇ 2007ರಿಂದ ಇದುವರೆಗಿನ ಲೆಕ್ಕ ದಾಖಲೆಗಳನ್ನು ಜೋಡಿ ದಾಖಲೆ ಪದ್ಧತಿಯಲ್ಲಿಯೇ ನಿರ್ವಹಿಸಲಾಗುತ್ತಿದೆ.

### ಲೆಕ್ಕ ದಾಖಲೆಗಳ ನಿರ್ವಹಿಸುವುದರ ಮಹತ್ವ:

ಎಲ್ಲಾ ಹಂತದಲ್ಲಿ ವಿಶಿಷ್ಟವಾಗಿ ಪ್ರಜಾಪ್ರಭುತ್ವ ಭಾರತದಲ್ಲಿ ಲೆಕ್ಕ ದಾಖಲೆಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಲೆಕ್ಕ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಿದರೆ ಬದಲಾಗುವ ಚುನಾಯಿತ ಪ್ರತಿನಿಧಿಗಳಿಗೆ ಈ ಹಿಂದೆ ಹಣಕಾಸಿನ ವ್ಯವಹಾರ ಏನಾಗಿತ್ತು ಮುಂದೆ ಏನು ಮಾಡಬೇಕು ಎನ್ನುವುದರ ಅರಿವಾಗುತ್ತದೆ, ಹಾಗೂ ಮಾಡಿರುವುದಕ್ಕೂ ದಾಖಲೆಯಿರುತ್ತದೆ. ಆದುದರಿಂದ ಹೆಚ್ಚಿನ ಒತ್ತನ್ನು ಲೆಕ್ಕ ದಾಖಲೆಗಳಿಗೆ ಕೊಡಲಾಗಿದೆ. ಈ ದಾಖಲೆಗಳೆ ಹಿಂದಿನ ಆಗು ಹೋಗುಗಳನ್ನು ಪ್ರತಿನಿಧಿಸುತ್ತವೆ. ಗ್ರಾಮ ಸ್ವರಾಜ್ ಯೋಜನೆಯ ಮೂಲಕ ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಅಳವಡಿಸುವ ಪ್ರಯತ್ನ ರಾಜ್ಯ ಸರ್ಕಾರ ಮಾಡಿದೆ.

ಲೆಕ್ಕ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುವ ವ್ಯಕ್ತಿಗಳು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾವಣೆಯಾಗುವುದು ಸರ್ಕಾರದಲ್ಲಿ ಸರ್ವೇಸಾಮಾನ್ಯ ಅಥವಾ ಒಬ್ಬ ಚುನಾಯಿತ ವ್ಯಕ್ತಿ ಬದಲು ಇನ್ನೋರ್ವ ಚುನಾಯಿತ ವ್ಯಕ್ತಿ ಬರುವುದು ಉಂಟು. ಇಂತಹ ಸಂದರ್ಭದಲ್ಲಿ ಲೆಕ್ಕ ದಾಖಲೆಗಳು ವ್ಯವಸ್ಥಿತವಾಗಿಲ್ಲದಿದ್ದರೆ ಈ ರೀತಿ ಬದಲಾವಣೆಯಾದಾಗ ಹಿಂದಿನ ಲೆಕ್ಕ ಲಭ್ಯತೆಯ ಸಮಸ್ಯೆ ಉದ್ಭವಿಸುತ್ತದೆ. ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆಯಲ್ಲಿ ಪ್ರತಿ ವರ್ಷ ಸ್ಥಳಿಯ ಲೆಕ್ಕ ಪರಿಶೋಧನೆ ಇಲಾಖೆಯು ಈ ಕುರಿತಾದ ಸಮಸ್ಯೆಗಳನ್ನು ಎದುರಿಸುತ್ತಿದೆ.

ಅದ್ದರಿಂದಾಗಿ ಗ್ರಾಮ ಪಂಚಾಯತಿಗಳ ಸಬಲೀಕರಣ ಯೋಜನೆಯಾದ ಗ್ರಾಮ ಸ್ವರಾಜ್ ಯೋಜನೆಯಲ್ಲಿ ಲೆಕ್ಕ ದಾಖಲೆ ನಿರ್ವಹಣೆಗೆ ಹೆಚ್ಚಿನ ಮಹತ್ವ ಕೊಟ್ಟಿದೆ.

### ಹಣಕಾಸು ಲೆಕ್ಕಚಾರದ ಉಸ್ತುವಾರಿ ಮತ್ತು ಮೇಲ್ವಿಚಾರಣೆ

ಯಾವುದೇ ಒಂದು ಯೋಜನೆಯು ಯಶಸ್ವಿಯಾಗಿ ಕಾರ್ಯಗತಗೊಳ್ಳಬೇಕಾದರೆ ಅದರ ಉಸ್ತುವಾರಿ ಮಹತ್ವದ ಪಾತ್ರವಹಿಸುತ್ತದೆ. ಗ್ರಾಮ ಸ್ವರಾಜ್ ಯೋಜನೆಯ ಕಛೇರಿಯಿಂದಲ್ಲದೆ ಹಲವಾರು ಹಂತಗಳಲ್ಲಿ ಗ್ರಾಮ ಪಂಚಾಯಿತಿ ಕಾರ್ಯಕ್ರಮ ಮೇಲ್ವಿಚಾರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ.

#### ೧. ಆಂತರಿಕ ಲೆಕ್ಕ ಪರಿಶೋಧನೆ ಸನದಿ ಲೇಖಪಾಲರಿಂದ (ಚಾರ್ಟರ್ಡ ಅಕೌಂಟೆಂಟ್):

ಗ್ರಾಮ ಸ್ವರಾಜ್ ಯೋಜನೆಯ ಕಾರ್ಯ ಚಟುವಟಿಕೆಗಳನ್ನು ಸನದು ಲೇಖಪಾಲರು ಪ್ರತಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಕಾರ್ಯಕ್ರಮದ ಪೂರ್ಣ ಪ್ರಕ್ರಿಯೆಯನ್ನು ಮೊದಲಿನಿಂದ ಅಂದರೆ ಕ್ರಿಯಾ ಯೋಜನೆಯಿಂದ ಅಂತಿಮ ಪಾವತಿಯಾಗುವವರೆಗೂ ವಿವರವಾಗಿ ಪರಿಶೀಲನೆ ಮಾಡಿ ಮುಖ್ಯಸ್ಥರಿಗೆ ಆಂತರಿಕ ಲೆಕ್ಕ ಪರಿಶೋಧನಾ ವರದಿ ಸಲ್ಲಿಸುತ್ತಾರೆ. ಈ ಆಂತರಿಕ ಲೆಕ್ಕ ಪರಿಶೋಧನಾ ವರದಿಯನ್ನು ಮುಖ್ಯಸ್ಥರು ಪರಿಶೀಲಿಸಿ ಅನುಪಾಲನಾ ವರದಿ ಹಾಗೂ ಮುಂದಿನ ಕ್ರಮಕ್ಕಾಗಿ ಸಂಬಂಧ ಪಟ್ಟ ತಾಲ್ಲೂಕಿಗೆ ಕಳುಹಿಸಲಾಗುವುದು. ಆಂತರಿಕ ಲೆಕ್ಕ ಪರಿಶೋಧನೆಯಿಂದಾಗಿ ಲೆಕ್ಕ ದಾಖಲೆಗಳ ನಿರ್ವಹಣೆ ಉತ್ತಮಗೊಂಡಿದೆ ಹಾಗೂ ನಿರ್ವಹಣೆ ಮಾಡಬೇಕಾದ ಜವಬ್ದಾರಿಯ ಅರಿವಾಗಿದೆ.

ನಾಳೆ ಮಾಡುವ ಕೆಲಸ ಇಂದೇ ಮಾಡು, ಇಂದು ಮಾಡುವ ಕೆಲಸ ಈಗಲೇ ಮಾಡು.

**೨. ಬಾಹ್ಯ ಲೆಕ್ಕ ಪರಿಶೋಧನೆ ಸನದಿ ಲೇಖಪಾಲರಿಂದ (ಚಾರ್ಟರ್ಡ್ ಆಕೌಂಟೆಂಟ್):**

ಗ್ರಾಮ ಸ್ವರಾಜ್ ಯೋಜನೆಯು ಬಾಹ್ಯ ಲೆಕ್ಕ ಪರಿಶೋಧನೆಗಾಗಿ ಸನದು ಲೇಖಪಾಲರನ್ನು ನೇಮಿಸಲಾಗಿದೆ. ಇವರು ಯೋಜನೆಯಿಂದ ಬಿಡುಗಡೆಯಾದ ಅನುದಾನವು ಸಂಬಂಧ ಪಟ್ಟ ಗ್ರಾಮ ಪಂಚಾಯಿತಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುವುದನ್ನು ಪರಿಶೀಲಿಸಿ ವರದಿ ಮಾಡುವರು ಹಾಗೂ ಮುಖ್ಯ ಕಛೇರಿಯನ್ನೊಳಗೊಂಡಂತೆ ೧೭೫ ತಾಲ್ಲೂಕುಗಳಲ್ಲಿ ಪ್ರತಿ ಸಾಮರ್ಥ್ಯ ಸೌಧಗಳು, ೫ ಜಿಲ್ಲೆಗಳಲ್ಲಿ ನಿರ್ಮಾಣ ಮಾಡಿರುವ ಉಪಗ್ರಹ ಆಧಾರಿತ ತರಬೇತಿ ಕೇಂದ್ರ (ಸ್ಯಾಟ್ ಕಾಮ್) ಖುದ್ದಾಗಿ ಹಾಗೂ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಲೆಕ್ಕ ಪರಿಶೀಲನೆ ಮಾಡಿ ವರದಿ ಮಾಡುವರು.

**೩. ರಾಜ್ಯ ಲೆಕ್ಕಪತ್ರ ಇಲಾಖೆ ನಿಯಂತ್ರಕರು ಇವರಿಂದ ಗ್ರಾಮ ಪಂಚಾಯಿತಿಗಳ ವಾರ್ಷಿಕ ಲೆಕ್ಕ ಪರಿಶೋಧನೆ:**

ಗ್ರಾಮ ಪಂಚಾಯಿತಿಗಳ ವಾರ್ಷಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಹಾಯಕ ನಿಯಂತ್ರಕರು ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆ(KSAD)ಯವರು ನಿರ್ವಹಿಸುತ್ತಾರೆ. ಗ್ರಾಮ ಸ್ವರಾಜ್ ಯೋಜನೆಯುನ್ನು ಸೇರಿ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಪೂರ್ಣ ಜಮಾ ಮತ್ತು ಪಾವತಿಗಳನ್ನು ವಿವರವಾಗಿ ಲೆಕ್ಕಪರಿಶೋಧನೆ ಮಾಡುತ್ತಾರೆ. ಯೋಜನೆಯ ವ್ಯಾಪ್ತಿಯಲ್ಲಿ ಬರುವ ೧೫ ಜಿಲ್ಲೆಗಳಲ್ಲಿರುವ ಸಹಾಯ ನಿಯಂತ್ರಕರು ಸ್ಥಳಿಯ ಲೆಕ್ಕ ಪರಿಶೋಧನಾ ಇಲಾಖೆ ಇವರಿಗೆ ಸಾಮರ್ಥ್ಯ ವೃದ್ಧಿಸಲು ಗಣಕಿಕರಣ ಯಂತ್ರಗಳನ್ನು ಸಹ ಈ ಯೋಜನೆಯಿಂದ ಸರಬರಾಜು ಮಾಡಲಾಗಿದೆ.

ಗ್ರಾಮ ಪಂಚಾಯಿತಿಗಳಲ್ಲಿ ವ್ಾರ್ಷಿಕ ಲೆಕ್ಕ ಪರಿಶೋಧನೆಯು ಪ್ರತಿ ವರ್ಷ ಸೆಪ್ಟೆಂಬರ್ ಅಂತ್ಯದೊಳಗಾಗಿ ಆಗಲೇಬೇಕು. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇವರು ಸಲ್ಲಿಸಿದ ಹಿಂದಿನ ವಾರ್ಷಿಕ ಲೆಕ್ಕ ಪರಿಶೋಧನೆ ಆಧಾರದ ಮೇಲೆ ಮುಂದಿನ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತದೆ. ಒಂದು ವೇಳೆ, ಗ್ರಾಮ ಪಂಚಾಯತಿಗಳಲ್ಲಿ ಲೆಕ್ಕವನ್ನು ಹಿಂದಿನ ವರ್ಷದ ಅಂತ್ಯದವರೆಗೆ ಬರೆಯದಿದ್ದಲ್ಲಿ, ಬಿಡುಗಡೆಗೆ ಬಾಕಿ ಇರುವ ಮುಂದಿನ ಅನುದಾನವನ್ನು ತಡೆ ಹಿಡಿಯಲಾಗುವುದು.

ಈ ರೀತಿಯ ಉಸ್ತುವಾರಿಯು ಗ್ರಾಮ ಸ್ವರಾಜ್ ಯೋಜನೆಯಲ್ಲಿರುವುದರಿಂದ ಮೊದಲನೆ ವರ್ಷದ ಕೆಲವೊಂದು ದುರುಪಯೋಗ ಪ್ರಕರಣಗಳು ಹೊರತು ಪಡಿಸಿ ಮುಂದೆ ಯಾವುದೇ ದುರುಪಯೋಗ ಪ್ರಕರಣಗಳು ಕಂಡು ಬಂದಿರುವುದಿಲ್ಲ. (ಹನ್ನೊಂದು ಗ್ರಾಮ ಪಂಚಾಯತಿಗಳು ಮಾತ್ರ) ಇದಕ್ಕೆ ಗ್ರಾಮ ಸ್ವರಾಜ್ ಯೋಜನೆಯಲ್ಲಿ ಅಳವಡಿಸ ಲಾಗಿರುವ ಹಣಕಾಸು ಲೆಕ್ಕಚಾರದ ಮೇಲ್ವಿಚಾರಣೆಯೆ ಕಾರಣವೆಂದು ಹೇಳಬಹುದು. ಇದರಿಂದ ಗ್ರಾಮ ಪಂಚಾಯತಿಗಳ ವ್ಯವಹಾರದಲ್ಲಿ ಹೆಚ್ಚಿನ ಪಾರದರ್ಶಕತೆ ಕಾಣಬಹುದಾಗಿದೆ. ❑

---

## 'ಗ್ರಾಮ ಸ್ವರಾಜ್' – ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆ

**ಗ್ರಾ** – ಗ್ರಾಮಗಳ ಅಭಿವೃದ್ಧಿಗಾಗಿ ಯೋಜಿಸಿರುವ

**ಮ** – ಮಂದಿಯೆಲ್ಲಾ ಸೇರಿ ಗ್ರಾಮ ಸಭೆ ನಡೆಸುವ

**ಸ್ವ** – ಸ್ವ ಪ್ರೇರಣೆಯಿಂದ ಹಳ್ಳಿಗಳ ಏಳಿಗೆಗಾಗಿ ಶ್ರಮಿಸುವ

**ರಾ** – ರಾಜ್ಯದ ಹಿಂದುಳಿದ ಗ್ರಾಮಗಳ ಒಳಿತಿಗಾಗಿರುವ

**ಜ್** – ಜನರಿಂದ, ಜನರಿಗಾಗಿ, ಜನರಿಗೋಸ್ಕರ ಜಾರಿಯಾಗುತ್ತಿರುವ ಯೋಜನೆಯೇ ನಮ್ಮ "ಗ್ರಾಮ ಸ್ವರಾಜ್ ಯೋಜನೆ"

* ವಿದ್ಯಾಶ್ರೀ. ಎಸ್. ಪ್ರವೀಣ್, ತಬಸುಂ ತಾಜ್, ಲಕ್ಷ್ಮೀ ಎನ್. ಕಾರ್ಯ ನಿರ್ವಾಹಕ ಸಹಾಯಕರು, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು.

ಕಂದಾಯ ಪಾವತಿಸಿ ಸೌಕರ್ಯ ಪಡೆಯಿರಿ.


# 'ಪಂಚತಂತ್ರ' – ಪಂಚಾಯತಿ ತಂತ್ರಾಂಶ

– ಭಾನುಪ್ರಕಾಶ್ ಮತ್ತು ನವೀನ್ ಕುಮಾರ್ *


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಮತ್ತು ಗ್ರಾಮ ಪಂಚಾಯತ್ ಮುಖಾಂತರ ಹಮ್ಮಿಕೊಳ್ಳಲಾಗುತ್ತಿದೆ. ಈ ಪಂಚಾಯತ್ ರಾಜ್ ಸಂಸ್ಥೆಗಳು ಒಂದೆ ತರಹದ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳುತ್ತವೆ. ಈ ಕಾರ್ಯಕ್ರಮಗಳು ಯೋಜನೆಯಲ್ಲಿ ನಡೆಯುವ ದಿನ ಪ್ರತಿ ಲೆಕ್ಕ ನಿರ್ವಹಣೆಯನ್ನು ಮತ್ತು ಗ್ರಾಮ ಪಂಚಾಯತ್ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ರಾಷ್ಟ್ರೀಯ ಮಾಹಿತಿ ಸಂಸ್ಥೆ ಇದರ ಸಹಯೋಗದೊಂದಿಗೆ 'ಪಂಚತಂತ್ರ' ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ. 2006 ರ ಆಯವ್ಯಯ ಮತ್ತು ಲೆಕ್ಕ ಕಾಯಿದೆ ಅನ್ವಯ ಜೋಡಿ ನಮೂನೆ ಲೆಕ್ಕ ಪದ್ದತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆ. ಈ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಉಡುಪಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಅಳವಡಿಸಲಾಯಿತು. ಇಲ್ಲಿ ದೊರೆತ ಅಭೂತ ಪೂರ್ವ ಯಶಸ್ಸಿನಿಂದ ಈ ತಂತ್ರಾಂಶವನ್ನು ಜಿಲ್ಲಾವಾರು ತರಬೇತಿ ಕಾರ್ಯಕ್ರಮವನ್ನು ವಿಶ್ವಬ್ಯಾಂಕ್ ನೆರವಿನ ಗ್ರಾಮ ಸ್ವರಾಜ್ ಯೋಜನೆಯ ಆರ್ಥಿಕ ಸಹಾಯದ ಮುಖಾಂತರ ನಡೆಸಲಾಗಿದೆ.

ದಿನ ಪ್ರತಿ ಲೆಕ್ಕ ನಿರ್ವಹಣೆಯನ್ನು ಮತ್ತು ಗ್ರಾಮ ಪಂಚಾಯತ್ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು 'ಪಂಚತಂತ್ರ' ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ.

**ಈ ತಂತ್ರಾಂಶದಲ್ಲಿ ಬರುವ ಮುಖ್ಯ ಅಂಶಗಳೆಂದರೆ :–**




**ಪಂಚತಂತ್ರ ತಂತ್ರಾಂಶದಿಂದ ಸಿಗುವ ಪ್ರಮುಖ ಉಪಯೋಗಗಳು :–**




* ಕಂಪ್ಯೂಟರ್ ಪ್ರೋಗ್ರಾಮರ್ ಆಫೀಸರ್, ಗ್ರಾಮ ಸ್ವರಾಜ್ ಯೋಜನೆ, ಕೇಂದ್ರ ಕಛೇರಿ, ಬೆಂಗಳೂರು.

ಹಳ್ಳಿಹಳ್ಳಿಗಳಲ್ಲಿ ಸ್ವಚ್ಛತೆಯ ಜ್ಯೋತಿ ಬೆಳಗಲಿ, ಸ್ವಚ್ಛ ಸುಂದರ ಸ್ವಾಭಿಮಾನದ ಬದುಕು ನಿಮ್ಮದಾಗಲಿ.

ಈ ತಂತ್ರಾಂಶದಿಂದ ಈ ಕೆಳಗಿನ ಮಾಹಿತಿಗಳನ್ನು ಪಡೆಯಬಹುದಾಗಿದೆ.

- 5628 ಗ್ರಾಮ ಪಂಚಾಯತಿ ಮಾಹಿತಿಗಳು
- 56,000+ಅಭಿವೃದ್ಧಿ ಕೆಲಸಗಳ ನಿರ್ವಹಣೆ
- 59,000+ಹಳ್ಳಿಗಳು/ ವಲಯಗಳ ಸಾಮಾನ್ಯ ಮಾಹಿತಿಗಳಾದ ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಜನಸಂಖ್ಯೆ ಮಾಹಿತಿ
- 1.12 ಲಕ್ಷ ಸದಸ್ಯರು/ಸಿಬ್ಬಂದಿ ಮಾಹಿತಿ
- 1.25 ಲಕ್ಷ ಫಲಾನುಭವಿಗಳ ಮಾಹಿತಿ
- 1.1 ಕೋಟಿ ಆಸ್ತಿ ತೆರಿಗೆ ವಸೂಲಾತಿ ಮಾಹಿತಿ
- ರೂ. 100 ಕೋಟಿ ಆಸ್ತಿ ತೆರಿಗೆ ನಿರ್ವಹಣೆ
- ರೂ. 2800 ಕೋಟಿ ಆಸ್ತಿ ತೆರಿಗೆ ಯೋಜನೆಗಳ ಹಣಕಾಸಿನ ನಿರ್ವಹಣೆ

## ಪಂಚಮಿತ್ರ

ಪಂಚತಂತ್ರ ತಂತ್ರಾಂಶದಲ್ಲಿ ಲಭ್ಯವಾಗುವ ಗ್ರಾಮ ಪಂಚಾಯತಿ ಮಾಹಿತಿಗಳನ್ನು ಸಾರ್ವಜನಿಕವಾಗಿ ವೀಕ್ಷಿಸಲು ಅನುಕೂಲವಾಗುವಂತೆ 'ಪಂಚಮಿತ್ರ' ವೆಂಬ ಅಂತರ್ಜಾಲ ತಾಣವನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಲ್ಲಿ ರಾಜ್ಯದ ಎಲ್ಲಾ 5628 ಗ್ರಾಮ ಪಂಚಾಯತಿವಾರು ಅಂತರ್ಜಾಲ ಸೌಲಭ್ಯ ಕಲ್ಪಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಗ್ರಾಮ ಪಂಚಾಯತಿ ಸದಸ್ಯರ ವಿವರಗಳು, ಗ್ರಾಮ ಪಂಚಾಯತಿ ಒದಗಿಸು ಸೇವೆಗಳು, ಗ್ರಾಮ ಪಂಚಾಯತಿ ಅನುಷ್ಠಾನ ಮಾಡುತ್ತಿರುವ ಯೋಜನೆಗಳು, ಪ್ರಗತಿ ಕಾಮಗಾರಿಗಳು, ವಿವಿಧ ಯೋಜನೆಗಳ ಫಲಾನುಭವಿಗಳ ವಿವರಗಳು, ಗ್ರಾಮ ಪಂಚಾಯತಿ ಸಾಮಾನ್ಯ ಮಾಹಿತಿ, ಬಿ.ಪಿ.ಎಲ್. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ವಿವರಗಳು ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ಸಿಬ್ಬಂಧಿ ವಿವರಗಳು, ಸಭಾನಡುವಳಿಕೆಗಳು, ಆಸ್ತಿತೆರಿಗೆಗಳು, ಪಂಚಾಯತ್ ಆಸ್ತಿಗಳು, ಹೊಣೆಗಾರಿಕೆಗಳು, ಬ್ಯಾಲೆನ್ಸ್ ಶೀಟ್, ಟೆಂಡರ್ ಮಾಹಿತಿಗಳನ್ನು ಪಂಚಮಿತ್ರ ಮುಖಾಂತರ ಪಡೆಯಬಹುದಾಗಿದೆ.

ಇದನ್ನು ಪಡೆಯುವ ವಿಧಾನವೆಂದರೆ :-


–> **ಅಂತರ್ಜಾಲ ತಾಣ : http:// panchamitra.kar.nic.in**


–> ಎಡ ಭಾಗದಲ್ಲಿ ದೊರೆಯುವ ರಾಜ್ಯದ ಚಿತ್ರಣದಲ್ಲಿ ಆಯ್ಕೆ ಮಾಡಿಕೊಳ್ಳುವುದು.

–> ಜಿಲ್ಲೆಯ ತಾಲ್ಲೂಕನ್ನು ಆಯ್ಕೆ ಮಾಡಿಕೊಳ್ಳುವುದು.

–> ಬಲ ಭಾಗದಲ್ಲಿ ದೊರೆಯುವ ಸಂಬಂಧ ಪಟ್ಟ ಗ್ರಾಮ ಪಂಚಾಯತಿ ಆಯ್ಕೆ ಮಾಡಿಕೊಂಡು ವಿವರಗಳನ್ನು ಪಡೆಯಬಹುದಾಗಿದೆ.

**ಪಂಚಮಿತ್ರ – ಗ್ರಾಮ ಪಂಚಾಂತಿ ಅಂತರ್ಜಾಲ ತಾಣ**






## ಗ್ರಾಮೀಣಾಭಿವೃದ್ಧಿ ಕಾಮಗಾರಿ ಉಸ್ತುವಾರಿ ತಂತ್ರಾಂಶ ಮತ್ತು ಪಂಚಾಯತ್ ರಾಜ್ (RDPR Works Monitor System)

ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ವತಿಯಿಂದ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಹೀಗೆ ಅನುಷ್ಠಾನಗೊಳಿಸಿದ/ಅನುಷ್ಠಾನಗೊಳಿಸಬೇಕಾಗಿರುವ ಕಾಮಗಾರಿಗಳ ಸಂಪೂರ್ಣ ಮಾಹಿತಿಯನ್ನು ಒಂದೆಡೆ ಪಡೆಯಲು ಅನುಕೂಲವಾಗುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ "RDPR Works Monitor System " ಎಂಬ ಹೆಸರಿನ ಗಣಕ ತಂತ್ರಾಂಶವನ್ನು ಈಗಾಗಲೇ ಸಿದ್ಧಪಡಿಸಲಾಗಿರುತ್ತದೆ. ತಂತ್ರಾಂಶದ ಬಳಕೆ ಬಗ್ಗೆ ತರಬೇತಿ ಕಾರ್ಯಗಾರವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್‌ನ ಕಿರಿಯ ಅಭಿಯಂತರರು, ಸಹಾಯಕ ಅಭಿಯಂತರರು ಇವರುಗಳಿಗೆ ಎಲ್ಲಾ ಜಿಲ್ಲೆಗಳಲ್ಲಿ ಪೂರ್ಣವಾಗಿದ್ದು ಗಣಕತಂತ್ರದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ದಾಖಲಿಸಲಾಗುತ್ತಿದೆ. ಈ ದಾಖಲಾತಿ ಪ್ರಕ್ರಿಯೆಯನ್ನು ಜನವರಿ 2011ನೇ ಮಾಹೆಯಿಂದ ಪ್ರಾರಂಭಿಸಲಾಗಿರುತ್ತದೆ. ಪ್ರಸ್ತುತ ಚಾಲ್ತಿ ಸಾಲಿನಲ್ಲಿ ಪ್ರಾರಂಭಿಸಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಮಾತ್ರ ಪಡೆಯಬಹುದಾಗಿರುವತ್ತದೆ.

ಇದರಲ್ಲಿ ಗುತ್ತಿಗೆದಾರರ ವಿವರ, ಕಾಮಗಾರಿಗಳ ವಿವರ, ಕಾಮಗಾರಿ ಅಂದಾಜು ಮೊತ್ತ ಆಡಳಿತಾತ್ಮಕ ಒಪ್ಪಿಗೆ, ತಾತ್ವಿಕ ಒಪ್ಪಿಗೆ, ಟೆಂಡರ್ ವಿವರ, ಕಾಮಗಾರಿ ಆರಂಭ, ಸ್ಥಳ ಪರವೀಕ್ಷಣ ವರದಿ, ಬದಲಾವಣೆಗೊಂಡ ಅಂದಾಜು (ಒಂದು ವೇಳೆ ಇದ್ದಲ್ಲಿ), ಸ್ಥಗಿತಗೊಂಡ ಕಾಮಗಾರಿಗಳ ಮುಂದುವರಿಕೆ ಮತ್ತು ಕಾಮಗಾರಿ ಮುಕ್ತಾಯದ ವಿವರಗಳನ್ನು ಇದರಿಂದ ಪಡೆಯಬಹುದಾಗಿದೆ. ಇದರಿಂದ ಕಾಮಗಾರಿ ಅನುಷ್ಠಾನದಲ್ಲಿ ಪಾರದರ್ಶಕತೆ ಹೊಂದಲು ಸಹಕಾರಿಯಾಗುತ್ತದೆ.

ಈ ತಂತ್ರಾಂಶದ ಮುಖಾಂತರ ಮಾಹಿತಿಯನ್ನು ಪಡೆಯುವ ವಿಧಾನವೆಂದರೆ


–> ಅಂರ್ತಜಾಲ ತಾಣ : http:// stg2.kar.nic.in/workstat/

–> ಎಡ ಭಾಗದಲ್ಲಿ ದೊರೆಯುವ ರಾಜ್ಯದ ಜಿಲ್ಲೆ ಆಯ್ಕೆ ಮಾಡಿಕೊಳ್ಳುವುದು.

–> ಜಿಲ್ಲೆಯ ತಾಲ್ಲೂಕುಗಳ ಮುಂಭಾಗದಲ್ಲಿ ದೊರೆಯುವ ಕಾಮಗಾರಿಗಳ ಸಂಖ್ಯೆಯನ್ನು ಆಯ್ಕೆ ಮಾಡಿಕೊಳ್ಳುವುದು.

–> ಕಾಮಗಾರಿಗಳ ಪಟ್ಟಿಯಲ್ಲಿ ಬರುವ ಸಂಬಂಧ ಪಟ್ಟ ಕಾಮಗಾರಿಯನ್ನು ಆಯ್ಕೆ ಮಾಡಿಕೊಳ್ಳುವುದು.

ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳಿ ಅಗತ್ಯ ಸೌಲಭ್ಯ ಪಡೆದುಕೊಳ್ಳಿ.



WorkSoft Statistics - Microsoft Internet Explorer


Government of Karnataka
Rural Development & Panchayat Raj Department
WorkSoft

District : UDUPI
Taluk Wise Works Statistics as on 18/02/2011

| Taluk Name | No of Works Completed | No of Ongoing Works | No of Works Stopped | No of Works Not Started | No of Works |
|---|---|---|---|---|---|
| KARKAL | 5 | 21 | | 266 | 292 |
| KUNDAPURA | | 1 | | 191 | 192 |
| UDUPI | | | | 114 | 114 |
| TOTAL | 5 | 22 | | 571 | 598 |

Back Exit

©2010 National Informatics Centre



WorkSoft Statistics - Microsoft Internet Explorer

Government of Karnataka
Rural Development & Panchayat Raj Department
WorkSoft

Taluk : UDUPI
No of Works Not Started List

| Work Name | Work Description | Work Order No | Work Order Date | Estimated Cost | Tender Amount |
|---|---|---|---|---|---|
| ಕುಂಜಬೈಲು ರಸ್ತೆ ನಿರ್ಮಾಣ | ಬೊಮ್ಮರಬೆಟ್ಟು ಹೈಸ್ಕೂಲಿನಿಂದ ಕುಂಜಬೈಲು ರಸ್ತೆ ನಿರ್ಮಾಣ | | | 1200000 | |
| ಬಜೆ ಪಾವುಜೆ ರಸ್ತೆ ನಿರ್ಮಾಣ | ಬಜೆ ಮುಖ್ಯ ರಸ್ತೆಯಿಂದ ಗೋ ಆಸ್ಪತ್ರೆಮೂಲಕ ಪಾವುಜೆ ರಸ್ತೆ ನಿರ್ಮಾಣ | | | 1440000 | |
| ಅಂಗಡಿ ಕೋಣೆ ದುರಸ್ತಿ | ಜಾನುವಾರುಕಟ್ಟೆ ಪಂಚಾಯತ್ ಅಂಗಡಿಕೋಣೆ ದುರಸ್ತಿ | | | 10000 | |
| ಪೈಪ್ ವಿಸ್ತರಣೆ | ಬಿಲ್ಲಾಡಿ ಹಾರಾಡಿ ನಾಗೀ ಬಾಯಿ ಇವರ ಮನೆಯ ವರೆಗೆ ಪೈಪ್ ಲೈನ್ ವಿಸ್ತರಣೆ | | | 20000 | |
| ಹ್ಯೂಮ್ ಪೈಪ್ ಅಳವಡಿಸುವುದು | ಬಿಲ್ಲಾಡಿ ಮಣಿಕಲ್ಲು ರಾಜೀವ ಶೆಟ್ರ ಮನೆಹತ್ತಿರ ಬುಡ್ಡು ಮರಕಾಲ್ತಿ ಮನೆ ಹತ್ತಿರ ಹ್ಯೂಮ್ ಪೈಪ್ ಅಳವಡಿಸುವುದು | | | 10000 | |
| ಹ್ಯೂಮ್ ಪೈಪ್ ಅಳವಡಿಸುವುದು | ಬಿಲ್ಲಾಡಿ ಮಣಿಕಲ್ಲು ರಾಜೀವ ಶೆಟ್ರ ಮನೆ ಹತ್ತಿರ ಮತ್ತು ಬುಡ್ಡು ಮರಕಾಲ್ತಿ ಮನೆ ಹತ್ತಿರ ಹ್ಯೂಮ್ ಪೈಪ್ ಅಳವಡಿಸುವುದು | | | 10000 | |
| ಮೀನು ಮಾರುಕಟ್ಟೆ ರಚನೆ | ಶಿರಿಯಾರ ಎಂಬಲ್ಲಿ ಮೀನು ಮಾರುಕಟ್ಟೆ ಕಟ್ಟಡ ರಚನೆ | | | 59000 | |
| ಅಂಗಡಿ ಕೋಣೆ ರಿಪೇರಿ | ಶಿರಿಯಾರ ಅಂಗಡಿ ಕೋಣೆ ರಿಪೇರಿ | | | 15000 | |
| ಅಂಗಡಿಕೋಣೆ ರಚನೆ | ವಂಡಾರು ಮಾವಿನಕಟ್ಟೆ ಅಂಗಡಿಕೋಣೆ ರಚನೆ | | | 210000 | |
| ಕಾಲು ಸಂಕ ರಚನೆ | ಹೆಗ್ಗುಂಜೆ ಗುಟ್ಟಿಮನೆ ಸುಧಾಕರ ಶೆಟ್ಟಿ ಮನೆಹತ್ತಿರ ಕಾಲುಸಂಕ ರಚನೆ | | | 20000 | |

ಪರಿಸರ ಉಳಿಸಿ, ಜೀವ ಸಂಕುಲ ಬೆಳೆಸಿ, ನೆಮ್ಮದಿ ಜೀವನ ನಡೆಸಿ.



# ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ನಿರ್ವಹಿಸಿದ ತರಬೇತಿಗಳ ವಿವರ

– ಶ್ರೀಮತಿ ಎಂ.ಸಿ. ಶೈಲಜ *

ಕರ್ನಾಟಕದಲ್ಲಿ 2005–06ರಿಂದ ವಿಶ್ವ ಬ್ಯಾಂಕ್ ನೆರವಿನಿಂದ ಗ್ರಾಮ ಸ್ವರಾಜ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಇದು ಕೇವಲ ಒಂದು ಯೋಜನೆಯಲ್ಲ. ಇದೊಂದು ಆಶಯ. ಕರ್ನಾಟಕ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಪಂಚಾಯತಿರಾಜ್ ವ್ಯವಸ್ಥೆಯ ಸಬಲೀಕರಣದ ಜೊತೆಗೆ ಡಾ|| ಡಿ.ಎಂ. ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನ ಕುರಿತ ಅಧ್ಯಯನ ಸಮಿತಿಯು ಗುರುತಿಸಿದ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವ ಗುರಿಯನ್ನು 'ಗ್ರಾಮ ಸ್ವರಾಜ್' ಹೊಂದಿದೆ. ಪಂಚಾಯತಿ ರಾಜ್ ವ್ಯವಸ್ಥೆಯ ಸಬಲೀಕರಣವಾಗಬೇಕಾದರೆ ಸರ್ಕಾರ ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ವಿಶೇಷವಾಗಿ ಹಮ್ಮಿಕೊಳ್ಳಬೇಕಿದೆ. ಗ್ರಾಮ ಸ್ವರಾಜ್ ಯೋಜನೆಗೆ ಸಂಬಂಧಿಸಿದಂತೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ತರಬೇತಿ ಆಯೋಜನೆಯ ಜವಾಬ್ದಾರಿಯನ್ನು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸರ್ಕಾರ ವಹಿಸಿದ್ದು, ಸಂಸ್ಥೆಯು ಹಾಲಿ ಲಭ್ಯವಿದ್ದ ಸೌಲಭ್ಯವನ್ನು ಬಳಸಿಕೊಂಡು ಕ್ಷೇತ್ರ ಮಟ್ಟದಲ್ಲಿ ಹಲವು ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಈ ರೀತಿ ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯು ಆಯೋಜಿಸುವಾಗ ಎರಡು ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ ತೊಡಗಿಕೊಂಡಿರುವ ವಿವಿಧ ಇಲಾಖೆಗಳ ಸಿಬ್ಬಂದಿ ಹಾಗು ಜನಸಮುದಾಯದ ಪ್ರತಿನಿಧಿಗಳಿಗೆ ವಿಶೇಷ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಕಾರ್ಯಗೊತಗೊಳಿಸಲಾಗಿದೆ. ಎರಡನೇಯದಾಗಿ ಪಂಚಾಯತ್‌ರಾಜ್ ಸಂಸ್ಥೆಗಳ ಸಾಮರ್ಥ್ಯ ಅಭಿವೃದ್ಧಿಗೆ (Capacity Building) ಸಂಬಂಧಿಸಿದ ತರಬೇತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳಲಾಗಿದೆ.

> ಪಂಚಾಯತ್‌ರಾಜ್ ಸಂಸ್ಥೆಗಳ ಸಾಮರ್ಥ್ಯ ಅಭಿವೃದ್ಧಿಗೆ ಸಂಬಂಧಿಸಿದ ತರಬೇತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳಲಾಗಿದೆ.

ಸಾಮರ್ಥ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ತರಬೇತಿಗಳನ್ನು ಆಯೋಜಿಸುವಾಗ ತರಬೇತಿಯ ಉಪಯುಕ್ತತೆಯನ್ನು ಹೆಚ್ಚಿಸಲು ತರಬೇತಿಗೆ ಪೂರಕವಾಗಿ ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿದೆ. ಅಂದರೆ, ತರಬೇತಿ ಪಡೆಯುವ ಶಿಬಿರಾರ್ಥಿಗಳ ತರಬೇತಿ ಅವಶ್ಯಕತೆಗಳ ವಿಶ್ಲೇಷಣೆ (Training Need Analysis) ನಡೆಸುವುದರಿಂದ ಆರಂಭಿಸಿ ತರಬೇತಿ ಆಯೋಜನೆವರೆಗೆ ಈ ಕೆಳಕಂಡ ಹಂತಗಳನ್ನು ಅನುಸರಿಸಲಾಗುತ್ತಿದೆ.

1. ತರಬೇತಿ ವಿನ್ಯಾಸ ಕಾರ್ಯಾಗಾರ
2. ತರಬೇತಿ ಸಾಮಾಗ್ರಿ ಅಭಿವೃದ್ಧಿ ಕಾರ್ಯಾಗಾರ
3. ಪ್ರಾಯೋಗಿಕ ತರಬೇತಿ
4. ಮುಖ್ಯ ತರಬೇತಿದಾರರ ತರಬೇತಿ
5. ತರಬೇತಿದಾರರ ತರಬೇತಿ
6. ತಾಲ್ಲೂಕುಗಳಲ್ಲಿ ತರಬೇತಿ ಆಯೋಜನೆ

ಮೇಲ್ಕಂಡ ಹಂತಗಳನ್ನು ಅನುಸರಿಸುವ ಮೂಲಕ ತರಬೇತಿಯನ್ನು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಲು ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಶಿಬಿರಾರ್ಥಿಗಳ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ಈ ಪ್ರಕ್ರಿಯೆ ಹೆಚ್ಚಿನ ನೆರವು ನೀಡುತ್ತದೆ. ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಶಿಬಿರಾರ್ಥಿಗಳನ್ನು ಒಳಗೊಂಡಂತೆ ನಿರ್ವಹಿಸಿದ ಎಲ್ಲಾ ತರಬೇತಿಗಳಲ್ಲಿ ಈ ಮೇಲ್ಕಂಡ ಪ್ರಕ್ರಿಯೆಯನ್ನು ಸಂಸ್ಥೆಯು ಅಳವಡಿಸಿಕೊಂಡಿದೆ.

* ಬೋಧಕರು, ಅ.ನ.ಸಾ.ರಾ.ಗ್ರಾ.. ಸಂಸ್ಥೆ, ಮೈಸೂರು.

ಶಿಬಿರಾರ್ಥಿಗಳಿಗೆ ತರಬೇತಿಯನ್ನು ಆಯೋಜಿಸುವಾಗ ಎರಡು ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಶಿಬಿರಾರ್ಥಿಗಳ ಸಂಖ್ಯೆ ಕಡಿಮೆಯಿದ್ದಲ್ಲಿ 'ಮುಖಾಮುಖಿ' ತರಬೇತಿಯನ್ನು ನಡೆಸಲಾಗುತ್ತದೆ. ತರಬೇತಿ ಪಡೆಯುವ ಶಿಬಿರಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಏಕಕಾಲದಲ್ಲಿ ತರಬೇತಿಯನ್ನು ಆಯೋಜಿಸಿಸಬೇಕಾದ ಸಂದರ್ಭದಲ್ಲಿ 'ಉಪಗ್ರಹ ಆಧರಿತ ವ್ಯವಸ್ಥೆ'ಯನ್ನು ಬಳಸಿಕೊಂಡು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಉಪಗ್ರಹ ಆಧರಿತ ವ್ಯವಸ್ಥೆಯು ಸಹ ಮುಖಾಮುಖಿ ತರಬೇತಿಯಾಗಿದ್ದು, ಸಂಸ್ಥೆಯೊಂದಿಗೆ ಕೆಲಸ ನಿರ್ವಹಿಸುತ್ತಿರುವ ಅಂದಾಜು 350–400 ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ. ಶಿಬಿರಾರ್ಥಿಗಳ ಸಂದೇಹಗಳಿಗೆ ತಜ್ಞರಿಂದ ಸ್ಪಷ್ಟೀಕರಣ ನೀಡಲು ಉಪಗ್ರಹ ಆಧರಿತ ವ್ಯವಸ್ಥೆಯನ್ನು ಪೂರಕವಾಗಿ (Supportive) ಬಳಸಿಕೊಳ್ಳಲಾಗುತ್ತಿದೆ.



ತರಬೇತಿಯಲ್ಲಿ ಭಾಗವಹಿಸಿರುವ ವಿಶ್ವಬ್ಯಾಂಕ್ ಪ್ರತಿನಿಧಿ

ಈ ನಿಟ್ಟಿನಲ್ಲಿ ಸಂಸ್ಥೆಯಲ್ಲಿ ಕೈಗೊಂಡ ಎರಡು ರೀತಿಯ ತರಬೇತಿ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

### 1. ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ ಕ್ಷೇತ್ರ ಸಿಬ್ಬಂದಿ ಹಾಗು ಸಮುದಾಯ ಪ್ರತಿನಿಧಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ

ಡಾ|| ಡಿ.ಎಂ. ನಂಜುಂಡಪ್ಪರವರ ವರದಿಯಲ್ಲಿ ಗುರುತಿಸಿರುವ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಲ್ಪಟ್ಟ 15 ಜಿಲ್ಲೆಗಳ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳ ಕ್ಷೇತ್ರ ಸಿಬ್ಬಂದಿ ಹಾಗು ಸಮುದಾಯದ ಪ್ರತಿನಿಧಿಗಳಿಗೆ ವಿಶೇಷವಾಗಿ ನಡೆಸಿರುವ ತರಬೇತಿ ವಿವರ ಈ ಕೆಳಗಿನಂತಿದೆ.

### ಸ್ವ ಸಹಾಯ ಗುಂಪುಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ:

ಗ್ರಾಮೀಣಾಭಿವೃದ್ಧಿಯಲ್ಲಿ ಸಮುದಾಯ ಸಂಘಟನೆಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅನುವಾಗುವಂತೆ ಹಾಗು ಗ್ರಾಮ ಪಂಚಾಯತಿಯ ಚಟುವಟಿಕೆಗಳಲ್ಲಿ ಸಮುದಾಯದ ಪ್ರತಿನಿಧಿಯಾಗಿ ಭಾಗವಹಿಸಬೇಕೆನ್ನುವ ದೃಷ್ಟಿಯಿಂದ ಸ್ವ ಸಹಾಯ ಗುಂಪುಗಳ ಪ್ರತಿನಿಧಿಗಳಿಗೆ ತರಬೇತಿ ನೀಡುವ ನಿರ್ಧಾರ ಕೈಗೊಳ್ಳಲಾಯಿತು. ಇದರ ಭಾಗವಾಗಿ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ರಚಿಸಿರುವ 25,973 ಸ್ತ್ರೀ ಶಕ್ತಿ ಗುಂಪುಗಳ ಪ್ರತಿನಿಧಿಗಳಿಗೆ ಎರಡು ದಿನಗಳ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿತ್ತು. ಸ್ತ್ರೀ ಶಕ್ತಿ ಗುಂಪುಗಳು ಕೇವಲ ಆದಾಯೋತ್ಪನ್ನ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೇ ಸಮುದಾಯದ ಧ್ವನಿಯಾಗಿ ಸ್ಥಳೀಯ ಸರ್ಕಾರದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನುವಾಗುವಂತೆ ಸಜ್ಜುಗೊಳಿಸುವ ಪ್ರಕ್ರಿಯೆಯನ್ನು ಈ ತರಬೇತಿಯ ಮೂಲಕ ನೀಡುವ ಪ್ರಯತ್ನ ಮಾಡಲಾಯಿತು. ಸ್ವ ಸಹಾಯ ಗುಂಪಿನ ಚಟುವಟಿಕೆಗಳನ್ನು ನಿರ್ವಹಿಸಲು ಪೂರಕವಾಗಿ ಅವಶ್ಯವಿರುವ ಮಾಹಿತಿಯೊಂದಿಗೆ ಸ್ಥಳೀಯ ಸರ್ಕಾರದ ರಚನೆ, ವಾರ್ಡ್ ಹಾಗು ಗ್ರಾಮ ಸಭೆಯ ಮಹತ್ವ, ವಿಕೇಂದ್ರಿಕರಣ ವ್ಯವಸ್ಥೆಯು ಪರಿಣಾಮಕಾರಿಯಾಗಿ ಅನುಷ್ಠಾನದಲ್ಲಿ ಸ್ವ ಸಹಾಯ ಗುಂಪುಗಳ ಪಾತ್ರ ಇತ್ಯಾದಿ ವಿಷಯಗಳ ಕುರಿತು ವಿವರವಾದ ಮಾಹಿತಿಯನ್ನು ಈ ತರಬೇತಿಯ ಮೂಲಕ ನೀಡಲಾಯಿತು.

### ಪರಿಸರ ನಿರ್ವಹಣೆ ಕುರಿತಂತೆ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಹಾಗು ಸಿಬ್ಬಂದಿಯವರಿಗೆ ಉಪಗ್ರಹ ಆಧರಿತ ತರಬೇತಿ ಕಾರ್ಯಕ್ರಮ:

ಇತ್ತೀಚಿನ ವರ್ಷಗಳಲ್ಲಿ ಪರಿಸರಕ್ಕೆ ಆಗುತ್ತಿರುವ ಹಾನಿ ಮತ್ತು ಅದರ ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಬೇಕಾದ ಅಗತ್ಯದ ಅರಿವು ಎಲ್ಲರಲ್ಲೂ ಮೂಡಲೇಬೇಕಾಗಿದೆ. ಈ ನಿಟ್ಟಿನಲ್ಲಿ ವಿಶ್ವ ಬ್ಯಾಂಕ್ ಕೂಡ ಗ್ರಾಮ ಸ್ವರಾಜ್ ಯೋಜನೆಯಡಿ ಈ ವಿಷಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದು, ಗ್ರಾಮ ಪಂಚಾಯತಿಗಳಿಗೆ ಪರಿಸರ ಚೌಕಟ್ಟು ನಿರ್ವಹಣಾ (Environment Framework) ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಲು ಸೂಚಿಸಿದೆ. ಹೀಗಾಗಿ ಗ್ರಾಮ ಸ್ವರಾಜ್ ಯೋಜನೆ

ಅನುಷ್ಠಾನಗೊಳಿಸುತ್ತಿರುವ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳಿಗೆ ಪರಿಸರ ರಕ್ಷಣೆಯ ಮಹತ್ವ, ಪರಿಸರ ಸ್ನೇಹಿ ಮಾನವ ಅಭಿವೃದ್ಧಿಗೆ ಕಲ್ಪಿಸಬೇಕಾದ ಪೂರಕ ವಾತಾವರಣ ಹಾಗು ಪರಿಸರ ಚೌಕಟ್ಟು ನಿರ್ವಹಣಾ ವ್ಯವಸ್ಥೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳ ಕುರಿತಾಗಿ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಶೇ. 60–65ರಷ್ಟು ಶಿಬಿರಾರ್ಥಿಗಳು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ.

### ಗ್ರಾಮ ಸ್ವರಾಜ್ ಯೋಜನೆಯ ಕುರಿತು ತರಬೇತಿ:

ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳ್ಳುತ್ತಿರುವ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಕಂಪ್ಯೂಟರ್ ಆಪರೇಟರ್, ಕಿರಿಯ ಅಭಿಯಂತರರು, ಗ್ರಾಮ ಸ್ವರಾಜ್ ಯೋಜನೆಯ ಸಮಾಲೋಚಕರುಗಳು, ಪಂಚಾಯತಿ ವಿಸ್ತರಣಾಧಿಕಾರಿಗಳು ಹಾಗು ತಾಲ್ಲೂಕು ಯೋಜನಾ ಅಧಿಕಾರಿಗಳು ಹೀಗೆ ಒಟ್ಟು 5125 ಶಿಬಿರಾರ್ಥಿಗಳಿಗೆ ಗ್ರಾಮ ಸ್ವರಾಜ್ ಯೋಜನೆಯ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಡಲು ಎರಡು ದಿನಗಳ ಉಪಗ್ರಹ ಆಧರಿತ ತರಬೇತಿ ಕಾರ್ಯಕ್ರಮವನ್ನು 6 ಪ್ರಸರಣಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಗ್ರಾಮ ಸ್ವರಾಜ್ ಯೋಜನೆಯ



ಬೀದರ್ ಜಿಲ್ಲೆಯಲ್ಲಿ ನಡೆದ ಪರಿಸರ ಚೌಕಟ್ಟು ನಿರ್ವಹಣಾ ವ್ಯವಸ್ಥೆ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿಶ್ವಬ್ಯಾಂಕ್ ಪ್ರತಿನಿಧಿ ಡಾ॥ ಸದಾಫಲ್ ಪರಿಮಳ್

ಗುರಿ, ಕಾರ್ಯತಂತ್ರ, ಅನುಷ್ಠಾನದ ಸಾಧಕ ಬಾಧಕಗಳು, ಜನ ಸಹಭಾಗಿತ್ವದ ಮೂಲಕ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆ, ವಾರ್ಡ್/ ಗ್ರಾಮ ಸಭೆಯ ಮಹತ್ವ, ಜಮಾಬಂದಿಯ ಆಯೋಜನೆ, ಸಂಪನ್ಮೂಲ ಕ್ರೋಢೀಕರಣ, ಜೋಡಿ ನಮೂದು ಲೆಕ್ಕಪದ್ಧತಿ ನಿರ್ವಹಣೆ ಇವೇ ಮೊದಲಾದ ವಿಷಯಗಳನ್ನು ಅಳವಡಿಸಿ ಶಿಬಿರಾರ್ಥಿಗಳಿಗೆ ಮಾಹಿತಿಯನ್ನು ನೀಡಲಾಗಿದೆ.

## ತಾಲ್ಲೂಕು ಸಂಪನ್ಮೂಲ ಕೇಂದ್ರದ ಪರಿಣಿತರ (Taluk Resource Centre Professionals) ತರಬೇತಿ

ಗ್ರಾಮ ಸ್ವರಾಜ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿನ್ನಲೆಯಲ್ಲಿ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಸಮುದಾಯದ ಪಾಲ್ಗೊಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಾಮಾಜಿಕ ಸಂಘಟಕರು, ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಲೆಕ್ಕಪತ್ರ ಪರಿಣಿತರು ಹಾಗು ಮಾಹಿತಿಯನ್ನು ಕಂಪ್ಯೂಟರೀಕರಣಗೊಳಿಸುವಲ್ಲಿ ಕಂಪ್ಯೂಟರ್ ಪರಿಣಿತ ಸಿಬ್ಬಂದಿಯವರು ತಾಲ್ಲೂಕು ಪಂಚಾಯತಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ನೆರವಾಗುತ್ತಿದ್ದಾರೆ. ಈ ಪರಿಣಿತರ ಹುದ್ದೆಯ ಕಾರ್ಯ ನಿರ್ವಹಣೆಗೆ ಪೂರಕವಾಗಿ ಸಂಸ್ಥೆಯ ವತಿಯಿಂದ ನಾಲ್ಕು ದಿನಗಳ ತರಬೇತಿಯನ್ನು ಆಯೋಜಿಸಲಾಗಿತ್ತು.

### (ಎ) ತಾಲ್ಲೂಕು ಸಂಪನ್ಮೂಲ ಕೇಂದ್ರದ ಪರಿಣಿತರ (ಸಾಮಾಜಿಕ ಸಂಘಟಕರು) ತರಬೇತಿ:

ಒಟ್ಟು 39 ಪರಿಣಿತರ (ಸಾಮಾಜಿಕ ಸಂಘಟಕರು) ಪೈಕಿ 33 ಜನರಿಗೆ 4 ದಿನಗಳ ಮುಖಾಮುಖಿ ತರಬೇತಿಯನ್ನು ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಯಿತು. ಈ ಪರಿಣಿತರು ಸಮುದಾಯ, ಗ್ರಾಮ ಪಂಚಾಯತಿ ಹಾಗು ತಾಲ್ಲೂಕು ಪಂಚಾಯತಿಯ ನಡುವೆ ಸೇತುವೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮ ಪಂಚಾಯತಿಯಿಂದ ಒದಗಿಸಲ್ಪಡುವ ಸೇವೆಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕಾದರೆ ಸಮುದಾಯದ ಕ್ರಿಯಾತ್ಮಕ ಭಾಗವಹಿಸುವಿಕೆ ಅಗತ್ಯ. ಈ ನಿಟ್ಟಿನಲ್ಲಿ ಸಮುದಾಯಕ್ಕೆ ಅರಿವು ಮೂಡಿಸುವ ಜವಾಬ್ದಾರಿಯನ್ನು ಈ ಪರಿಣಿತರಿಗೆ ವಹಿಸಲಾಗಿದ್ದು, ಇದಕ್ಕೆ ಪೂರಕವಾದ ವಿಷಯಗಳನ್ನು ತರಬೇತಿ ಕಾರ್ಯಕ್ರಮದಲ್ಲಿ ಅಳವಡಿಸಲಾಗಿತ್ತು. ಗ್ರಾಮ ಪಂಚಾಯತಿ ಪ್ರಕಾರ್ಯಗಳು, ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳು, ಸ್ಥಾಯೀ ಸಮಿತಿಗಳು ಮತ್ತು ಉಪ ಸಮಿತಿಗಳ ರಚನೆ ಮತ್ತು ಪ್ರಕಾರ್ಯ, ವಾರ್ಡ್/ ಗ್ರಾಮ ಸಭೆ, ಜಮಾಬಂದಿ, ಸಂಪನ್ಮೂಲ ಕ್ರೋಢೀಕರಣ, ಜನಯೋಜನೆ, ಪರಿಸರ ನಿರ್ವಹಣೆ ಚೌಕಟ್ಟು, ಗ್ರಾಮ ಸ್ವರಾಜ್ ಯೋಜನೆಯ ಮಹತ್ವ, ಸಾರ್ವಜನಿಕರಿಗೆ ಒದಗಿಸಬೇಕಾದ ಮೂಲಭೂತ ಸೇವೆಗಳು ಇತ್ಯಾದಿ ವಿಷಯಗಳನ್ನು ಕುರಿತು ತರಬೇತಿಯಲ್ಲಿ ಮಾಹಿತಿ ನೀಡಲಾಗಿದೆ. ಜನಯೋಜನೆಯ ವಿಷಯವನ್ನು ಮನವರಿಕೆ ಮಾಡುವ ಸಲುವಾಗಿ ಒಂದು ದಿನದ ಕ್ಷೇತ್ರ ಭೇಟಿಯ ಪ್ರಾಯೋಗಿಕ ಚಟುವಟಿಕೆಯನ್ನು ಈ ತರಬೇತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

### (ಬಿ) ತಾಲ್ಲೂಕು ಸಂಪನ್ಮೂಲ ಕೇಂದ್ರದ ಪರಿಣಿತರ (ಕಂಪ್ಯೂಟರ್) ತರಬೇತಿ:

24 ತಾಲ್ಲೂಕು ಸಂಪನ್ಮೂಲ ಕೇಂದ್ರ ಪರಿಣಿತರಿಗೆ (ಕಂಪ್ಯೂಟರ್) 3 ದಿನಗಳ ತರಬೇತಿಯನ್ನು ಕಾರ್ಯಕ್ರಮವನ್ನು ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಪರಿಣಿತರು ಗ್ರಾಮ ಸ್ವರಾಜ್ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು ಗಣಕೀಕರಿಸುತ್ತಿದ್ದು, ಇದಕ್ಕೆ ಪೂರಕವಾದ ಪ್ರಾಯೋಗಿಕ ತರಬೇತಿಯನ್ನು ಸಂಸ್ಥೆಯ ಕಂಪ್ಯೂಟರ್ ಕೇಂದ್ರದ ಮೂಲಕ ನೀಡಲಾಯಿತು. ಇದರೊಂದಿಗೆ ಗ್ರಾಮ ಸ್ವರಾಜ್ ಯೋಜನೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕೈಗೊಳ್ಳುವ ವಿವಿಧ ಚಟುವಟಿಕೆಗಳಾದ ಸಂಪನ್ಮೂಲ ಕ್ರೋಢೀಕರಣ, ಜನಯೋಜನೆ, ವಾರ್ಡ್/ ಗ್ರಾಮ ಸಭೆಯ ಮಹತ್ವ, ಜೋಡಿ ನಮೂದು ಲೆಕ್ಕ ಪದ್ಧತಿ, ಗ್ರಾಮ ಸ್ವರಾಜ್ ಚೆಕ್ ಲಿಸ್ಟ್ ಇತ್ಯಾದಿ ವಿಷಯಗಳ ಕುರಿತು ಸಹ ಮಾಹಿತಿ ನೀಡಲಾಯಿತು.

### (ಸಿ) ತಾಲ್ಲೂಕು ಸಂಪನ್ಮೂಲ ಕೇಂದ್ರದ ಪರಿಣಿತರ (ಲೆಕ್ಕಪತ್ರ) ತರಬೇತಿ:

30 ತಾಲ್ಲೂಕು ಸಂಪನ್ಮೂಲ ಕೇಂದ್ರದ ಪರಿಣಿತರ (ಲೆಕ್ಕಪತ್ರ) ತರಬೇತಿಯನ್ನು ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯ ಅವಧಿಯು ಸಹ 3 ದಿನಗಳಾಗಿದ್ದು ಈ ಅವಧಿಯಲ್ಲಿ ಗ್ರಾಮ ಸ್ವರಾಜ್ ಯೋಜನೆಯಡಿ ನಿರ್ವಹಿಸಬೇಕಾದ ಲೆಕ್ಕಪತ್ರಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಮುಖ್ಯವಾಗಿ ಸಂಪನ್ಮೂಲ ಕ್ರೋಢೀಕರಣ, ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರ ನಿಯಮಗಳು 2006, ಜೋಡಿ ನಮೂದು ಲೆಕ್ಕ ಪದ್ಧತಿ, ಲೆಕ್ಕಪತ್ರ ಪರಿಣಿತರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಹೆಚ್ಚಿನ ಮಾಹಿತಿ ನೀಡಲಾಯಿತು. ಇದರೊಂದಿಗೆ ಇತರ ಸಾಮಾನ್ಯ ವಿಷಯಗಳಾದ ವಾರ್ಡ್/ ಗ್ರಾಮ ಸಭೆ, ಪಂಚಾಯತಿ ಪ್ರಕಾರ್ಯಗಳು, ಗ್ರಾಮ ಸ್ವರಾಜ್ ಯೋಜನೆಯ ಪರಿಕಲ್ಪನೆ ಇತ್ಯಾದಿ ವಿಷಯಗಳಿಗೂ ಸಹ ಒತ್ತು ನೀಡಲಾಗಿತ್ತು.

## ಗ್ರಾಮ ಸ್ವರಾಜ್ ಸಂಯೋಜಕರಿಗೆ ತರಬೇತಿ

ದೇವದುರ್ಗ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬರಂತೆ ಗ್ರಾಮ ಸ್ವರಾಜ್ ಸಂಯೋಜಕರು ಇದ್ದು, ಇವರು ಗ್ರಾಮ ಪಂಚಾಯತಿ ವತಿಯಿಂದ ಕೈಗೊಳ್ಳುವ ಚಟುವಟಿಕೆಗಳಿಗೆ ನೆರವು ನೀಡುವುದರೊಂದಿಗೆ ವಿವಿಧ ಸೇವೆಗಳನ್ನು ಪರಿಣಾಮಕಾರಿಯಾಗಿ ಸಮುದಾಯಕ್ಕೆ ತಲುಪಿಸುವ ನಿಟ್ಟಿನಲ್ಲಿ ಗಮನಹರಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮೊದಲ ಹಂತದಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ

ಗ್ರಾಮ ಪಂಚಾಯತಿ ಲೆಕ್ಕ, ಅದನ್ನು ನಾವು ತಿಳಿಯಬೇಕು ಚೊಕ್ಕ, ಅದನ್ನು ಬರೆಯಬೇಕು ಪಕ್ಕ.

ತರಬೇತಿಯನ್ನು ನಡೆಸಲಾಯಿತು. ಎರಡನೇ ಹಂತದಲ್ಲಿ ಬಾಗೇಪಲ್ಲಿಯ 26 ಗ್ರಾಮ ಸ್ವರಾಜ್ ಸಂಯೋಜಕರಿಗೆ 3 ದಿನಗಳ ತರಬೇತಿ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ ಯೋಜನೆಯ ಆಶಯ ಮತ್ತು ಗುರಿ ಹಾಗು ಅನುಸರಿಸಬೇಕಾದ ಕಾರ್ಯತಂತ್ರ, ಗ್ರಾಮ ಪಂಚಾಯತಿ ಸಭೆಗಳು, ಸ್ಥಾಯೀ ಸಮಿತಿಗಳು ಮತ್ತು ಉಪ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳು, ಕ್ರಿಯಾ ಯೋಜನೆ ತಯಾರಿಕೆ, ಸಂಪನ್ಮೂಲ ಕ್ರೋಢೀಕರಣ, ಜನ ಯೋಜನೆ, ಲೆಕ್ಕಪತ್ರ ನಿಯಮಗಳು ಇತ್ಯಾದಿ ವಿಷಯಗಳ ಕುರಿತು ಮನವರಿಕೆ ಮಾಡಿಕೊಡಲಾಯಿತು.

## ಪಂಚಾಯತ್ ರಾಜ್ಯ ಸಂಸ್ಥೆಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳು

### ಅಂಗನವಾಡಿ ಕಾರ್ಯಕರ್ತೆಯರು ಹಾಗು ಆರೋಗ್ಯ ಸಹಾಯಕರಿಗೆ ಸಮುದಾಯ ಆರೋಗ್ಯ ನಿರ್ವಹಣೆಯ ಕುರಿತು 2 ದಿನಗಳ ಉಪಗ್ರಹ ಪ್ರಸರಣದ ಮೂಲಕ ತರಬೇತಿ

ಗ್ರಾಮ ಪಂಚಾಯತಿ ಮಟ್ಟದಲ್ಲಿ ಆಡಳಿತ ಸುಧಾರಣೆ ಮಾಡುವ ಮೂಲಕ ಜನರಿಗೆ ಅವಶ್ಯಕ ಸೇವೆಗಳು ಸರಿಯಾಗಿ ಲಭ್ಯವಾಗುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಇಲಾಖಾ ಕ್ಷೇತ್ರ ಸಿಬ್ಬಂದಿಗಳ ಮನೋಭಾವದಲ್ಲಿ ಗುಣಾತ್ಮಕ ಬದಲಾವಣೆ ತರುವ ಸಲುವಾಗಿ ರಾಜ್ಯದ ಎಲ್ಲಾ 176 ತಾಲ್ಲೂಕುಗಳ ಅಂದಾಜು 67,000 ಅಂಗನವಾಡಿ ಕಾರ್ಯಕರ್ತೆಯರು ಹಾಗು ಆರೋಗ್ಯ ಸಹಾಯಕರಿಗೆ 'ಸಮುದಾಯ ಆರೋಗ್ಯ ನಿರ್ವಹಣೆಯ' ಕುರಿತು ಉಪಗ್ರಹ ಆಧರಿತ ತರಬೇತಿಯನ್ನು ಸಂಸ್ಥೆಯವತಿಯಿಂದ ಆಯೋಜಿಸಲಾಗಿದೆ. ಈ ತರಬೇತಿಯನ್ನು ಉಪಗ್ರಹ ಪ್ರಸರಣದ ಮೂಲಕ ಹಮ್ಮಿಕೊಳ್ಳಲಾಗಿದ್ದು, ಒಟ್ಟು 532 ಸಂಪನ್ಮೂಲ ವ್ಯಕ್ತಿಗಳು 22 ಪ್ರಸರಣಗಳ ಮೂಲಕ ತರಬೇತಿಯನ್ನು ನಡೆಸಿರುತ್ತಾರೆ. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ, ಸಾಂಕ್ರಾಮಿಕ ರೋಗಗಗಳ ನಿಯಂತ್ರಣ ಮತ್ತು ಚಿಕಿತ್ಸೆ, ಹೆಚ್.ಐ.ವಿ/ ಏಡ್ಸ್, ನೀರು ಮತ್ತು ನೈರ್ಮಲ್ಯ, ಗ್ರಾಮ ಪಂಚಾಯತಿ ಹಾಗು ಸಮುದಾಯ ಸಂಘಟನೆಗಳೊಂದಿಗೆ ಸಮನ್ವಯತೆ ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ.

ಮುಂದುವರೆದಂತೆ, ಈ ತರಬೇತಿಯಲ್ಲಿ ಭಾಗವಹಿಸಿದ ಅಂಗನವಾಡಿ ಕಾರ್ಯಕರ್ತೆಯರು ಹಾಗು ಆರೋಗ್ಯ ಸಹಾಯಕರು ತರಬೇತಿಯ ಉಪಯುಕ್ತತೆ ಕುರಿತು ನೀಡುತ್ತಾ ಪಂಚಾಯತಿರಾಜ್ ವ್ಯವಸ್ಥೆಯ ಜೊತೆಗೂಡಿ ಕೆಲಸ ನಿರ್ವಹಿಸಲು ಗ್ರಾಮ ಪಂಚಾಯತಿ ಅಧ್ಯಕ್ಷರೊಂದಿಗೆ ತರಬೇತಿ ನೀಡಿದ್ದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವೆಂದು ಬೇಡಿಕೆ ಇಟ್ಟ ಕಾರಣ 'ಪಂಚಾಯತ್ ರಾಜ್ ಸಂಸ್ಥೆಗಳ ಸಹಯೋಗದೊಂದಿಗೆ ಮಾನವ ಅಭಿವೃದ್ದಿ' ಕುರಿತು ಒಂದು ದಿನದ ಪುನಶ್ಚೇತನ ತರಬೇತಿಯನ್ನು ಉಪಗ್ರಹ ಪ್ರಸರಣದ ಮೂಲಕ ಹಮ್ಮಿಕೊಳ್ಳಲಾಯಿತು.

### ಜೋಡಿ ನಮೂದು ಸಂಚಯನ ಪದ್ಧತಿ ಕುರಿತು ತರಬೇತಿ ಕಾರ್ಯಕ್ರಮ:

ಗ್ರಾಮ ಪಂಚಾಯತಿಗಳ ಎಲ್ಲಾ ಚಟುವಟಿಕೆಗಳ ಮತ್ತು ಆರ್ಥಿಕ ವ್ಯವಹಾರಗಳ ಪೂರ್ಣ ವಿವರಗಳು ಪ್ರತಿಫಲನಗೊಳ್ಳುವಂತಹ ಒಂದು ಪಾರದರ್ಶಕ ಹಣಕಾಸು ನಿರ್ವಹಣಾ ವ್ಯವಸ್ಥೆಯನ್ನು "ಜೋಡಿ ನಮೂದು ಸಂಚಯನ ಪದ್ಧತಿ" ಮೂಲಕ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗಿದೆ. ಈ ಪದ್ಧತಿಯ ಮುಖಾಂತರ ಲೆಕ್ಕಪತ್ರಗಳ ನಿರ್ವಹಣೆಯನ್ನು ಪ್ರಸ್ತುತ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಂದ ನಿರ್ವಹಿಸಲು ಕಷ್ಟವಾದ ಕಾರಣ ಸರ್ಕಾರವು ಚಾರ್ಟರ್ಡ್ ಅಕೌಂಟೆಂಟ್‌ರವರ ಸೇವೆಯನ್ನು ಪಡೆಯಲು ಕ್ರಮ ವಹಿಸಿದೆ. ಹೀಗಾಗಿ ಈ ಹೊಸ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಸಿಬ್ಬಂದಿ, ಮೇಲ್ವಿಚಾರಣೆ ಮಾಡುವ ಅಧಿಕಾರಿ ಹಾಗು ಇತರರಿಗೆ ತರಬೇತಿ ಆಯೋಜಿಸುವುದು ತುಂಬಾ ಮುಖ್ಯ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯ ತಂಡದ ನಾಯಕರುಗಳು ಹಾಗು ತಾಲ್ಲೂಕು ಪಂಚಾಯತಿಯ ಲೆಕ್ಕ ಅಧೀಕ್ಷಕರಿಗೆ 5 ದಿನಗಳ ತರಬೇತಿಯನ್ನು ನೀಡಲಾಗಿದ್ದು, ವಿವಿಧ ಅಧಿವೇಶನಗಳಲ್ಲಿ ಆಯವ್ಯಯ ಸಿದ್ಧತೆ, ಆದಾಯದ ವಿವಿಧ ಮೂಲಗಳು ಹಾಗೂ ಸಂಪನ್ಮೂಲ ಕ್ರೋಢೀಕರಣ, ಸ್ವೀಕೃತಿ ಲೆಕ್ಕಗಳು, ವೆಚ್ಚದ ತತ್ವಗಳು, ಪಾವತಿ ನಿಯಮಗಳು ಹಾಗೂ ವೆಚ್ಚದ ಲೆಕ್ಕಗಳು, ಅಭಿವೃದ್ಧಿ ಕಾಮಗಾರಿಗಳ ಅಂದಾಜುಗಳ ತಯಾರಿ, ಟೆಂಡರ್ ಮತ್ತು ದರಪಟ್ಟಿಗಳನ್ನು ಪಡೆಯುವ ಮೂಲಕ ಸಾರ್ವಜನಿಕ ಸಂಗ್ರಹಣೆ ಇತ್ಯಾದಿ ಮಾಹಿತಿಯನ್ನು ವಿವರವಾಗಿ ನೀಡಲಾಗಿದೆ.

ಇದರೊಂದಿಗೆ ಜೋಡಿ ನಮೂದು ಪದ್ಧತಿಯಲ್ಲಿ ನಿರ್ವಹಿಸಲಾದ ಲೆಕ್ಕ ಕಡತಗಳ ಲೆಕ್ಕ ಪರಿಶೋಧನಾ ಕಾರ್ಯ ವಿಧಾನ ಮತ್ತು ವಾರ್ಷಿಕ ಲೆಕ್ಕಗಳ ಪ್ರಮಾಣೀಕರಣದ ವಿಷಯಗಳ ಬಗ್ಗೆ ಗ್ರಾಮ ಪಂಚಾಯತ್‌ನ ಶಾಸನಬದ್ಧ ಲೆಕ್ಕಪರಿಶೋಧಕರಾದ ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ಸಹ 5 ದಿನಗಳ ತರಬೇತಿಯನ್ನು ಈ ಸಂಸ್ಥೆಯಿಂದ ನೀಡಲಾಗಿದೆ. ನೂತನ ಲೆಕ್ಕಪದ್ಧತಿಯ ಮಾಹಿತಿಯನ್ನು ಪರಿಚಯಿಸುವ ಸಲುವಾಗಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಕರವಸೂಲಿಗಾರರು, ತಾಲ್ಲೂಕು ಪಂಚಾಯತ್‌ನ ಕಾರ್ಯ ನಿರ್ವಾಹಕ ಅಧಿಕಾರಿ, ಲೆಕ್ಕ ಅಧೀಕ್ಷಕರು ಹಾಗೂ ಚಾರ್ಟರ್ಡ್ ಅಕೌಂಟೆಂಟ್‌ರವರ ತಂಡದ ನಾಯಕರು ಹಾಗೂ ವೃತ್ತಿ ಪರಿಣಿತ ಸಹಾಯಕರುಗಳಿಗೆ ಸಹ ಒಂದು ದಿನದ ಉಪಗ್ರಹ ಆಧರಿತ ವ್ಯವಸ್ಥೆಯ ಮೂಲಕ ತರಬೇತಿಯನ್ನು ನೀಡುವ ಮೂಲಕ ಲೆಕ್ಕಪತ್ರ ನಿರ್ವಹಣೆಯಂತಹ ಪ್ರಮುಖ ವಿಷಯಕ್ಕೆ ಮಹತ್ವ ನೀಡಲಾಗಿದಷ್ಟ

### ಗ್ರಾಮ ಪಂಚಾಯತ್ ಕಾರ್ಯ\ದರ್ಶಿಗಳಿಗೆ ಬುನಾದಿ ತರಬೇತಿ

ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ 2 ವಾರಗಳ ಪಂಚಾಯತ್ ರಾಜ್ ಬುನಾದಿ ತರಬೇತಿಯನ್ನು ಸಂಸ್ಥೆಯಿಂದ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ತರಬೇತಿ ವಿನ್ಯಾಸದ ಉಪಯುಕ್ತತೆಯ ಕುರಿತು ಮಾಹಿತಿ ಪಡೆಯಲು ಕಾರ್ಯದರ್ಶಿಗಳಿಗೆ 15 ದಿನಗಳ ಪ್ರಾಯೋಗಿಕ ತರಬೇತಿಯನ್ನು ಹಮ್ಮಿಕೊಂಡಿದ್ದು, ಶಿಬಿರಾರ್ಥಿಗಳ ಸಲಹೆಯ ಮೇರೆಗೆ ವಿನ್ಯಾಸವನ್ನು ಪರಿಷ್ಕರಿಸಲಾಗಿದೆ. 2011–12ನೇ ಸಾಲಿನಲ್ಲಿ ಅಂದಾಜು 1800–2000 ಕಾರ್ಯದರ್ಶಿಯವರಿಗೆ 2 ವಾರಗಳ ಪಂಚಾಯತಿ ರಾಜ್ ಬುನಾದಿ ತರಬೇತಿಯನ್ನು ಹಾಗು ಒಂದು ವಾರದ ಪಂಚತಂತ್ರ ತಂತ್ರಾಂಶದ ಕುರಿತ ತರಬೇತಿಯನ್ನು ರಾಷ್ಟ್ರೀಯ ಮಾಹಿತಿ ಮತ್ತು ತಂತ್ರಜ್ಞಾನ ಕೇಂದ್ರದ (National Informatic Centre) ನೆರವಿನೊಂದಿಗೆ ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.

**ಸಂಸ್ಥೆಯಿಂದ ಹಮ್ಮಿಕೊಳ್ಳಲಾದ ಕ್ರಿಯಾ ಸಂಶೋಧನೆಗಳ ವಿವರ**

ಸಂಸ್ಥೆಯು ವತಿಯಿಂದ ಪ್ರಮುಖವಾಗಿ 2 ಕ್ರಿಯಾ ಸಂಶೋಧನೆಗಳನ್ನು ಹಮ್ಮಿಕೊಳ್ಳಲಾಗಿದೆ

**(ಎ) ವಿಶ್ವಬ್ಯಾಂಕ್ ಸಂಶೋಧನಾ ವಿಭಾಗದ ಸಹಯೋಗದ 50 ಗ್ರಾಮ ಪಂಚಾಯತಿಗಳಲ್ಲಿ ಜನಯೋಜನೆ ಸಿದ್ಧಪಡಿಸುವುದು ಮತ್ತು ಅನುಸರಣಾ ಚಟುವಟಿಕೆಗಳು:**

ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳಿಸುವ 39 ತಾಲ್ಲೂಕುಗಳ ಪೈಕಿ 19 ತಾಲ್ಲೂಕುಗಳ ಆಯ್ದ 50 ಗ್ರಾಮ ಪಂಚಾಯತಿಗಳಲ್ಲಿ ಜನಯೋಜನೆ ಸಿದ್ಧಪಡಿಸುವ ಹಾಗು ಅನುಷ್ಠಾನಗೊಳಿಸುವ ಪ್ರಕಿಯೆಯ ಪರಿಣಾಮದ ಅಧ್ಯಯನವನ್ನು ವಿಶ್ವಬ್ಯಾಂಕ್ ಸಂಶೋಧನಾ ವಿಭಾಗದಿಂದ ಕ್ರಿಯಾ ಸಂಶೋಧನೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. 2 ವರ್ಷ ಅವಧಿಯ ಕ್ರಿಯಾ ಸಂಶೋಧನೆಯು ಪ್ರಸ್ತುತ ಮುಗಿದಿದೆ. ಅಧ್ಯಯನದ ಅವಧಿಯಲ್ಲಿ ಈ ಗ್ರಾಮ ಪಂಚಾಯುತಿಗಳಲ್ಲಿ ಪಂಚವಾರ್ಷಿಕ ಅಭಿವೃದ್ಧಿ ಮುನ್ನೋಟವನ್ನು ಸಿದ್ಧಪಡಿಸಲಾಗಿದೆ. ಅಲ್ಲದೇ ಗ್ರಾಮ ಪಂಚಾಯತಿಗಳ ಕಾರ್ಯವೈಖರಿಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸೂಕ್ತ ಮಾರ್ಗದರ್ಶನ ಹಾಗು ಬೆಂಬಲವನ್ನು ಸಂಸ್ಥೆಯ 40 ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿ ನೀಡಲಾಗಿತ್ತು. ಇದಕ್ಕಾಗಿ ಸದರಿ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ತಿಂಗಳು 4–6 ದಿನಗಳ ಭೇಟಿ ನೀಡುವುದರ ಮೂಲಕ ಅನುಸರಣಾ ಚಟುವಟಿಕೆಗಳನ್ನು ಸಂಪನ್ಮೂಲ ವ್ಯಕ್ತಿಗಳು ನಡೆಸುತ್ತಿದ್ದು, ಕೆಲವು ಗ್ರಾಮ ಪಂಚಾಯತಿಗಳಲ್ಲಿ ಗುಣಾತ್ಮಕ ಬದಲಾವಣೆಯನ್ನು ಗಮನಿಸಲಾಗಿದೆ.




ಜನಯೋಜನೆ ಅಂಗವಾಗಿ ನಡೆಯುತ್ತಿರುವ ವಾರ್ಡ್ ಸಭೆ

**(ಬಿ) ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯೊಂದಿಗೆ ಕ್ರಿಯಾ ಸಂಶೋಧನ ಕಾರ್ಯ ಚಟುವಟಿಕೆ:**

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ಸಹಯೋಗದಲ್ಲಿ 4 ಜಿಲ್ಲೆಗಳ (ಬಾಗಲಕೋಟೆ, ರಾಯಚೂರು, ಚಿತ್ರದುರ್ಗ ಮತ್ತು ಮೈಸೂರು) ಆಯ್ದ 4 ಗ್ರಾಮ ಪಂಚಾಯತಿಗಳಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಗ್ರವಾದ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಇದೇ ಸಂಶೋಧನಾ ಚಟುವಟಿಕೆಯಡಿ ನಮ್ಮ ಸಂಸ್ಥೆಯು 24 ಗ್ರಾಮ ಪಂಚಾಯತಿಗಳು ಕ.ಪಂ.ರಾ.ಕಾಯಿದೆಯಡಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ ಎಂದು ವಿವರವಾದ ವರದಿಯನ್ನು ಸಿದ್ಧಪಡಿಸಿದೆ.

## 4. ತರಬೇತಿಗೆ ಪೂರಕವಾಗಿ ಸಂಸ್ಥೆ ಹೊರತಂದಿರುವ ಪ್ರಕಟಣೆಗಳು

ಗ್ರಾಮ ಸ್ವರಾಜ್ ಯೋಜನೆಯಡಿ ಆಯೋಜಿಸಿದ ವಿವಿಧ ತರಬೇತಿ ಕಾರ್ಯಕ್ರಮಗಳ ಶಿಬಿರಾರ್ಥಿಗಳ ಉಪಯುಕ್ತತೆಗಾಗಿ ಈ ಕೆಳಕಂಡ ಕೈಪಿಡಿಗಳನ್ನು ಸಂಸ್ಥೆಯಿಂದ ಹೊರತರಲಾಗಿದೆ.

| ಕ್ರ.ಸಂ. | ರಚಿಸಿರುವ ಕೈಪಿಡಿ (Hand Book) | ತರಬೇತಿ ಶೀರ್ಷಿಕೆ |
|---|---|---|
| 1 | ಗ್ರಾಮ ಸ್ವರಾಜ್ ಕೈಪಿಡಿ (2 ಪುಸ್ತಕಗಳು) | 39 ತಾಲ್ಲೂಕು ಹಾಗು 1341 ಗ್ರಾಮ ಪಂಚಾಯತಿಗಳಿಗೆ ಅಧಿಕಾರಿ, ಸಿಬ್ಬಂದಿ ಹಾಗು ಚುನಾಯಿತ ಪ್ರತಿನಿಧಿಗಳಿಗೆ ಗ್ರಾಮ ಸ್ವರಾಜ್ ಯೋಜನೆಯ ಕುರಿತು 2 ದಿನಗಳ ಉಪಗ್ರಹ ಆಧರಿತ ತರಬೇತಿ ಕಾರ್ಯಕ್ರಮ |
| 2 | ಗ್ರಾಮ ಪಂಚಾಯತಿ ಮತ್ತು ಪರಿಸರ ಚೌಕಟ್ಟು ನಿರ್ವಹಣೆ –(2 ಪುಸ್ತಕಗಳು) | ಗ್ರಾಮ ಪಂಚಾಯತಿಗಳಲ್ಲಿ ಅನುಸರಿಸಬೇಕಾದ ಪರಿಸರ ಚೌಕಟ್ಟು ನಿರ್ವಹಣೆ ಕುರಿತು ಅಧ್ಯಕ್ಷರು, ಉಪಾಧ್ಯಕ್ಷರು, ಪರಿಸರ ಸಂಯೋಕರು, ಕಾರ್ಯದರ್ಶಿ, ಕಿರಿಯ ಅಭಿಯಂತರರು, ಇತ್ಯಾದಿಯವರಿಗೆ 1 ದಿನದ ತರಬೇತಿ ಕಾರ್ಯಕ್ರಮ |
| 3 | ಗ್ರಾಮ ಪಂಚಾಯತಿಗಳಲ್ಲಿ ಪರಿಸರ ಚೌಕಟ್ಟು ನಿರ್ವಹಣೆ – ತರಬೇತಿದಾರರ ಕೈಪಿಡಿ | |
| 4 | ಗ್ರಾಮ ಸ್ವರಾಜ್ ಸಂಯೋಜಕರಿಗೆ ಕೈಪಿಡಿ | ರಾಯಚೂರು ಜಿಲ್ಲೆಯ ದೇವದುರ್ಗ ಹಾಗು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕುಗಳ ಗ್ರಾಮ ಸ್ವರಾಜ್ ಸಂಯೋಜಕರಿಗೆ 2–4 ದಿನಗಳ ತರಬೇತಿ ಕಾರ್ಯಕ್ರಮ |
| 5 | ತಾಲ್ಲೂಕು ಸಂಪನ್ಮೂಲ ಕೇಂದ್ರದ ಮೂವರು ಪರಿಣಿತರಿಗೆ ಕೈಪಿಡಿಗಳು | ತಾಲ್ಲೂಕು ಸಂಪನ್ಮೂಲ ಕೇಂದ್ರದ ಸಾಮಾಜಿಕ ಸಂಘಟಕರು, ಲೆಕ್ಕಪತ್ರ ಹಾಗು ಕಂಪ್ಯೂಟರ್ ಪರಿಣಿತರಿಗೆ 4 ದಿನಗಳ ಮುಖಾಮುಖಿ ತರಬೇತಿ ಕಾರ್ಯಕ್ರಮ |

ಹೊಗೆ ರಹಿತ ಒಲೆ, ಆರೋಗ್ಯದ ಸೆಲೆ.

| | | |
|---|---|---|
| 6 | ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಕೈಪಿಡಿ | ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ 2 ವಾರಗಳ ಪಂಚಾಯತ್ ರಾಜ್ ಬುನಾದಿ ತರಬೇತಿ ಹಾಗು 1 ವಾರ ಪಂಚತಂತ್ರ ತಂತ್ರಾಂಶ ಕುರಿತ ತರಬೇತಿ |
| 7 | ಸುತ್ತೋಲೆಗಳ ಕೈಪಿಡಿ (ಮುದ್ರಣ ಹಂತ) | |
| 8 | ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ತರಬೇತಿದಾರರ ತರಬೇತಿ ಕೈಪಿಡಿ (ಮುದ್ರಣ ಹಂತ) | |
| 9 | ಜನಾರೋಗ್ಯ ಕೈಪಿಡಿ | ಅಂಗನವಾಡಿ ಕಾರ್ಯಕರ್ತೆಯರು ಹಾಗು ಆರೋಗ್ಯ ಸಹಾಯಕರಿಗೆ ಸಮುದಾಯ ಆರೋಗ್ಯ ನಿರ್ವಹಣೆ ಕುರಿತ 2 ದಿನಗಳು ಹಾಗು 1 ದಿನದ ಪುನಶ್ಚೇತನ ತರಬೇತಿ |
| 10 | ನಿಮಗೆ ತಿಳಿದಿರಲಿ ......... | |
| 11 | ಸ್ವ ಸಹಾಯ | 39 ತಾಲ್ಲೂಕುಗಳ ಸ್ವ ಸಹಾಯ ಗುಂಪಿನ ಪ್ರತಿನಿಧಿಗಳಿಗೆ 2 ದಿನಗಳ ಉಪಗ್ರಹ ಆಧಾರಿತ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ |

## 5. ತರಬೇತಿ ಸಾಮಗ್ರಿಯಾಗಿ ಬಳಸಲು ಸಂಸ್ಥೆ ಅಭಿವೃದ್ಧಿಪಡಿಸಿರುವ ಸಾಕ್ಷ್ಯಚಿತ್ರಗಳು ಹಾಗು ಕಿರುಚಿತ್ರಗಳು ವಿವರ

ಸಂಸ್ಥೆಯಿಂದ ಆಯೋಜಿಸುತ್ತಿರುವ ತರಬೇತಿ ಕಾರ್ಯಕ್ರಮಗಳು ಭಾಗವಹಿಸುವಿಕೆ ವಿಧಾನವಾಗಿದ್ದು (Participatory Method) ಪರಿಣಾಮಕಾರಿ ಕಲಿಕೆಗೆ ಈ ವಿಧಾನ ಅತ್ಯವಶ್ಯವಾಗಿದೆ. ಮುಖ್ಯವಾಗಿ ಕ್ಷೇತ್ರಮಟ್ಟದ ಚುನಾಯಿತ ಪ್ರತಿನಿಧಿಗಳು ಹಾಗು ಸಿಬ್ಬಂದಿಯವರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಮಾದರಿ (Role Models) ದೃಶ್ಯದ ತುಣುಕುಗಳು ಹಾಗು ಕಿರುಚಿತ್ರಗಳನ್ನು ಬಳಸಿದಲ್ಲಿ ಹೆಚ್ಚಿನ ಪ್ರೇರಣೆ ನೀಡುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಸಂಸ್ಥೆಯು ಕೆಲವು ಸಾಕ್ಷ್ಯಚಿತ್ರಗಳನ್ನು ಹಾಗು ಕಿರುಚಿತ್ರಗಳನ್ನು ಚಿತ್ರೀಕರಿಸಿದ್ದು ತರಬೇತಿಗೆ ಪೂರಕವಾಗಿ ಬಳಸಿದ್ದು ವಿವರಣೆ ಈ ಕೆಳಗಿನಂತಿದೆ.

**ಸಾಕ್ಷ್ಯಚಿತ್ರಗಳು**

| ಕ್ರ.ಸಂ. | ಸಾಕ್ಷ್ಯಚಿತ್ರಗಳ ಶೀರ್ಷಿಕೆ | ತರಬೇತಿ ಕಾರ್ಯಕ್ರಮದಲ್ಲಿ ಬಳಕೆ |
|---|---|---|
| 1 | ಯಾರು ಹೊಣೆ? (ಕುಡಿಯುವ ನೀರಿನ ಬವಣೆ) | ಗ್ರಾಮ ಪಂಚಾಯತಿಗಳಿಗೆ ಪರಿಸರ ಚೌಕಟ್ಟು ನಿರ್ವಹಣೆ ಹಾಗು ಕಾರ್ಯದರ್ಶಿಗಳ ತರಬೇತಿ ಕಾರ್ಯಕ್ರಮ |
| 2 | ಹಸಿರೇ ಉಸಿರು (ಬರಡು ಭೂಮಿಯಲ್ಲಿ ಗಿಡಮರಗಳನ್ನು ಬೆಳೆಸಿರುವುದು) | |
| 3 | ಭೂಮಿಯನ್ನು ಪ್ಲೈಲ್ವಾನ್ ಮಾಡಿದ ಕಂದಗೋಳದ ರೈತ (ಔರಾದ್ ತಾಲ್ಲೂಕಿನ ಸಾವಯವ ಕೃಷಿಕ) | |
| 4 | ಮಲ್ಲಿಗೆಯ ಕಂಪು ಮೂಡಿಸಿದ ಸಾವಯವ ಕೃಷಿ | ಕುಡಿಯುವ ನೀರಿನ ಯೋಜನೆಯ ಅನುಷ್ಠಾನ |
| 5 | ಜೀವ ವೈವಿಧ್ಯತೆಗೆ ನಾಂದಿಯಾದ ಪವಿತ್ರ ವನ | |
| 6 | ಮನಸ್ಸಿದ್ದಲ್ಲಿ ಮಾರ್ಗ | |
| 7 | ನಿರ್ವಹಣೆಯ ಕೊರತೆಯಿಂದ ಸೊರಗುತ್ತಿರುವ ನಿರ್ಮಲ ಸಮುಚ್ಚಯ | ಗ್ರಾಮ ಸ್ವರಾಜ್ ಯೋಜನೆ ಹಾಗು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ತರಬೇತಿ ಕಾರ್ಯಕ್ರಮ (ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳು) |
| 8 | ಇಲ್ಲೊಬ್ಬ ಸ್ವಚ್ಛತಾದೂತ | |
| 9 | ಬಂದಿದೆ ಉದ್ಯೋಗ ಖಾತರಿ ಯೋಜನೆ | |
| 10 | ಉದ್ಯೋಗ ಖಾತರಿ ಯೋಜನೆ ಯಶೋಗಾಥೆ | |
| | **ಕಿರುಚಿತ್ರಗಳು** | |
| ಕ್ರ.ಸಂ. | ಸಾಕ್ಷ್ಯಚಿತ್ರಗಳ ಶೀರ್ಷಿಕೆ | ತರಬೇತಿ ಕಾರ್ಯಕ್ರಮದಲ್ಲಿ ಬಳಕೆ |
| 1 | ಲೆಕ್ಕದ ಮಹಿಮೆ | ಜೋಡಿ ನಮೂದು ಲೆಕ್ಕಪದ್ಧತಿ ಕುರಿತ ತರಬೇತಿ ಹಾಗು ಗ್ರಾ.ಪಂ.ಕಾರ್ಯದರ್ಶಿಗಳ ತರಬೇತಿ ಕಾರ್ಯಕ್ರಮ |
| 2 | ಜೋಡಿ ನಮೂದು ಲೆಕ್ಕ | |
| 3 | ಹಸಿರು ಗ್ರಾಮದ ಉಸಿರು | ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ತರಬೇತಿ ಕಾರ್ಯಕ್ರಮ ಗ್ರಾಮ ಪಂಚಾಯತಿ ಸದಸ್ಯರ ಹಾಗು ಕಾರ್ಯದರ್ಶಿಗಳ ತರಬೇತಿ ಕಾರ್ಯಕ್ರಮ |
| 4 | ಅಭಿವೃದ್ಧಿ ರಾಜಕೀಯ | |
| 5 | ವಾರ್ಡ್ ಸಭೆಯೇ ನಮ್ಮೂರ ಗ್ರಾಮ ಸಭೆ | |

ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣ ನಿಟ್ಟಿನಲ್ಲಿ ತರಬೇತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ತರಬೇತಿಯೊಂದರಿಂದಲೇ ಎಲ್ಲಾ ರೀತಿಯ ನಿರೀಕ್ಷಿತ ಬದಲಾವಣೆಗಳನ್ನು ಸಾಧಿಸಲು ಸಾಧ್ಯವಿಲ್ಲ. ತರಬೇತಿಯಲ್ಲಿ ಹೇಳಿದ ಅಥವಾ ಮನವರಿಕೆ ಮಾಡಿಕೊಂಡ ವಿಷಯಗಳನ್ನು ಕ್ಷೇತ್ರಮಟ್ಟದಲ್ಲಿ ವಿವಿಧ ಸಂದರ್ಭದಲ್ಲಿ, ವಿವಿಧ ಹಂತಗಳಲ್ಲಿ ಅನುಷ್ಠಾನಗೊಳಿಸಲು ಪೂರಕವಾದ ವಾತಾವರಣ ತಲುಪಿಸಿದರೆ ಮಾತ್ರ ಸಾಧ್ಯ. ಹೀಗಾಗಬೇಕಿದ್ದಲ್ಲಿ ತರಬೇತಿಯ ಜೊತೆಜೊತೆಗೆ ಆಡಳಿತ ಸುಧಾರಣೆಯಾದರೆ ಮಾತ್ರ ನಿರೀಕ್ಷಿಸಿದ ಬದಲಾವಣೆಯನ್ನು ಕಾಣಬಹುದಾಗಿದೆ. *

ದೃಷ್ಟಿಯನ್ನು ಬದಲಾಯಿಸು – ದೃಶ್ಯವೇ ಬದಲಾದೀತು.



ವೇಣುಗೋಪಾಲ್ ಹೆಚ್. *

> ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಸರ್ಕಾರದ ಆರ್ಥಿಕ ವ್ಯವಸ್ಥೆಯ ಸಮಗ್ರ ಗುರಿಗಳ ಚೌಕಟ್ಟಿನಲ್ಲಿರಬೇಕು ಎಂಬುದನ್ನು ವಿಕೇಂದ್ರೀಕರಣ ವಿಶ್ಲೇಷಣಾ ಕೋಶ ತಿಳಿಸುತ್ತದೆ.

# ವಿಕೇಂದ್ರೀಕರಣ ವಿಶ್ಲೇಷಣಾ ಕೋಶ – ಕಾರ್ಯ ಮತ್ತು ಸಾಧನೆಗಳು

– ಸೌಮ್ಯ ಆರ್. *

## ವಿಕೇಂದ್ರೀಕರಣ ವಿಶ್ಲೇಷಣಾ ಕೋಶ :

ಗ್ರಾಮ ಸ್ವರಾಜ್ ಯೋಜನೆಯಡಿ ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಯೋಜನೆಯ ವಿಶ್ಲೇಷಣೆ, ಮೌಲ್ಯಮಾಪನ, ಉಸ್ತುವಾರಿ ಹಾಗೂ ಸರ್ಕಾರದ ಆಂತರಿಕ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಸರ್ಕಾರವು ವ್ಯವಸ್ಥೆಯ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇಕಾದ ವಿಶ್ಲೇಷಣೆ ಹಾಗೂ ಬೌದ್ಧಿಕ ಮುಂದಾಳತ್ವವನ್ನು ಒದಗಿಸಲು ಈ ಘಟಕವು ಸಹಾಯ ಮಾಡುತ್ತದೆ. ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ಸ್ವರಾಜ್ ಯೋಜನೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

ಗ್ರಾಮೀಣ ಸ್ಥಳೀಯ ಸಂಸ್ಥೆಗಳು ತಮ್ಮ ಭಾಗದ ಆದಾಯಗಳನ್ನು ರಾಜ್ಯ ನಿಧಿಯ ಒಂದೇ ಮೂಲದಿಂದ ಪಡೆಯುವ, ಇಡಿಪಿ ಅಭಿವೃದ್ಧಿ, ತರಬೇತಿಯಲ್ಲಿ ಮಿತವ್ಯಯ, ಏಕರೂಪದ ಲೆಕ್ಕಪತ್ರ ನಿಯಮಗಳನ್ನು ಪಾಲಿಸುವ ಹಾಗು ಹಣಕಾಸು ಮಾಹಿತಿ ವ್ಯವಸ್ಥೆಯನ್ನು ನಿರ್ವಹಿಸುವ ಇತ್ಯಾದಿ ಕಾರಣಗಳಿಗಾಗಿ ಈ ಕೋಶವು ಸಹಕಾರಿಯಾಗಿದೆ. ಇದಲ್ಲದೆ ರಾಜ್ಯ ಸರ್ಕಾರವು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವೆಚ್ಚಗಳ ಹಂಚಿಕೆ ಪತ್ರಗಳನ್ನು ಸೂತ್ರರೂಪದಲ್ಲಿ ವ್ಯಕ್ತಪಡಿಸಲು, ತೆರಿಗೆ ಯೋಜನೆಗಳು ಮತ್ತು ಸರ್ಕಾರದ ಅಂತರಿಕ ವರ್ಗಾವಣೆಗಳ ಕುರಿತು ವಿಚಾರ ಮಾಡಲು ಸಹಕರಿಸುತ್ತದೆ. ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಸರ್ಕಾರದ ಆರ್ಥಿಕ ವ್ಯವಸ್ಥೆಯ ಸಮಗ್ರ ಗುರಿಗಳ ಚೌಕಟ್ಟಿನಲ್ಲಿರಬೇಕು ಎಂಬುದನ್ನು ತಿಳಿಸುತ್ತದೆ.

## ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ಕಾರ್ಯ

ಕೋಶವು ವ್ಯವಸ್ಥೆಯ ಮಾದರಿಯನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಪ್ರತಿ ವರ್ಷದ ದತ್ತಾಂಶಗಳನ್ನು ಸಲ್ಲಿಸುವ ಹಾಗೂ ಸರಿಪಡಿಸುವುದರ ಉಸ್ತುವಾರಿ, ಪ್ರಶ್ನೆಗಳಿಗೆ ಉತ್ತರಿಸುವುದು, ಸಮಸ್ಯೆಗಳನ್ನು ಬಗೆಹರಿಸುವುದು ಮತ್ತು ದತ್ತಾಂಶಗಳನ್ನು ಸರ್ಕಾರಿ ಸಂಸ್ಥೆಗಳು ಹಾಗೂ ಸಂಶೋಧಕರು ಬಳಸಲು ನೆರವಾಗುವಂತೆ ಕ್ರೋಢೀಕರಿಸುವ ಪ್ರಮುಖ ಕಾರ್ಯವನ್ನು ನಿರ್ವಹಿಸುತ್ತದೆ. ಸ್ಥಳೀಯ ಸರ್ಕಾರದ ವಾರ್ಷಿಕ ಹಣಕಾಸು ನಿರ್ವಹಣೆ ಸ್ಥಿತಿಯನ್ನು ತಿಳಿಯಲು ಅನುಪಾಲನೆಯ ಮೂಲಕ ವಿಕೇಂದ್ರೀಕರಣ ವಿಶ್ಲೇಷಣಾ ಘಟಕವು ನೆರವು ನೀಡುವುದು. ವೆಚ್ಚ ಹಾಗೂ ಗಳಿಸಿದ ಅದಾಯದ ಹಿನ್ನೆಲೆಯಲ್ಲಿ ಅಯವ್ಯಯ ಫಲಿತಾಂಶಗಳು, ಅಯವ್ಯಯ ಉಳಿಕೆ ಹಾಗೂ ಕೊರತೆಗಳು, ತೆರಿಗೆ ವಸೂಲಿಯ ಪ್ರಯತ್ನ ಹಾಗೂ ಅಯವ್ಯಯದ ಹಂಚಿಕೆ ಮತ್ತು ನಿಖರವಾದ ಫಲಿತಾಂಶಗಳನ್ನು ಸಹ ಒಳಗೊಂಡಿರುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳ ಹಣಕಾಸು ಮಾಹಿತಿಯ ನಿಖರವಾದ ದತ್ತಾಂಶಗಳ ಮೇಲೆ ಅವಲಂಬಿಸಿರುತ್ತದೆ. ಈ ಕೆಳಗೆ ವಿವರಿಸಿದ ಅಂಶಗಳಲ್ಲಿ ಇದನ್ನು ಚರ್ಚಿಸಲಾಗಿದೆ.

1. **ಸೂತ್ರದ ಮೌಲ್ಯಮಾಪನ:–** ಅರ್ಹ ಸ್ಥಳೀಯ ಸರ್ಕಾರಗಳಿಗೆ ಅನುದಾನವನ್ನು ವಿತರಿಸಲು ಸೂತ್ರವನ್ನು ಬಳಸುವುದು ಮತ್ತು ಪರಿಣಾಮವನ್ನು ನಿರಂತರವಾಗಿ ಪರೀಕ್ಷಿಸುವುದು.
2. **ಅನುಪಾಲನ ಉಸ್ತುವಾರಿ:–** ಹಣಕಾಸು ಮಾರ್ಪಾಡುಗಳ ಭಾಗವಾಗಿ ರಾಜ್ಯವು ಕೆಲವು ನಿಬಂಧನೆಗಳನ್ನು ಹೊಂದಿರುತ್ತದೆ. ಉದಾಹರಣೆಗೆ, ಆಸ್ತಿ ತೆರಿಗೆಯ ವಹಿಗಳಲ್ಲಿ ಇತ್ತೀಚಿನ ಮಾಹಿತಿಯನ್ನು ದಾಖಲಿಸುವ ಅಗತ್ಯವನ್ನು ರಾಜ್ಯ ಸರ್ಕಾರ ಮನಗಾಣುವಂತೆ, ಎಷ್ಟರ ಮಟ್ಟಿಗೆ ಮಾಡಲಾಗಿದೆ ಎಂಬುದನ್ನು ನಿರ್ಧರಿಸಲು ದತ್ತಾಂಶಗಳನ್ನು ಪರಿಶೀಲಿಸವುದು, ಇತ್ಯಾದಿ.
3. **ಅದಾಯ ಸಂಗ್ರಹಣೆಯ ವಿಶ್ಲೇಷಣೆ:–** ಸ್ಥಳೀಯ ಸರ್ಕಾರಗಳ ತೆರಿಗೆ ವಸೂಲಿ ಪ್ರಯತ್ನಗಳ ವಿವರವಾದ ಮಾಹಿತಿಯ ಹಾಗೂ ಪರಿವಿಡಿಯನ್ನು ತಯಾರಿಸಿ ಈ ಪ್ರಯತ್ನಗಳಲ್ಲಿನ

* ಸಹಾಯಕ ಸಂಶೋಧಕರು, ವಿ.ವಿ.ಕೋಶ, ಗ್ರಾಮ ಸ್ವರಾಜ್ ಯೋಜನೆ, ಬೆಂಗಳೂರು.

ಸಂಸ್ಕಾರವಿಲ್ಲದ ವಿದ್ಯೆ ಪರಿಮಳವಿಲ್ಲದ ಪುಷ್ಪದಂತೆ.

ಬದಲಾವಣೆಗಳ ಅನುಪಾಲನೆಯನ್ನು ಮಾಡಬಹುದಾಗಿದೆ. ತೆರಿಗೆ ವಸೂಲಿಯು ಪ್ರಯತ್ನಗಳ ವ್ಯವಸ್ಥೆಯನ್ನು ಉತ್ತಮಪಡಿಸಲು ರೂಪಿಸಿದ ಯೋಜನೆಗಳ ಮೌಲ್ಯಮಾಪನ ವನ್ನು ಮಾಡಲಾಗುತ್ತಿದೆ.

4. **ಅತ್ಯುತ್ತಮ ವಿಧಾನ:–** ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸ್ಥಳೀಯ ಸರ್ಕಾರಗಳು ಹೊಸಪದ್ಧತಿಗಳನ್ನು ಜಾರಿಗೆ ತರುತ್ತವೆ ಮತ್ತು ಇಂತಹ ಹೊಸ ಪದ್ಧತಿಗಳನ್ನು ಗುರುತಿಸಿ, ಇವುಗಳ ಮೌಲ್ಯಮಾಪನವನ್ನು ಮಾಡಿ ಎಲ್ಲಾ ಕ್ಷೇತ್ರಗಳಿಗೆ ತಲುಪಿಸು ವುದಾಗಿದೆ.

5. **ವೆಚ್ಚಗಳ ಹಂಚಿಕೆ ಪತ್ರ:–** ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸೇವಾ ವಿತರಣೆಯ ವ್ಯವಸ್ಥೆಗಳ ಫಲಿತಾಂಶಗಳನ್ನು ಆಧರಿಸಿ ನಿರಂತರ ವಿಶ್ಲೇಷಣೆಯನ್ನು ಮಾಡುವುದು ಮತ್ತು ವೆಚ್ಚಗಳ ಮರುಹಂಚಿಕೆಯು ಆರ್ಥಿಕ ಪರಿಣಾಮಗಳನ್ನು ಅಂದಾಜಿಸುವುದು.

6. ಸರ್ಕಾರದೊಳಗಿನ ವ್ಯವಸ್ಥೆಯ ಉದ್ದೇಶಗಳು ಮತ್ತು ವಿವಿಧ ಆರ್ಥಿಕ ಸುಧಾರಣೆಗಳ ಪರಿಣಾಮಗಳ ಮೌಲ್ಯಮಾಪನ ಮಾಡುವುದು. ಇದಕ್ಕಾಗಿ ಸರ್ಕಾರವು ಕೈಗೊಳ್ಳಬೇಕಾದ ನಿರ್ಣಯಗಳ ಅಗತ್ಯಕ್ಕೆ ತಕ್ಕಂತೆ ಪ್ರಸ್ತಾವಿತ ಪರ್ಯಾಯ ಬದಲಾವಣೆಗಳ ವಿಶ್ಲೇಷಣೆಗಳನ್ನು ಮಾಡುವುದು.

7. ಕರ್ನಾಟಕದ ಗ್ರಾಮೀಣ ಸ್ಥಳೀಯ ಸರ್ಕಾರಗಳಲ್ಲಿ ಇರುವ ವೆಚ್ಚಗಳ ಅಸಮಾನತೆಗಳ ವಾರ್ಷಿಕ ಮೌಲ್ಯಮಾಪನ ವನ್ನು ನಡೆಸುವುದು.

8. **ಆರ್ಥಿಕ ಅಂತರಿಕ ಪರಿಶೀಲನೆ:–** ಪ್ರತಿ ವರ್ಷ ಆಂತರಿಕ ಪರಿಶೀಲನೆ ಮಾಡಲು ಸಿದ್ದತೆಗಳನ್ನು ಮಾಡುವಲ್ಲಿ ಮುಂದಾಳತ್ವವನ್ನು ವಹಿಸುತ್ತದೆ. ಇದು ಹಣಕಾಸು ವಿಕೇಂದ್ರಿಕರಣವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವಲ್ಲಿ ಮತ್ತು ಆರ್ಥಿಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಅನೇಕ ಸರ್ಕಾರಿ ಹಾಗೂ ಖಾಸಗಿ ವಲಯದ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಪಡೆಯುವಲ್ಲಿ ರಾಜ್ಯಕ್ಕೆ ನೆರವು ನೀಡುವುದು.

9. **ವರದಿಸುವಿಕೆ:–** ನಿಖರ ಹಾಗೂ ಸಕಾಲಿಕ ಮಾಹಿತಿಯನ್ನು ಸರ್ಕಾರ ಹಾಗೂ ಸಾರ್ವಜನಿಕರಿಗೆ ವರದಿ ಮಾಡುವುದು. (ಅ) ದತ್ತಾಂಶಗಳ ಆಧಾರದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಿ ಸರ್ಕಾರದ ಒಳಗೆ ಹಾಗೂ ಹೊರಗೆ ಸುಧಾರಣೆಗಳ ಕುರಿತ ಚರ್ಚೆಗಳನ್ನು ಹುಟ್ಟುಹಾಕುತ್ತದೆ. (ಆ) ವೆಬ್ ಸೈಟ್ – ಮಾಹಿತಿ ಜಾಲದಲ್ಲಿ ದತ್ತಾಂಶಗಳನ್ನು ಒದಗಿಸುವುದು ಹಾಗೂ ಸಂಶೋಧನೆ, ಉತ್ತಮ ಕಾರ್ಯ ವೈಖರಿಗಳ ವಿಶ್ಲೇಷಣೆ ಮತ್ತು ಅಯ್ದ ಹಣಕಾಸು ಟಿಪ್ಪಣಿಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.

10. ರಾಜ್ಯ ಹಣಕಾಸು ಆಯೋಗಕ್ಕೆ ತಾಂತ್ರಿಕ ನೆರವು ಹಾಗೂ ದತ್ತಾಂಶಗಳನ್ನು ಒದಗಿಸುವುದು. ಇತರೆ ಸಂಭವನೀಯ ವಿಚಾರಗಳಲ್ಲಿ ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಸಂಶೋಧನೆ ಮಾಡಿರುವ ಒಂದು ನಿರ್ದಿಷ್ಠ ವಿಷಯದ ಕುರಿತು ಸರ್ಕಾರ ಹಾಗೂ ಇತರರಿಗೆ ತಿಳಿಸಲು ನಿಯತಕಾಲಿಕ ಚರ್ಚಾಕೂಟ ಗಳನ್ನು ಏರ್ಪಡಿಸುತ್ತದೆ.

## ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ಸಾಧನೆ

1) **ಗ್ರಾಮ ಪಂಚಾಯಿತಿಗಳ ಸಾಮಾನ್ಯ ಮಾಹಿತಿ ಸಂಗ್ರಹಣೆ:** ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ನಿರಂತರವಾಗಿ ಅಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಮಾಹಿತಿಯನ್ನು ಸಂಗ್ರಹಿಸಲು ಖುದ್ದಾಗಿ ಸಂಬಂಧಪಟ್ಟ ಕ್ಷೇತ್ರಗಳಿಗೆ ತೆರಳಿ ರಾಜ್ಯದ ಪ್ರತಿ ಕಂದಾಯ ಗ್ರಾಮವಾರು ಮಾಹಿತಿಗಳನ್ನು ಸಂಗ್ರಹಿಸಿ ಆಯಾ ಗ್ರಾಮ ಪಂಚಾಯಿತಿ ಅಡಿಯಲ್ಲಿ ಬರುವ ಕಂದಾಯ ಗ್ರಾಮಗಳಿಗೆ ತುಲನೆ ಮಾಡಿ ಸಾಮಾಜಿಕ–ಆರ್ಥಿಕ ಅಂಕಿ ಆಂಶಗಳನ್ನು 2005–06ರ ಸಾಲಿನಿಂದ ಸಂಗ್ರಹಿಸಿದೆ.

2) **ಗ್ರಾಮ ಪಂಚಾಯಿತಿಗಳ ಆರ್ಥಿಕ ಸಾಲಿನ ಲೆಕ್ಕಪರಿಶೋದನೆಯ ಸ್ವೀಕೃತಿ ಮತ್ತು ಪಾವತಿಗಳ ಮಾಹಿತಿ ಸಂಗ್ರಹಣೆ:** ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಕರ್ನಾಟಕದ 5,625 ಗ್ರಾಮ ಪಂಚಾಯಿತಿಗಳಲ್ಲಿ ಇರುವ ವೆಚ್ಚಗಳ ಅಸಮಾನತೆಗಳ ವಾರ್ಷಿಕ ಮೌಲ್ಯಮಾಪನ ಮಾಡುವುದು ಪ್ರಮುಖ ಜವಾಬ್ದಾರಿಯಾಗಿ ರುವುದರಿಂದ ಈ ಘಟಕವು ಮೊದಲಿಗೆ ರಾಜ್ಯ ಲೆಕ್ಕ ಪತ್ರ ಇಲಾಖೆಯಲ್ಲಿ ಲಭ್ಯವಿರುವ 2005–06ರ ಆರ್ಥಿಕ ಸಾಲಿನ ಗ್ರಾಮ ಪಂಚಾಯಿತಿಗಳ ಆರ್ಥಿಕ ಅಂಕಿಅಂಶಗಳನ್ನು ಸಂಗ್ರಹಿಸಿದೆ. ಈ ಅಂಕಿ ಅಂಶಗಳಲ್ಲಿ ಇರುವ ನ್ಯೂನತೆಗಳ ಬಗ್ಗೆ ರಾಜ್ಯ ಲೆಕ್ಕಪತ್ರ ಇಲಾಖೆಯೊಂದಿಗೆ ಚರ್ಚಿಸಿ ಸರಿಪಡಿಸಲಾಗಿದೆ.

ವಿಕೇಂದ್ರೀಕರಣ ವಿಶ್ಲೇಷಣಾ ಕೋಶದಲ್ಲಿ ಲಭ್ಯವಿರುವ ಗ್ರಾಮ ಪಂಚಾಯಿತಿಗಳ ಆರ್ಥಿಕ ಹಾಗೂ ಸಾಮಾನ್ಯ ಮಾಹಿತಿ ದತ್ತಾಂಶಗಳನ್ನು ವಿಶ್ವ ಬ್ಯಾಂಕ್, ವೆಚ್ಚ ಸುಧಾರಣಾ ಆಯೋಗ, ಭಾರತದ ಲೆಕ್ಕ ಮತ್ತು ಪರಿಶೋಧನಾ ಇಲಾಖೆ ಹಾಗೂ ಅಭಿವೃದ್ಧಿ ಮತ್ತು ಸಬಲೀಕರಣ ಆಧ್ಯಯನ ಸಂಸ್ಥೆಗಳು ಪಡೆಯಲು ಪಾಲುದಾರರಾಗಿರುತ್ತಾರೆ.

3) **ಗ್ರಾಮ ಪಂಚಾಯಿತಿಗಳಿಗೆ ಸೂತ್ರದ ಅನ್ವಯ ಮುಕ್ತ ಅನುದಾನ ಹಾಗು ಮೌಲ್ಯಮಾಪನ :** ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನವನ್ನು ಸೂತ್ರದ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಯಿತು.

4) **ಕ್ಷೇತ್ರ ಅಧ್ಯಯನಗೊಳಗೊಂಡ ವರದಿಸುವಿಕೆ :** ಕ್ಷೇತ್ರ ಅಧ್ಯಯನ ಒಳಗೊಂಡ ಸಂಶೋಧನಾ ವರದಿಗಳ ಸರಣಿಯಾಗಿ ಈ ಕೆಳಗಿನ ನಾಲ್ಕು ಕ್ಷೇತ್ರ ಅಧ್ಯಯನಗಳನ್ನು ಪೂರ್ಣಗೊಳಿಸಿದೆ.

ಅ) "ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಆಯ್ದ ತಾಲೂಕು ಗಳಲ್ಲಿನ ಅನುಷ್ಠಾನದ ಫಲಶೃತಿಗಳ ಕುರಿತು ಮೌಲ್ಯಾಧಾರಿತ ಆಧ್ಯಯನ".

ಆ) "ಉಡುಪಿ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಬರುವ ಗ್ರಾಮ ಪಂಚಾಯಿತಿಗಳ ಹಣಕಾಸು ಸಂಪನ್ಮೂಲಗಳ ಒಂದು ತೌಲನಿಕ ಅಧ್ಯಯನ".

# ನಮ್ಮ ಗ್ರಾಮ – ನಮ್ಮ ಸಭೆ – ನಮ್ಮ ನಿರ್ಧಾರ

– ಡಿ.ಎನ್. ರಾಮನಾಥ್ *

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಲಕ್ಷ್ಮಿಸಾಗರ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸ್ವರಾಜ್ ಯೋಜನೆ ನೆರವಿನಿಂದ ಗ್ರಾಮ ಪಂಚಾಯತಿ ಕಛೇರಿಯ ಕಟ್ಟಡವನ್ನು ಉತ್ತಮವಾಗಿ ನಿರ್ಮಾಣ ಮಾಡಿಕೊಳ್ಳಲಾಗಿದೆ.

ವಿಶ್ವ ಬ್ಯಾಂಕ್ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ 2006–07ನೇ ಸಾಲಿನಿಂದ ಮಹಾತ್ಮ ಗಾಂಧೀಜಿಯವರ ನುಡಿಯಂತೆ ಗ್ರಾಮ ಸ್ವರಾಜ್ ಎಂಬ ಯೋಜನೆಯನ್ನು ಭಾರತ ದೇಶದ ಕರ್ನಾಟಕ ರಾಜ್ಯದಲ್ಲಿ ಡಾ.ನಂಜುಂಡಪ್ಪರವರ ವರದಿಯನ್ನು ಆಧರಿಸಿ 39 ತಾಲ್ಲೂಕು 1341 ಗ್ರಾಮ ಪಂಚಾಯತಿಗಳಲ್ಲಿ ಅಳವಡಿಸಲಾಗಿದೆ. ಇದರ ಉದ್ದೇಶ ಆರ್ಥಿಕವಾಗಿ, ಆಡಳಿತಾತ್ಮಕವಾಗಿ, ಸಾಮಾಜಿಕವಾಗಿ ನೆರವು ನೀಡಿ ಹಿಂದುಳಿದ ಗ್ರಾಮ ಪಂಚಾಯತಿಗಳನ್ನು ಅಭಿವೃದ್ಧಿ ಹೊಂದಿದ ಇತರೆ ಗ್ರಾಮ ಪಂಚಾಯತಿಗಳ ಮಟ್ಟಕ್ಕೆ ತರಲು ಯತ್ನಿಸುವುದಾಗಿದೆ. ಈ ಹಿಂದೆ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಗೆ ಜನರ ಭಾಗವಹಿಸುವಿಕೆ ತುಂಬಾ ವಿರಳವಾಗಿತ್ತು. ಕಾರಣ ಮಾಹಿತಿಯ ಕೊರತೆ ಹಾಗೂ ಗ್ರಾಮ ಪಂಚಾಯತಿಗಳಿಂದ ನಮಗೆ ಯಾವುದೇ ಸೌಲಭ್ಯಗಳು ಸಿಗುವುದಿಲ್ಲವೆಂಬ ಹಿಂಜರಿಕೆಯಿಂದ.

ಆದರೆ ಈಗ ಉತ್ತಮ ಮಾಹಿತಿಗಳು ಕರಪತ್ರಗಳ ಮೂಲಕ ಹಾಗೂ ಪತ್ರಿಕಾ ಪ್ರಕಟಣೆಗಳಿಂದ ಮತ್ತು ಶಾಲಾ ಮಕ್ಕಳನ್ನು ಬಳಸಿಕೊಂಡು ಪ್ರಚಾರ ಮಾಡಿ ಜನರಿಗೆ ಮಾಹಿತಿ ತಿಳಿದು ಗ್ರಾಮ ಮಟ್ಟದಲ್ಲಿ ನಡೆಯುವ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಿಗೆ ಹೆಚ್ಚು ಜನರು ಭಾಗವಹಿಸುವ ಮೂಲಕ ತಮಗೆ ಬೇಕಾದ ಸೌಲಭ್ಯ ಪಡೆಯಲು ಮುಂದಾಗಿದ್ದಾರೆ.

ಗ್ರಾಮ ಸ್ವರಾಜ್ ಯೋಜನೆ ಜಾರಿಗೆ ಮುಂಚೆ ಪಂಚಾಯತಿಗಳು ಕೆಲವು ಬಲಾಢ್ಯರ ತೀರ್ಮಾನದಂತೆ ಕೆಲವೇ ಕೆಲವು ಬೇಡದ ಕಾಮಗಾರಿಗಳನ್ನು ನಿರ್ಮಾಣ ಮಾಡಿ ಸರ್ಕಾರದ ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡುತ್ತಿದ್ದರು. ನಮ್ಮ ಗ್ರಾಮ ನಮ್ಮ ನಿರ್ಧಾರ ಎಂಬ ಗ್ರಾಮ ಸ್ವರಾಜ್ ಯೋಜನೆಯ ಧ್ಯೇಯ್ಯ ವಾಕ್ಯದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಗ್ರಾಮ ಸ್ವರಾಜ್ ಸಮಾಲೋಚಕರುಗಳು, ಗ್ರಾಮ ಪಂಚಾಯತಿ ಸದಸ್ಯರುಗಳು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಜನರ ಮನವೊಲಿಸಿ "ನಿಮ್ಮ ಗ್ರಾಮಗಳ ದುಸ್ಥಿತಿಯನ್ನು ನೋಡಿದರೆ ನಿಮ್ಮ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಹಾಗಾಗಿ ನಿಮ್ಮ ಗ್ರಾಮಗಳಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ", ಆಸ್ತಿ ನಿರ್ಮಾಣ ಮಾಡಲು ನಿರ್ಧರಿಸುವಂತೆ ತಿಳಿಸಿ ಹೇಳಿದ್ದರ ಫಲವಾಗಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಲಕ್ಷ್ಮಿಸಾಗರ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸ್ವರಾಜ್ ಯೋಜನೆಯಿಂದ 2007–08 ಮತ್ತು 2008–09ನೇ ಸಾಲುಗಳಿಗೆ ಒದಗಿಸಲಾದ ಅನುದಾನದ ನೆರವಿನಿಂದ ಗ್ರಾಮ ಪಂಚಾಯತಿ ಕಛೇರಿಯ ಕಟ್ಟಡವನ್ನು ಉತ್ತಮವಾಗಿ ನಿರ್ಮಾಣ ಮಾಡಿಕೊಳ್ಳಲಾಗಿದೆ. ಈ ಕಟ್ಟಡವು ಭವ್ಯ ಮತ್ತು ಸುಸಜ್ಜಿತವಾಗಿದ್ದು ಇಡೀ ತಾಲ್ಲೂಕಿನಲ್ಲಿಯೇ ಮಾದರಿಯಾದ ಕಟ್ಟಡವೆನಿಸಿದೆ. ಇದನ್ನು ಅನುಸರಿಸಿ ಇದೇ ತಾಲ್ಲೂಕಿನ ತಾವರೇಕೆರೆ, ಚಿನ್ನೇನಹಳ್ಳಿ, ಶೀಬಿ ಅಗ್ರಹಾರ, ನೇರಲಗುಡ್ಡ, ಹುಯಿಲ್‌ದೊರೆ, ನಾದೂರು ಮತ್ತು ಮಾಗೋಡು ಗ್ರಾಮ ಪಂಚಾಯತಿಗಳು ಗ್ರಾಮ ಸ್ವರಾಜ್ ಯೋಜನೆಯಡಿ ತಮ್ಮ ಗ್ರಾಮ ಪಂಚಾಯತಿ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಮುಂದಾಗಿರುವುದು ಸಂತೋಷದಾಯಕ ವಿಚಾರವಾಗಿದೆ.



* ಸಾಮಾಜಿಕ ಸಂಘಟನಾ ಸಮಾಲೋಚಕ, ತಾಲ್ಲೂಕು ಸಂಪನ್ಮೂಲ ಕೋಶ, ಶಿರಾ ತಾಲ್ಲೂಕು.

# ಗ್ರಾಮ ಸ್ವರಾಜ್ – ಒಂದು ಸಮಾಜಮುಖಿ ಯೋಜನೆ

– ಹನಮಂತಾಚಾರ. ಕೆ. ಆಲೂರು *

ಮಹಾತ್ಮಾ ಗಾಂಧೀಜಿಯವರ ನಿತ್ಯ ಮಂತ್ರವಾಗಿದ್ದ "ಗ್ರಾಮ ಸ್ವರಾಜ್ "ದ ಕನಸನ್ನು ನನಸನ್ನಾಗಿ ಮಾಡಿ ಸಾಕಾರಗೊಳಿಸಿದ ಕೀರ್ತಿ ಮೊಟ್ಟ ಮೊದಲನೆಯದಾಗಿ ನಮ್ಮ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. "ಗ್ರಾಮ ಸ್ವರಾಜ್"ದ ಕಲ್ಪನೆಗಳೇ ವಿಶೇಷ ಗ್ರಾಮಾಂತರ ಪ್ರದೇಶಗಳ ಅನೇಕ ಮೂಲಭೂತ ಸೌಕರ್ಯಗಳಿಗೆ ಬೇಕಾದ ಹಣಕಾಸು ಹಾಗೂ ಅಧಿಕಾರವನ್ನು ಸ್ವಯಂ ಸಂಸ್ಥೆಗಳಾದ ಗ್ರಾಮ ಪಂಚಾಯತಗಳಿಗೆ ಹಸ್ತಾಂತರಿಸಿ ಗ್ರಾಮೀಣ ಜನ ಜೀವನದ ಆಶೋತ್ತರಗಳಿಗೆ ಜೀವ ತುಂಬಿದ "ಗ್ರಾಮ ಸ್ವರಾಜ್" ಯೋಜನೆ ಜಾರಿಯಾಗಿದ್ದು ಯಶಸ್ವಿಯತ್ತ ದಾಪುಗಾಲು ಹಾಕಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಿಂದಿನಿಂದ ಇಂದಿನವರೆಗೂ ಅನೇಕ ಬೃಹದಾಕಾರದ ಯೋಜನೆಗಳು ವಿವಿಧ ಇಲಾಖೆಗಳ ಮೂಲಕ ಜಾರಿಗೊಂಡಿವೆ. ಆದರೆ ಗ್ರಾಮ ಪಂಚಾಯತಗಳ ಮೂಲಕ ಮತ್ತು ಮುಕ್ತ ಅನುದಾನದ ಮುಖಾಂತರ ಜಾರಿಗೊಂಡ ಯೋಜನೆಯೆಂದರೆ "ಈ ಗ್ರಾಮ ಸ್ವರಾಜ್" ಯೋಜನೆಯೆ ಮೊದಲೆಂದು ಹೇಳಬಹುದಾಗಿದೆ. ಅಲ್ಲದೇ ಈ ಯೋಜನೆ ಕೇವಲ ರಸ್ತೆ, ನೀರು, ಚರಂಡಿ ಮುಂತಾದವುಗಳಿಗಷ್ಟೇ ಸಿಮೀತವಾಗಿರದೇ ಗ್ರಾಮ ಪಂಚಾಯತದ ಆರ್ಥಿಕ, ಸಾಮಾಜಿಕ ಬದ್ಧತೆಗಳನ್ನು ಬಲಪಡಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದೆ.

ಗ್ರಾಮ ಸ್ವರಾಜ್ ಯೋಜನೆಯನ್ನು ಹಿಂದುಳಿದ ತಾಲೂಕುಗಳಲ್ಲಿ ಸಾಧ್ಯವಾಗಿಸಲು ತನ್ನ ಪ್ರಯತ್ನಗಳ ಮೂಲಕ ಪಂಚಾಯತ ರಾಜ್ ಸಂಸ್ಥೆಗಳೇ ಯೋಗ್ಯವೆಂದು ಮನಗಂಡ ಸರ್ಕಾರ ಯೋಜನೆಯ ಅನುಷ್ಠಾನವನ್ನು ಗ್ರಾಮ ಪಂಚಾಯತಗಳ ಮೂಲಕ ಜಾರಿಗೊಳಿಸುವದರ ಜೊತೆಗೆ "ಗ್ರಾಮ ಸಭೆ"ಗೆ ಹೆಚ್ಚಿನ ಶಕ್ತಿ ತುಂಬುವ ಮೂಲಕ ಆಡಳಿತದಲ್ಲಿ ಸಾರ್ವಜನಿಕರ ಸಹಭಾಗಿತ್ವಕ್ಕೆ ವಿಶೇಷ ಒತ್ತು ನೀಡಿದೆ. ಗ್ರಾಮ ಪಂಚಾಯತಗಳು ಈ ಯೋಜನೆಯ ಅನುಷ್ಠಾನದ ಮೂಲಕ ವಾರ್ಡ/

ಈ ಯೋಜನೆಯಲ್ಲಿ ಪರಿಸರ ನಾಶವಾಗದಂತೆ ಕಟ್ಟು-ನಿಟ್ಟಿನ ಕಾಳಜಿ ಮತ್ತು ಪರಿಹಾರ ಮಾರ್ಗೋಪಾಯಗಳನ್ನು ರೂಪಿಸಲಾಗಿದೆ.



* ವಿಷಯ ನಿರ್ವಾಹಕ, ಗ್ರಾ.ಸ್ವಯೋಜನೆ, ತಾಲೂಕ ಪಂಚಾಯತ ಯಲಬುರ್ಗಾ, ಜಿ॥ ಕೊಪ್ಪಳ



ಮೈಲಾರ ಗ್ರಾಮದ ಕುಡಿಯವ ನೀರಿನ ಪುನಶ್ಚೇತನ

ಗ್ರಾಮ/ಸಾಮಾನ್ಯ ಸಭೆಗಳನ್ನು ನಡೆಸುವದು. ಸಭೆಗಳಲ್ಲಿ ಜನರ ಸಹಭಾಗಿತ್ವವನ್ನು ಖಾತರಿಪಡಿಸುವದು. ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸುವದು. ಹಣಕಾಸಿನ ಸ್ಥಿತಿ ಬಲಪಡಿಸಿ ಸಂಸ್ಥೆಗಳು ಶಕ್ತಿಯುತವಾಗುವಾಂತೆ ಸುಧಾರಣೆಯನ್ನು ತರುವದು, ಜೊತೆಯಲ್ಲಿ ಗ್ರಾಮೀಣ ಭಾಗದ ಅತ್ಯಂತ ಮೂಲಭೂತ ಸಮಸ್ಯೆ ಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಶೌಚಾಲಯಗಳು, ಪ್ರಾಥಮಿಕ ಶಿಕ್ಷಣ, ಇತ್ಯಾದಿ ಸೇವೆಗಳಿಗೆ ಈ ಯೋಜನೆಯು ವಿಶೇಷ ಒಲವು ನೀಡುರುವದು ಪ್ರಶಂಸನಾರ್ಹ ವಿಷಯವಾಗಿದೆ.

ಅತ್ಯಂತ ಕಾಳಜಿಯುತ ವಿಷಯವೊಂದು ಈ ಯೋಜನೆ ಯಲ್ಲಿ ಅಡಕವಾಗಿದೆ. ಅದೇ "ಪರಿಸರ ನಿರ್ವಹಣೆ" ಈ ಹಿಂದಿನ ಯಾವೊಂದು ಯೋಜನೆ ಗಳಲ್ಲಿ ಈ ರೀತಿ ಪರಿಸರ ನಿರ್ವಹಣೆ ಕುರಿತಾದ ಕಾಳಜಿ ಕಂಡುಬಂದಿಲ್ಲ. ಆದರೆ ಈ ಯೋಜನೆಯಲ್ಲಿ ಪರಿಸರ ನಾಶವಾಗದಂತೆ ಕಟ್ಟು-ನಿಟ್ಟಿನ ಕಾಳಜಿ ಮತ್ತು ಪರಿಹಾರ ಮಾರ್ಗೋಪಾಯಗಳನ್ನು ರೂಪಿಸಲಾಗಿದೆ.

ಗ್ರಾಮ ಪಂಚಾಯತಗಳು ಸಾಮಾನ್ಯ ಸಭೆ ಜರುಗಿಸಿ ಗ್ರಾಮಗಳಿಗೆ ನೀರು, ದೀಪ ಪೂರೈಸುವದಕ್ಕೆ ಮಾತ್ರ ಸೀಮಿತವಾಗಿದ್ದ ಕಾಲ ಒಂದಿತ್ತು ಆದರೆ ಈ ಯೋಜನೆಯ ಮುಖಾಂತರ ಗ್ರಾಮಗಳ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಗಳ ಆರ್ಥಿಕ ಸಬಲತೆ, ಕಂಪ್ಯೂಟರೀಕರಣ, ಜೋಡಿ ನಮೂದು ಲೆಕ್ಕ ಪದ್ಧತಿಗಳು ಪರಿಸರ ನಿರ್ವಹಣೆಗಳು, ಜನ ಸಹಭಾಗಿತ್ವದ ಗ್ರಾಮ/ವಾರ್ಡ ಸಭೆಗಳು ಸ್ವ-ಸಹಾಯ ಗುಂಪುಗಳ ಹಾಗೂ (ಸ್ತ್ರಿ-ಶಕ್ತಿ) ಗುಂಪುಗಳಿಗೆ ಕಾಮಗಾರಿಗಳನ್ನು ಕೊಡುವ ಮೂಲಕ ಮಹಿಳಾ ಸಂಘಗಳ ಆರ್ಥಿಕ ಸಬಲತೆ, ಗ್ರಾಮ ಪಂಚಾಯತಗಳ ಲೆಕ್ಕ ಪರಿಶೋಧನೆ, ಮುಂತಾದ ಹತ್ತು-ಹಲವಾರು ವೈವಿಧ್ಯಮಯ ವಿಶೇಷತೆಗಳ ಮೂಲಕ ಗ್ರಾಮ ಸ್ವರಾಜ್ ಯೋಜನೆ ಕರ್ನಾಟಕ ರಾಜ್ಯದ ಹೆಮ್ಮೆಯ ಯೋಜನೆಯೆಂದೆ ಹೇಳಿಕೊಳ್ಳಬಹುದು. ಯೋಜನೆಯ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳು ಹಾಗೂ ಹಣಕಾಸು ನಿರ್ವಹಣೆ ತೊಡಕುಗಳು ಇನ್ನಿತರೆ ವಿಷಯಗಳಿಗೆ ಪರಿಹಾರ ಸೂಚಿಸುವಲ್ಲಿ ಗ್ರಾಮ ಸ್ವರಾಜ್ ಯೋಜನಾ ಕಛೇರಿಯು ಸನ್ನದ್ಧವಾಗಿರುತ್ತದೆ.

ಗ್ರಾಮ ಸ್ವರಾಜ್ ಕೇವಲ ಒಂದು ಸೀಮಿತವಾದ ಯೋಜನೆಯಾಗಿರದೆ. ಕರ್ನಾಟಕ ಪಂಚಾಯತ ರಾಜ್ ಅಧಿನಿಯಮಗಳಡಿ ವಹಿಸಿದ ಪ್ರಕಾರ್ಯಗಳು ಅಧಿಕಾರ ಹಾಗೂ ಕರ್ತವ್ಯಗಳನ್ನು ನಿಭಾಯಿಸುವದರ ಜೊತೆಗೆ, ಸೇವೆಯನ್ನು ನೋಡಿಕೊಳ್ಳುವದು ಯೋಜನೆಯ ಉದ್ದೇಶವಾಗಿದೆ. ಸಾರ್ವಜನಿಕರ ಭಾಗೀತ್ವದಲ್ಲಿ ಯೋಜನೆಗಳ ತಯ್ಯಾರಿಕೆ, ಮಾರ್ಗಸೂಚಿಗಳನ್ವಯ ಅನುಷ್ಠಾನದ ಬಗ್ಗೆ ಖಾತ್ರಿ ಪಡಿಸುವದು ಗ್ರಾಮ ಸ್ವರಾಜ್ ಗುರಿಯಾಗಿದೆ. ಜನರಿಗೆ ಮಾಹಿತಿ ನೀಡುವದರ ಜೊತೆಗೆ ಆಡಳಿತದಲ್ಲಿ ಪಾರದರ್ಶಕತೆ ಸ್ಥಳೀಯ ಜನರ ಹೊಣೆಗಾರಿಕೆಯನ್ನು ಹೆಚ್ಚಿಸುವ ಮೂಲಕ ಅಭಿವೃದ್ಧಿಯನ್ನು ಖಾತರಿಪಡಿಸುವದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ನಮ್ಮ ತಾಲೂಕಿನಲ್ಲಿ 2006-07/2007-08/2008-09 ಹಾಗೂ 2009-10 ರಲ್ಲಿ ಒಟ್ಟು 939 ವಿವಿಧ ಕಾಮಗಾರಿಗಳನ್ನು ಕ್ರೀಯಾ ಯೋಜನೆಯಲ್ಲಿ ಅಳವಡಿಸಿ ಈ ವರೆಗೆ 899 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ 40 ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. 2010-11 ನೇ ಸಾಲಿನ ಕಾಮಗಾರಿಗಳ ಟೆಂಡರ್ ಕರೆಯಲಾಗಿದೆ. ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇಲಾಖೆಯಿಂದ ಈ ವರೆಗೆ 1001.210 ಲಕ್ಷಗಳು ಬಿಡುಗಡೆಯಾಗಿ ಈ ವರೆಗೆ 904.616 ಲಕ್ಷಗಳು ವಿನಿಯೋಗವಾಗಿದೆ. ವರ್ಷವಾರು ಅನುದಾನದಲ್ಲಿ ಶೇ 20% ಕ್ಕಿಂತ ಹೆಚ್ಚು ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡಗಳ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.

❑

### ರೈತ - ಬೆನ್ನೆಲುಬು

ರೈತನೇ ಈ ದೇಶದ ಬೆನ್ನೆಲುಬು  
ಅದು ಮುರಿದಿದೆ ಅವನಿಗೀಗ  
ಬಾರದೆ ಮಳೆ  
ಬೆಳೆಯಲಿಲ್ಲ ಬೆಳೆ.  
ತುಂಬಿದೆ ಮನೆಯ ತುಂಬ ಸಾಲದ ಹೊರೆ  
ಇದು ತಂದಿದೆ ಅವನಿಗೆ ದುಖಃದ ತೊರೆ.  
ತಂದನು ವಿಷದ ಸೀಸೆಯ  
ಪಡೆದನು ತೃಪ್ತಿಯ ಸಾವ.

– ಇನಾಯತ್ ಪಾಷ. ಎಸ್,

### ಆಸ್ತಿ ಜವಾಬ್ದಾರಿ ಪಟ್ಟಿ

ನನ್ನಿಂದ ತಿಳಿಯುವುದು ವಾರ್ಷಿಕಾಂತ್ಯದ  
ಆಸ್ತಿ ಮತ್ತು ಜವಾಬ್ದಾರಿಯ ನೋಟ  
ಕೊಡ ತೆಗೆದುಕೊಳ್ಳುವ ಬಾಕಿಗಳು  
ನಾ ಪ್ರಸ್ತುತ ಪಡಿಸುವೆನು ನಿನ್ನ ಸ್ಥಿತಿಗತಿಯನ್ನು  
ನಾನೇ ನಿನ್ನ ತಲ-ತಲಾಂತರದ ಕೊಂಡಿ

– ಜಯ್ಯಣ್ಣ  
ಯೋಜನಾ ಲೆಕ್ಕಪತ್ರ ಸಮಾಲೋಚಕರು.

# ಗ್ರಾಮ ಸ್ವರಾಜ್ – ಮಾಹಿತಿ ಭಂಡಾರ

– ಸತೀಶ್. ಎಸ್ *

ಗ್ರಾಮ ಸ್ವರಾಜ್ ಎಂಬುದು ಬರಿ ಯೋಜನೆಯಲ್ಲ
ಮಾಹಿತಿಗಳ ಭಂಡಾರ
ಶುರುವಾಗಿದ್ದು 2006ರಲ್ಲೆ ಆದರೂ
ಹಲವು ಭಗೀರಥರಿಹರು ಇದರ ಬೆಳವಣಿಗೆಗೆ

ಶುರುವಾದಾಗ ಯಾರಿಗೂ ತಿಳಿದಿರಲಿಲ್ಲ ಇದರ ಬಗೆಗೆ
ಅನಂತರ ಬಾಯ್ ಮಾತಾಯ್ತು ಅಂತರ್ಜಾಲದಲ್ಲೂ ಸಹ
ಪಂಚತಂತ್ರ ಎಂಬ ತಂತ್ರಾಂಶದಿಂದ

ಸಾಲ ನೀಡುವವರು ವಿಶ್ವಬ್ಯಾಂಕ್ ಎಂಬ
ಮಹಾ ಕುಬೇರ
ನೀಡುತ್ತಿರುವುದು ಸಾಲವೇ ಆದರೂ ತೀರಿಸಬೇಕು
ಇದನು ಕರ–ಕಂದಾಯ ಅಲ್ಪಮೊತ್ತದಿಂದ

ಅನುದಾನ ಸಾಲವೇ ಆದರೂ ಯೋಜನೆ
ನೀಡಿರುವುದು ಹಲವರಿಗೆ ಕೆಲಸವನು
ಕೊಂಚವಾದರೂ ನಿಲ್ಲಿಸಿಹುದು
ನಿರುದ್ಯೋಗ ಎಂಬ ಪೆಡಂಭೂತವನು

ಕಲಿಯುತಿಹೆವು ಇದರ ಜೊತೆ ಹೊಸ ವಿಷಯವನು
ಕಾರ್ಯಾಚರಣೆ, ಹಣಕಾಸು, ಸಂಗ್ರಹಣೆ, ಮಾಹಿತಿ
ಎಂಬ ವಿಷಯವನು, ಅಲ್ಪವಾದರೂ ತಿಳಿಯಬೇಕು
ಈ ಮಾಹಿತಿ ಎಂಬ ಭಂಡಾರವನು.

❑

* ಕಾರ್ಯನಿರ್ವಾಹಕ ಸಹಾಯಕ, ಗ್ರಾ.ಸ್ವಯೋ ಕೇಂದ್ರ ಕಛೇರಿ.

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ : 10 (ಭಾಗ 01) ಗ್ರಾಸ್ವಯೋ 2008

ಗ್ರಾಮ ಸ್ವರಾಜ್ ಯೋಜನಾ ಕಛೇರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ನಂ. 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ,
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.
ದಿನಾಂಕ : 08–06–2009.

ಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತಿ,
ರಾಜ್ಯದ ಎಲ್ಲಾ 29 ಜಿಲ್ಲೆಗಳು.

ಮಾನ್ಯರೆ,

**ವಿಷಯ** : ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಿಸಲಾಗುತ್ತಿರುವ ಸಾಮರ್ಥ್ಯ ಸೌಧ ಕೇಂದ್ರಗಳಿಗೆ ಅಗತ್ಯವಿರುವ ಪರಿಕರಗಳನ್ನು ಸಂಗ್ರಹಿಸುವ ಕುರಿತು.

* * *

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ವಿಶ್ವಬ್ಯಾಂಕ್ ಆರ್ಥಿಕ ನೆರವಿನಿಂದ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ನಿರ್ಮಾಣ ಮಾಡಲಾಗುತ್ತಿರುವ ಸಾಮರ್ಥ್ಯ ಸೌಧಗಳಿಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧವನ್ನು ತಿಳಿಸಿದ ಪರಿಕರಗಳನ್ನು ಸಂಗ್ರಹಿಸುವ ಅಗತ್ಯವಿರುತ್ತದೆ. ಪ್ರತಿ ಸಾಮರ್ಥ್ಯ ಸೌಧ ಕೇಂದ್ರಕ್ಕೆ ಈ ಪರಿಕರಗಳ ವೆಚ್ಚ ರೂ. 1,82,400/– (ರೂಪಾಯಿ ಒಂದು ಲಕ್ಷದ ಎಂಬತ್ತೆರಡು ಸಾವಿರದ ನಾಲ್ಕು ನೂರು ಮಾತ್ರ) ಗಳೆಂದು ಅಂದಾಜಿಸಲಾಗಿದೆ. ಅನುಬಂಧದಲ್ಲಿ ತಿಳಿಸಿದ ಪರಿಕರಗಳನ್ನು ಸಂಗ್ರಹಿಸುವ ಜವಬ್ದಾರಿಯನ್ನು ಜಿಲ್ಲಾ ಪಂಚಾಯತಿಗಳಿಗೆ ವಹಿಸಿಕೊಡಲಾಗುತ್ತಿದೆ. ಅದರಂತೆ ಆಯಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಯನ್ನು ಸದಸ್ಯರನ್ನಾಗಿ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಲೆಕ್ಕಾಧಿಕಾರಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಒಳಗೊಂಡ ಸಾಮಥ್ಯ ಸೌಧ ಕೇಂದ್ರಗಳಿಗೆ ಪರಿಕರಗಳನ್ನು ಸಂಗ್ರಹಿಸುವ ಸಮಿತಿಯ ಕರ್ನಾಟಕ ಸಾರ್ವನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000 ಮತ್ತು ಇದಕ್ಕೆ ಕಾಲ ಕಾಲಕ್ಕೆ ಮಾಡಲಾದ ತಿದ್ದುಪಡಿಗಳು ಹಾಗೂ ಗ್ರಾಮ ಸ್ವರಾಜ್ ಯೋಜನೆಯ ಸಂಗ್ರಹಣಾ ನಿಯಮಗಳ ಅನುಸಾರ ಮೇಲೆ ತಿಳಿಸಿದ ಅಂದಾಜು ಮೊತ್ತದಲ್ಲಿ ಪರಿಕರಗಳನ್ನು ಸಂಗ್ರಹಿಸುವ ಕ್ರಮವಹಿಸಲು ಸೂಚಿಸಿದೆ. ಈ ಅನುದಾನವನ್ನು ಗ್ರಾಮ ಸ್ವರಾಜ್ ಯೋಜನಾ ಲೆಕ್ಕ ಶೀರ್ಷಿಕೆಯಡಿ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆಗೊಳಿಸಲಾಗುವುದು.

ನಿಮ್ಮ ವಿಶ್ವಾಸಿ,

**(ಪಿ. ರವಿಕುಮಾರ್)**
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಅನುಬಂಧ

ಗ್ರಾಮ ಸ್ವರಾಜ್ ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಸಾಮರ್ಥ್ಯ ಸೌಧ ಕೇಂದ್ರಗಳಿಗೆ ಅಗತ್ಯವಿರುವ ಪರಿಕರಗಳ ವಿವರ.

| ಕ್ರ. ಸಂ. | ಪರಿಕರಗಳ ವಿವರ | ಸಂಖ್ಯೆ |
|---|---|---|
| 1 | LCD TV (TFT Moniter) 42 inches | 01 |
| 2 | DVD Player | 01 |
| 3 | Voltage Stabilizer | 01 |
| 4 | Almera with locker 4.50’ X 2.75’ | 01 |
| 5 | Solar UPS/Generator which provides 8 hrs back up | 01 |
| 6 | Necessary Electrical wiring, earthing | As per requirement |
| 7 | Providing dark colour Curtains to Windows and Doors to regulate light | As per requirement |
| 8 | Digital camera with Audio and Video and USB adopter For recording | 01 |
| 9 | Steel Table with drawers (one drawer and one locker with laminator top) | 01 |
| 10 | Molded rubber cotton covers | As per requirement |
| 11 | Web Camera | 01 |

Total cost includes transportation, loading, unloading, installation, testing and commissioning charges at taluk level.

(ಪಿ. ರವಿಕುಮಾರ್)
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಕ್ರ. ಸಂ. : ಗ್ರಾಅಪ : 116 : ಗ್ರಾ.ಸ್ವ.ಯೋ. : 2010

ಗ್ರಾಮ ಸ್ವರಾಜ್ ಯೋಜನಾ ಕಛೇರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ನಂ. 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ,
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052.
ದಿನಾಂಕ : 24–12–2010.

ಇವರಿಗೆ,

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲ್ಲೂಕು ಪಂಚಾಯತಿ,
ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 39 ತಾಲ್ಲೂಕುಗಳು.

ಮಾನ್ಯರೆ,

**ವಿಷಯ** : ಗ್ರಾಮ ಪಂಚಾಯತಿಗಳಲ್ಲಿ ಕರ ಸಂಗ್ರಹಣೆಯ ಪ್ರಮಾಣವನ್ನು ಹೆಚ್ಚಿಸುವ ಕುರಿತು.

**ಉಲ್ಲೇಖ** : ವಿಕೇಂದ್ರೀಕೃತ ವಿಶ್ಲೇಷಣಾ ಕೋಶದ ವತಿಯಿಂದ ನಡೆಸಲಾದ ಅಧ್ಯಯನ ವರದಿಯಲ್ಲಿ ನಮೂದಿಸಿದಂತೆ.

* * *

ಮೇಲ್ಕಾಣಿಸಿ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳ್ಳುತ್ತಿರುವ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯಿತಿಗಳ ಪೈಕಿ ಆಯ್ದ ಕೆಲವು ಗ್ರಾಮ ಪಂಚಾಯತಿಗಳಲ್ಲಿ ವಿಕೇಂದ್ರೀಕತ ವಿಶ್ಲೇಷಣಾ ಕೋಶದ ವತಿಯಿಂದ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ನಡೆಸಲಾದ ಅಧ್ಯಯನದ ವರದಿಯಲ್ಲಿ ನಮೂದಿಸಿದಂತೆ ಗ್ರಾಮ ಪಂಚಾಯಿತಿಗಳಲ್ಲಿನ ಕರ ಸಂಗ್ರಹಣೆಯ ಪ್ರಮಾಣವು ತೀರಾ ಕೆಳಮಟ್ಟದಲ್ಲಿದ್ದು ಇದನ್ನು ವೃದ್ಧಿಸಿಕೊಳ್ಳಲು ವಿಶೇಷ ಅಭಿಯಾನಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ಮಾಡಿರುತ್ತಾರೆ.

ಆದುದರಿಂದ ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳ್ಳುತ್ತಿರುವ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯತಿಗಳಲ್ಲಿ ಕರ ಸಂಗ್ರಹಣೆಯ ವಿಶೇಷ ಅಭಿಯಾನಗಳನ್ನು ಹಮ್ಮಿಕೊಳ್ಳುವುದರ ಮೂಲಕ ಗ್ರಾಮ ಪಂಚಾಯತಿಗಳ ಕರ ಸಂಗ್ರಹಣೆ ಪ್ರಮಾಣವನ್ನು ವೃದ್ಧಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಇದು ಪ್ರಮುಖವಾದ ವಿಷಯವಾಗಿದ್ದು ಆಧ್ಯತೆಯ ಮೇರೆಗೆ ಪರಿಗಣಿಸುವುದು.

ತಮ್ಮ ವಿಶ್ವಾಸಿ,

**(ಡಾ. ಎಂ.ಆರ್. ಏಕಾಂತಪ್ಪ)**
ಮುಖ್ಯಸ್ಥರು, ಗ್ರಾ.ಸ್ವ.ಯೋ. (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಕ್ರ. ಸಂ. : ಗ್ರಾಅಪ : 116 : ಗ್ರಾ.ಸ್ವ.ಯೋ. : 2010

ಗ್ರಾಮ ಸ್ವರಾಜ್ ಯೋಜನಾ ಕಛೇರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ನಂ. 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ,
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052.
ದಿನಾಂಕ : 24–12–2010.

ಇವರಿಗೆ,

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲ್ಲೂಕು ಪಂಚಾಯತಿ,
ಗ್ರಾಮ ಸ್ವರಾಜ್ ಯೋಜನಾ ವ್ಯಾಪ್ತಿಯ 39 ತಾಲ್ಲೂಕುಗಳು.

ಮಾನ್ಯರೆ,

**ವಿಷಯ** : ಗ್ರಾಮ ಪಂಚಾಯತಿಗಳ ಮಾಸಿಕ ಸಾಮಾನ್ಯ ಸಭೆಗಳನ್ನು ನಿಯಮಿತವಾಗಿ ನಡೆಸುವ ಕುರಿತು.

**ಉಲ್ಲೇಖ** : ವಿಕೇಂದ್ರೀಕೃತ ವಿಶ್ಲೇಷಣಾ ಕೋಶದ ವತಿಯಿಂದ ನಡೆಸಲಾದ ಅಧ್ಯಯನ ವರದಿಯಲ್ಲಿ ನಮೂದಿಸಿದಂತೆ.

* * *

ಮೇಲ್ಕಾಣಿಸಿ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳ್ಳುತ್ತಿರುವ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯಿತಿಗಳ ಪೈಕಿ ಆಯ್ದ ಕೆಲವು ಗ್ರಾಮ ಪಂಚಾಯತಿಗಳಲ್ಲಿ ವಿಕೇಂದ್ರೀಕತ ವಿಶ್ಲೇಷಣಾ ಕೋಶದ ವತಿಯಿಂದ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ನಡೆಸಲಾದ ಅಧ್ಯಯನದ ವರದಿಯಲ್ಲಿ ನಮೂದಿಸಿದಂತೆ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಮಾಹೆ ನಡೆಸುವ ಸಾಮಾನ್ಯ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿಲ್ಲ ಎಂಬುದಾಗಿ ತಿಳಿಸಲಾಗಿದೆ.

ಆದುದರಿಂದ ಕರ್ನಾಟಕ ಪಂಚಾಯತ್ ರಾಜ್ ಆಧಿನಿಯಮ 1993ರ ಕಲಂ 52ರಲ್ಲಿ ತಿಳಿಸಿದಂತೆ ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ಪಂಚಾಯತಿಗಳಲ್ಲಿ ತಪ್ಪದೇ ಕಡ್ಡಾಯವಾಗಿ ಪ್ರತಿ ಮಾಹೆ ಸಾಮಾನ್ಯ ಸಭೆಗಳನ್ನು ನಡೆಸತಕ್ಕದ್ದು ಎಂದು ಗ್ರಾಮ ಪಂಚಾಯತಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲು ತಿಳಿಸಲಾಗಿದೆ ಹಾಗೂ ಕೈಕೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ನೀಡುವುದು.

ತಮ್ಮ ವಿಶ್ವಾಸಿ,

**(ಡಾ. ಎಂ.ಆರ್. ಏಕಾಂತಪ್ಪ)**
ಮುಖ್ಯಸ್ಥರು, ಗ್ರಾ.ಸ್ವ.ಯೋ. (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಕ್ರ. ಸಂ. : ಗ್ರಾಅಪ : 257 : ಗ್ರಾ.ಸ್ವ.ಯೋ. : 2010

ಗ್ರಾಮ ಸ್ವರಾಜ್ ಯೋಜನಾ ಕಛೇರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ನಂ. 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ,
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052.
ದಿನಾಂಕ : 22–02–2011.

## ಸುತ್ತೋಲೆ

**ವಿಷಯ** : ಪಂಚತಂತ್ರ ಮತ್ತು ಕಾಮಗಾರಿ ಉಸ್ತುವಾರಿ ವ್ಯವಸ್ಥೆ ಗಣಕ ತಂತ್ರಾಂಶಗಳಲ್ಲಿ ಮಾಹಿತಿಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಆಗಿಂದಾಗ್ಗೆ ಕಾಲೋಚಿತಗೊಳಿಸುವ ಬಗ್ಗೆ.

**ಉಲ್ಲೇಖ** : ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರು ಹೊರಡಿಸಿರುವ ಸಮ ಸಂಖ್ಯೆ ಸುತ್ತೋಲೆ, ದಿನಾಂಕ : 30.12.2010

* * *

ಪಂಚತಂತ್ರ ಮತ್ತು ಕಾಮಗಾರಿ ಉಸ್ತುವಾರಿ ವ್ಯವಸ್ಥೆ (Works Monitoring System) ಎಂಬ ಹೆಸರಿನ ಗಣಕ ತಂತ್ರಾಂಶಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಅಭಿವೃದ್ಧಿಪಡಿಸಿ ನಿರ್ವಹಿಸಲಾಗುತ್ತಿರುವುದು ಸರಿಯಷ್ಟೆ. ಉಲ್ಲೇಖದ ಸುತ್ತೋಲೆಯಲ್ಲಿ ತಿಳಿಸಿದಂತೆ, ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾಮಗಾರಿಗಳ ಸಂಪೂರ್ಣ ಮಾಹಿತಿಯನ್ನು ದಿನಾಂಕ : 31.01.2011ರೊಳಗೆ ಸಂಬಂಧಿಸಿದ ಕಿರಿಯ/ಸಹಾಯಕ ಅಭಿಯಂತರರ ಮೂಲಕ ಕಾಮಗಾರಿ ಉಸ್ತುವಾರಿ ವ್ಯವಸ್ಥೆ – ಗಣಕ ತಂತ್ರಾಂಶದಲ್ಲಿ ತಪ್ಪದೇ ಅಳವಡಿಸಲು ಮತ್ತು ಆಗಿಂದಾಗ್ಗೆ ಕಾಲೋಚಿತಗೊಳಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿತ್ತು. ಈ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಮೇಲೆ ತಿಳಿಸಿದ ಅಭಿಯಂತರರಿಗೆ ತಂತ್ರಾಂಶದ ಬಳಕೆಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಪಾಸ್‌ವರ್ಡ್‌ಗಳನ್ನು ಒದಗಿಸುತ್ತಾ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ಜನವರಿ 2011ರ ಮಾಹೆಯ ಎರಡನೇ ವಾರದೊಳಗೆ ನಡೆಸಲು ತಿಳಿಸಲಾಗಿತ್ತು.

ಮುಂದುವರೆದು, ಪಂಚತಂತ್ರ ಮತ್ತು ಕಾಮಗಾರಿ ಉಸ್ತುವಾರಿ ವ್ಯವಸ್ಥೆ – ಗಣಕ ತಂತ್ರಾಂಶಗಳ ನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಯಥಾವತ್ತಾಗಿ ಅನುಸರಿಸುವಂತೆ ತಿಳಿಸಲು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಇವರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

1. ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡಿರುವ ಚಾಲ್ತಿ ಸಾಲಿನ ಕಾಮಗಾರಿಗಳ ಮಾಹಿತಿಯನ್ನು ಮಾತ್ರ ಕಾಮಗಾರಿ ಉಸ್ತುವಾರಿ ವ್ಯವಸ್ಥೆ – ಗಣಕ ತಂತ್ರಾಂಶದಲ್ಲಿ ಭರ್ತಿ ಮಾಡಬೇಕು. ಈ ಕಾರ್ಯವನ್ನು ಸಂಬಂಧಿಸಿದ ಕಿರಿಯ/ಸಹಾಯಕ ಅಭಿಯಂತರರು ಮಾಡಬೇಕು. ಪ್ರಾರಂಭಿಸದಿರುವ ಕಾಮಗಾರಿಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಭರ್ತಿ ಮಾಡತಕ್ಕದ್ದಲ್ಲ.
2. 2010–11ನೇ ಆರ್ಥಿಕ ಸಾಲಿನ ಲೆಕ್ಕ ಮರು ಸಮನ್ವಯಗೊಳಿಸಲು ಅನುಕೂಲವಾಗುವಂತೆ ತಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳ ಜಮಾ ಖರ್ಚುಗಳ ವಿವರಗಳನ್ನು ಪಂಚತಂತ್ರ – ಗಣಕ ತಂತ್ರಾಂಶದಲ್ಲಿ ಭರ್ತಿ ಮಾಡುವುದು.
3. ವರ್ಗ – 1 ಮತ್ತು ವರ್ಗ–2ಕ್ಕೆ ಪ್ರತ್ಯೇಕ ಬ್ಯಾಂಕ್ ಖಾತೆಗಳು ಇದ್ದು ಒಂದನ್ನು ರದ್ದುಪಡಿಸಿ ಒಂದೇ ಖಾತೆ ನಿರ್ವಹಿಸಬೇಕೆಂದು ಸೂಚಿಸಲಾಗಿದೆ.
4. ಪಂಚತಂತ್ರ – ಗಣಕ ತಂತ್ರಾಂಶದಲ್ಲಿ ಮಾಡಲಾಗುವ ಎಲ್ಲಾ ಭರ್ತಿಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿಯೇ ನಿರ್ವಹಿಸಬೇಕು.
5. ಗ್ರಾಮ ಪಂಚಾಯತಿಗಳಲ್ಲಿ ಪಂಚತಂತ್ರ – ಗಣಕ ತಂತ್ರಾಂಶದ ಅಳವಡಿಕೆ ಮತ್ತು ನಿರ್ವಹಣೆಗೆ ಪೂರಕವಾಗಿ ಅಗತ್ಯ ಸೌಲಭ್ಯಗಳಾದ ಗಣಕಯಂತ್ರಗಳ ಅಳವಡಿಕೆ, ಅಂತರ್‌ಜಾಲದ ಡೇಟಾ ಕಾರ್ಡ್ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವುದು.
6. ಮೇಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪಂಚತಂತ್ರ ಮತ್ತು ಕಾಮಗಾರಿ ಉಸ್ತುವಾರಿ ವ್ಯವಸ್ಥೆ (Works Monitoring System) – ಗಣಕ ತಂತ್ರಾಂಶಗಳ ವ್ಯವಸ್ಥಿತ ಅನುಷ್ಠಾನಕ್ಕೆ ಶ್ರಮಿಸಬೇಕೆಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲು ಕೋರಿದೆ.

(ಟಿಪ್ಪಣಿ ಸರ್ಕಾರದ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಂದ ಅನುಮೋದಿಸಲ್ಪಟ್ಟಿದೆ)

(ಡಾ. ಎಂ.ಆರ್. ಏಕಾಂತಪ್ಪ)
ಮುಖ್ಯಸ್ಥರು, (ಪ್ರ), ಗ್ರಾಮ ಸ್ವರಾಜ್ ಯೋಜನೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆ



ವಿಶ್ವ ಬ್ಯಾಂಕ್ ಪ್ರತಿನಿಧಿಗಳು ಕುಣಿಗಲ್ ತಾಲ್ಲೂಕಿನ ಯಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪರಿವೀಕ್ಷಣೆ ಸಂದರ್ಭದಲ್ಲಿ ಗಿಡ ನೆಡುತ್ತಿರುವುದು



ಗ್ರಾಮಸ್ವರಾಜ್ ಯೋಜನೆಯಡಿ ಬಿಜಾಪುರ ಜಿಲ್ಲೆಯ ದೇವಿನಾಳ ಗ್ರಾಮದಲ್ಲಿ ನಿರ್ಮಾಣಗೊಂಡ ಬಸ್ ನಿಲ್ದಾಣ



ಸಾಮರ್ಥ್ಯ ಅಭಿವೃದ್ಧಿಗಾಗಿ ನಿರ್ಮಾಣ ಹಂತದಲ್ಲಿರುವ 'ಸಾಮರ್ಥ್ಯ ಸೌಧ'

ಹಳ್ಳಿಗಳ ಸಾಮರ್ಥ್ಯ, ಸಬಲೀಕರಣದತ್ತ ದೃಢ ನಿಷ್ಠೆ
ಇದುವೇ ಗ್ರಾಮ ಸ್ವರಾಜ್ ಯೋಜನೆಯ ಕಾರ್ಯ ನಿಷ್ಠೆ

# KARNATAKA VIKASA : MARCH, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month





ಬೆಲೆ : 5 ರೂಪಾಯಿಗಳು


Despatcher

OFFICE OF THE CHIEF EDITOR, KARNATAKA VIKASA

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

Printed at : GEETANJALI GRAPHICS

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346